ಶ್ರೀ ಯು.ಆರ್. ಸಭಾಪತಿ :— ಅಧ್ಯಕ್ಷರೇ, ರಾಜ್ಯಪಾಲರ ಭಾಷಣವನ್ನು ನಾನು ಸಂಪೂರ್ಣ ವಿರೋಧಿಸಿ, ರಾಜ್ಯ ಸರ್ಕಾರ ಇನಷ್ಟು ಎಚ್ಚರಿಕೆಯಿಂದ ನಡೆಯಲಿ ಎಂದು ಹಾರೈಸಿ ನನ್ನೆರಡು ಮಾತುಗಳನ್ನು ಮುಗಿಸುತ್ತೇನೆ.

ಪ್ರಕಟಣೆ

ಅಧ್ಯಕ್ಷರು :— ಈ ದಿವಸ ಕಾರ್ಯಕಲಾಪಗಳ ಪಟ್ಟಿಯಲ್ಲಿರುವ ಸದನದಲ್ಲಿ ಉತ್ತರಿಸುವ ಪ್ರಶ್ನೆಗಳನ್ನು ದಿನಾಂಕ: 27-3-99 ಶನಿವಾರದ ಅಧಿವೇಶನದಂದು ತೆಗೆದುಕೊಳ್ಳಲಾಗುವುದು.

ಶ್ರೀ ಎಚ್.ಎನ್. ನಂಜೇಗೌಡ :— ಅಧ್ಯಕ್ಷರೇ, ನಾನೊಬ್ಬ ಅನ್‌ಅಟಾಚ್ಡ್ ಸದಸ್ಯ ನಿಮಗೇ ಅಟಾಚ್ಡ್. ನನಗೆ ಕೆಲಸಗಳಿವೆ, ನಾಡಿದ್ದು ಒಂದು ಸಮಾವೇಶ ಕರೆದಿದ್ದೇನೆ. ಇವತ್ತೇ ಮಾತನಾಡಲು ಅವಕಾಶ ಕೊಡಿ.

ಅಧ್ಯಕ್ಷರು :— ಆಗಬಹುದು.

+ ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) :— ಮಾನ್ಯ ಅಧ್ಯಕ್ಷರೇ ರಾಜ್ಯಪಾಲರ ಭಾಷಣದ ಮೇಲೆ ವಂದಾನಾ ನಿರ್ಣಯದ ಬಗ್ಗೆ ಚರ್ಚೆಯಲ್ಲಿ ಭಾಗವಹಿಸುವುದಕ್ಕೆ ತಾವು ಅವಕಾಶ ಮಾಡಿಕೊಟ್ಟಿದ್ದೀರಿ. ತಮಗೆ ಮೊಟ್ಟಮೊದಲನೆಯದಾಗಿ ನಾನು ಅಭಿನಂದನೆಗಳನ್ನು ಸಲ್ಲಿಸುವುದಕ್ಕೆ ಇಷ್ಟಪಡುತ್ತೇನೆ. ರಾಜ್ಯಪಾಲರ ಈಗಿನ ಭಾಷಣ ಇದು ತುಂಬಾ ಮಹತ್ವ ಪಡೆದಿದೆ ಎಂದು ನಾನು ಭಾವಿಸುತ್ತೇನೆ. ಏತಕ್ಕೆಂದರೆ ವಿಧಾನಮಂಡಲದಲ್ಲಿ ರಾಜ್ಯಪಾಲರ ಭಾಷಣ ಇದು ಕೊನೆಯ ಭಾಷಣ. ಕಳೆದ ನಾಲ್ಕೂವರೆ ವರ್ಷಗಳಿಂದ ಅನೇಕ ಭಾಷಣಗಳನ್ನು ರಾಜ್ಯಪಾಲರು ಮಾಡಿದ್ದಾರೆ. ಆ ನಾಲ್ಕು ಭಾಷಣದ ಪ್ರತಿ ಕೂಡ ನನ್ನ ಹತ್ತಿರ ಇದೆೊ. ಜೊತೆಗೆ ಹಿಂದಿನ ಈ ಸರ್ಕಾರದ ಸಾಧನೆಗಳೇನು, ಬರುವ ದಿನಗಳಲ್ಲಿ ಈ ಸರ್ಕಾರ ಏನು ಸಾಧನೆ ಮಾಡುತ್ತದೆ ಎನ್ನುವ ಅಂಶವನ್ನು ಕೂಡ ರಾಜ್ಯಪಾಲರು ಈ ಭಾಷಣದ ಸಂಬಂಧದಲ್ಲಿ ಪ್ರಸ್ತಾಪ ಮಾಡಬೇಕೆಂದು ನನಗೆ ಅನಿಸುತ್ತದೆ. ಏತಕ್ಕೆಂದರೆ ಕಳೆದ ವಿಧಾನಸಭಾ ಚುನಾವಣೆಗೆ ಮುಂದೆ ಎಲ್ಲಾ ರಾಜಕೀಯ ಪಕ್ಷಗಳೂ ಕೂಡ ಈ ರಾಜ್ಯದಲ್ಲಿ ಜನತೆಯ ಮುಂದೆ ಹೋಗಿ ನಮ್ಮ ನಮ್ಮ ಚುನಾವಣಾ ಪ್ರಣಾಳಿಕೆಯನ್ನು ನಾವು ಇಟ್ಟಿವು. ಈ ರಾಜ್ಯದ ಜನ ಜನತಾದಳವನ್ನು ಆರಿಸಿತು. ಈ ರಾಜ್ಯದ ಹಿತವನ್ನು ನೀವು ಕಾಪಾಡಿ, ಈ ರಾಜ್ಯದ ಸರ್ವ ಉನ್ನತಿಯನ್ನು ನೀವು ಮಾಡಬೇಕೆಂದು ಹೇಳಿ ಆಶಿರ್ವಾದ ಮಾಡಿದರು. ಅವರ ಪ್ರಣಾಳಿಕೆಯಲ್ಲಿ 94ರಲ್ಲಿ ಇಟ್ಟಂಥ ಒಂದು ಆಕರ್ಷಣೇಯವಾದ ಘೋಷಣೆ ಎಂದರೆ ಸ್ವಾಭಿಮಾನ, ಸಮೃದ್ಧ ಕರ್ನಾಟಕಕ್ಕಾಗಿ. ಎಂದು ಹೇಳಿದ್ದ ಚುನಾವಣಾ ಪ್ರಣಾಳಿಕೆ ಕೂಡ ಇದೆ. ಜೊತೆಗೆ ಕೆಲವು ವಿವರಣೆಯನ್ನು

ಕೂಡ ಕೊಟ್ಟಿದ್ದಾರೆ. ನೈಜ ಗ್ರಾಮ ಸ್ವರಾಜ್ಯ ಸ್ಥಾಪನೆಗಾಗಿ ಒಂದಂಶ. ಸ್ವಾವಲಂಬಿ ಸ್ವಚ್ಛ ಗ್ರಾಮಗಳಿಗಾಗಿ ಎರಡನೇ ಅಂಶ. ಹಳ್ಳಿ ಹೆದ್ದಾರಿ ಹಸಿರುಕಾರ್ಡ್ ಮೂರನೇ ಅಂಶ. ಅಂತ್ಯೋದಯ, ಗಂಗಾ ಕಲ್ಯಾಣ 4ನೇ ಅಂಶ. "ಜನನಿರ್ದಿಷ್ಟ ಜವಾಬ್ದಾರಿ ಸರ್ಕಾರಕ್ಕಾಗಿ" ಎಂದು ಹೇಳುತಾ ಮತ್ತೆ ಜನತಾದಳ ಈ ಘೋಷಣೆಯನ್ನು ಮಾಡಿದ್ದು ನಾವೆಲ್ಲರೂ ಕೂಡ ಗಮನಿಸಿದ್ದೇವೆ. ಹೀಗಾಗಿ ಸರ್ವ ಉನ್ನತಿ ಸಾಧಿಸಬಹುದು ಈ ಪಕ್ಷ ಎಂದು ಹೇಳಿ ಜನರು ಆಶೀರ್ವಾದ ಮಾಡಿದ ಸಂದರ್ಭದಲ್ಲಿ ಏನೇನು ನಡೆಸಿದ್ದಾರೆ ಎಂದು ಘಟನೆಗಳನ್ನು ನೋಡುವುದಕ್ಕೆ ಹೋದಾಗ ಇವರ ಕಚ್ಚಾಟದ ಬಗ್ಗೆ ಪ್ರಸ್ತಾಪ ಮಾಡುವುದಿಲ್ಲ. ಅವರೇ ಒಪ್ಪಿಕೊಳ್ಳುತ್ತಿದ್ದಾರೆ. ಮತ್ತೆ ಆ ಕಚ್ಚಾಟಕ್ಕೂ ಕೂಡ ಪ್ರಜಾ ತಂತ್ರದ ಒಂದು ಅವಕಾಶ ನಮಗೆ ಸಿಕ್ಕಿದೆ ಎನ್ನುವಂಥ ರಕ್ಷಾ ಕವಚವನ್ನು ಹಾಕಿಕೊಳ್ಳುತ್ತಾರೆ. ಅವರು ದಿನಾನು ಕಚ್ಚಾಡುವುದರ ಬಗ್ಗೆ ನನ್ನದೇನೂ ಅಭ್ಯಂತರವಿಲ್ಲ. ಅದು ಅವರ ಹಕ್ಕು. ಆದರೆ ನನಗೂ ಒಂದು ಹಕ್ಕು ಇದೆ. ಇವರ ನಾಲ್ಕು ಅಂಶಗಳನ್ನು ಪ್ರಸ್ತಾಪ ಮಾಡಬೇಕೆಂದು ನನ್ನ ಆಸೆ. ಇವರು ಉತ್ತರ ಕೊಡುವಾಗ ಹೇಳಬೇಕಾಗುತ್ತದೆ. ಮೂರು ಅಂಶಗಳು ಈ ಸರ್ಕಾರ ಮಾಡಿದ ಘಟನೆಗಳ ಒಂದು ಅಂಶ ಕಾಂಗ್ರೆಸ್ ಪಕ್ಷದಲ್ಲಿ ಆಗಿರುವ ಘಟನೆಗಳ ಬಗ್ಗೆ ಎತಕ್ಕೆಂದರೆ ಮೂರು ಅಂಶ, ನಾನೇನು ಈಗ ಪ್ರಸ್ತಾಪ ಮಾಡುವುದಕ್ಕೆ ಹೊರಟಿದ್ದೇನೆ ಇದು ಕೇವಲ ಇವರ ಪಕ್ಷಕ್ಕೆ ಸೀಮಿತವಾದ ಅಂಶವಲ್ಲ. ಮತ್ತು ಕಾಂಗ್ರೆಸ್‌ನ ವಿಚಾರವನ್ನು ನಾನೇನು ಪ್ರಸ್ತಾಪ ಮಾಡುವುದಕ್ಕೆ ಹೊರಟಿದ್ದೇನೆ ಅದೂ ಕೂಡ ಅವರ ಪಕ್ಷಕ್ಕೆ ಸೀಮಿತವಾದುದ್ದಲ್ಲ. ಮೊದಲನೆಯದು ಈ ರಾಜ್ಯ ಸರ್ಕಾರ ಇವರ ಕೈಯಲ್ಲಿ ಸಿಕ್ಕಾಗ ಇವರು ನಡೆದುಕೊಂಡಂಥ ಒಂದು ರೀತಿ, ಮುಖ್ಯಮಂತ್ರಿ ಸ್ಥಾನಕ್ಕೆ ಇವರು ಆರಿಸಿಕೊಂಡ ಒಂದು ಪ್ರಯತ್ನ, ಇಡೀ ವಿಧಾನಸಭೆಯನ್ನು ದೇವಾಲಯ ಎಂದು ಕರೆಯುತ್ತಿದ್ದಾರೆ. ಈ ದೇವಾಲಯದಲ್ಲಿ ನಡೆದ ಘಟನೆ ಇಡೀ ರಾಜ್ಯದ ಜನತೆಗೆ ನೋವಾಯಿತು. ಇಲ್ಲಿ ಗಾಜು ಪುಡಿಮಾಡಿ. ಇದು ಪಕ್ಷದ ಆಸ್ತಿಯಲ್ಲ. ಕುರ್ಚಿಗಳು ಮೇಜುಗಳು ಪುಡಿಯಾಯಿತು. ಹಿರಿಯ ರಾಜಕಾರಣಿಗಳಾದ ರಾಮಕೃಷ್ಣ ಹೆಗಡೆಯವರು ಒಂದು ಮಾತು ಹೇಳಿದರು. ಯಾರನ್ನೋ ಮುಖ್ಯಮಂತ್ರಿ ಮಾಡುವುದಕ್ಕೆ ಹೋಗಿ ನಾನು ಚಪ್ಪಲಿ ಏಟು ತಿಂದೆ ಎಂದರು. ಅದು ನನಗೆ ಸಂಬಂಧವಲ್ಲ. ಆದರೆ ಈ ಘಟನೆ ಬಗ್ಗೆ ಇವರು ಮುಖ್ಯಮಂತ್ರಿಯಾಗುತ್ತಿರುವ ಸಂದರ್ಭದಲ್ಲಿ ನಡೆದ ಘಟನೆ ಬಗ್ಗೆ ಕೋದಂಡರಾಮಯ್ಯನವರನ್ನು ಆಗ ನೇಮಕ ಮಾಡಿದರು ಒಂದು ವರದಿಯನ್ನು ಕೊಡಿ ಎಂದು ಹೇಳಿ. ಏಕೆಂದರೆ ಇಡಿ ರಾಜ್ಯ ತಲೆತಗ್ಗಿಸುವ ಹಾಗೆ ಮಾಡಿ ಬಿಟ್ಟರು ಕರ್ನಾಟಕವನ್ನು. ಇವರು ಯಾರನ್ನೋ ಮುಖ್ಯಮಂತ್ರಿ ಮಾಡುವುದಕ್ಕೆ ಒಂದು ಗೋಡೆ ಮಧ್ಯ ಸೇರಿಕೊಂಡು ಜನತಾದಳ ಶಾಸಕರು ಅವರ ಮನಸ್ಸಿನ ಭಾವನೆಯೋ ವೋಟಿನ ಮುಖಾಂತರ ಮಾಡಿಕೊಳ್ಳಬಹುದಿತ್ತು. ಆದರೆ ಬಡಿದಾಟ ಮಾಡಿ ಇಡಿ ದೇಶದ ಮುಂದೆ ಕರ್ನಾಟಕದ ಮರ್ಯಾದೆಯನ್ನು ತೆಗೆದಿದ್ದಾರೆ.

ಆ ಕೋದಂಡರಾಮಯ್ಯನವರ ವರದಿಯನ್ನು ಇವತ್ತಿನ ತನಕ ಸಹ ಏಕೆ ಬಹಿರಂಗ ಮಾಡಿಲ್ಲ? ಅದನ್ನು ಬಹಿರಂಗಮಾಡಬೇಕೆಂದು ನನ್ನದು ಒತ್ತಾಯ. ಎರಡನೆಯದು ನ್ಯಾಷನಲ್ ಹೈಸ್ಕೂಲ್ ಗ್ರೌಂಡ್‌ನಲ್ಲಿ ಇವರ ಪಕ್ಷದ ಒಂದು ಸಭೆ ನಡೆಯಿತು. ನನಗೆ ಅದಕ್ಕೂ ಅಭ್ಯಂತರವಿಲ್ಲ. ಆದರೆ ಒಬ್ಬ ಮಂತ್ರಿ ಹೇಳಿಕೆ ಕೊಟ್ಟರು. ಸನ್ಮಾನ್ಯ ಪಿ.ಜಿ.ಆರ್. ಸಿಂಧ್ಯಾರವರು ಚಪ್ಪಲಿ ಕಲ್ಲುಗಳಿಂದ ನನ್ನ ಮೇಲೆ ಹಲ್ಲೆಯಾಯಿತು. ಇದು ನೋವಿನ ಸಂಗತಿ. ಇದು ನಾನಷ್ಟೆ ಅಲ್ಲ, ಹಿರಿಯರಾದ ಸನ್ಮಾನ್ಯ ಬೈರೆಗೌಡರು ಉಪಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಪತ್ರವನ್ನು ಬರೆದಿದ್ದಾರೆ. ಆ ಪತ್ರದಲ್ಲಿ ಇಷ್ಟು ಹೇಳುತ್ತಾರೆ.

ಅಧ್ಯಕ್ಷರು :— ಆ ಕಾಪಿ ನಿಮ್ಮ ಕೈಗೆ ಸಿಕ್ಕಿದೆಯೇ?

ಶ್ರೀ ಕೆ.ಎಸ್. ಈಶ್ವರಪ್ಪ :— ಹೌದು ಸಾರ್ ಈ ಸರ್ಕಾರದಲ್ಲಿ ಏನು ಬೇಕಾದರೂ ತಂದುಕೊಡಬಹುದು. ಬರೀ ಪತ್ರವೊಂದೇ ಅಲ್ಲ. ನಾನೇನು ಹೇಳುವುದಕ್ಕೆ ಹೊರಟಿದ್ದೇನೆ ಎಂದರೆ...

ಮಾನ್ಯ ಸದಸ್ಯರು :— ಪಾರದರ್ಶಕ.

ಅಧ್ಯಕ್ಷರು ಪಾರದರ್ಶಕ ಅಲ್ಲ. ಇದು ಫಿಸಿಕ್ಸ್‌ನಲ್ಲಿ ಬರುವ ಟರ್ಮಿನಾಲಾಜೀಸ್. Transparent, Translucent, opaque ಒಪೆಕ್ ಎಂದರೆ ಏನೂ ಕಾಣದೆ ಇರುವುದು. & ಟ್ರಾನ್ಸ್‌ಲೂಸೆಂಟ್ ಎಂದರೆ ಸ್ವಲ್ಪ ಸ್ವಲ್ಪ ಮಂಜು ಮಂಜಾಗಿ ಕಾಣುವುದು. ಟ್ರಾನ್ಸ್‌ಪರೆಂಟ್ ಎಂದರೆ ಪೂರ್ಣ ಆ ಕಡೆಗೆ ಇರುವುದು. ಇದು ಮೂರು ಅಲ್ಲ. ಅದು ನಗ್ನ.

ಶ್ರೀ ಕೆ.ಎಸ್. ಈಶ್ವರಪ್ಪ :— ಮಾನ್ಯ ಶ್ರೀ ಸಿದ್ದರಾಮಯ್ಯನವರೇ, 19-3-99ನೇ ಶುಕ್ರವಾರ ಬೆಂಗಳೂರಿನ ನ್ಯಾಷನಲ್ ಹೈಸ್ಕೂಲ್ ಮೈದಾನದಲ್ಲಿ ನಡೆದ ರೈತರ ರ್‍ಯಾಲಿಯ ಸಮಾರಂಭದಲ್ಲಿ ಸಾರಿಗೆ ಸಚಿವರಾದ ಶ್ರೀ ಪಿಜಿಆರ್ ಸಿಂಧ್ಯಾರವರ ಮೇಲೆ ನಡೆದ ಹಲ್ಲೆಯನ್ನು ನಾವು ತೀವ್ರವಾಗಿ ಖಂಡಿಸುತ್ತೇವೆ. ವ್ಯಕ್ತಿಗಳ ದ್ವೇಷ ಅಸೂಯೆಗಳಿಂದ ಪರಿಣಾಮ ಭೀಕರವಾಗುತ್ತದೆ. ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಸಾಮೂಹಿಕ ನಾಯಕತ್ವದಲ್ಲಿ ಪ್ರಾಮಾಣಿಕ ಪ್ರಯತ್ನ ನಡೆಸಿದ್ದರೆ ಆ ಪ್ರತಿಭಟನಾ ರ್‍ಯಾಲಿ ಹೆಚ್ಚಿನ ಯಶಸ್ಸನ್ನು ಕಾಣಲು ಸಾಧ್ಯವಾಗುತಿತ್ತು. ಹಾಗಾದುದು ವಿಷಾದನೀಯ. ಪಕ್ಷ ಯಾರೊಬ್ಬ ವ್ಯಕ್ತಿಯ ಸೊತ್ತಲ್ಲ. ವ್ಯಕ್ತಿಗತ ಇಷ್ಟಾನಿಷ್ಟದ ಆಧಾರದ ಮೇಲೆ ಕಾರ್ಯಕ್ರಮಗಳು ರೂಪಿತವಾಗುವ ಬದಲು ಪಕ್ಷದ ವೇದಿಕೆಯಲ್ಲಿ ಚರ್ಚೆಯಾಗಿ ನಿರ್ಧಾರವಾಗುವುದು ಸೂಕ್ತ. ಹಾಗಾದಾಗ ಮಾತ್ರ ನಿನ್ನೆ ಅನುಭವಿಸಿದಂಥ ಮುಖಭಂಗವನ್ನು ಪಕ್ಷ ಎದುರಿಸುವುದು ತಪ್ಪುತ್ತದೆ. ಪಕ್ಷದಲ್ಲಿ ಪ್ರಜಾಸತ್ತಾತ್ಮಕ ಕಾರ್ಯನಿರ್ವಹಣೆ, ಸಾಮೂಹಿಕ ನಾಯಕತ್ವ

ಮತ್ತು ಏಕತೆಯನ್ನು ಪ್ರತಿಸ್ಥಾಪಿಸುವ ದೃಷ್ಟಿಯಿಂದ ಮತ್ತು ಪಕ್ಷದಲ್ಲಿ ಸಂವಿಧಾನೇತರ ಶಕ್ತಿಗಳ ಪ್ರಾಭಲ್ಯವನ್ನು ಅಂತ್ಯಗೊಳಿಸಿ ಹಿಂಸಾತ್ಮಕ ಪ್ರವೃತ್ತಿಗೆ ತಡೆಹಾಕುವ ದೃಷ್ಟಿಯಿಂದ ಕೂಡಲೇ ಹಿರಿಯ ನಾಯಕರ ಸಭೆಯನ್ನು ಕರೆಯಬೇಕಾಗಿ ಕೋರುತ್ತೇನೆ. ಪಿ.ಜಿ.ಆರ್. ಸಿಂಧ್ಯಾರವರ ಮೇಲೆ ಹಲ್ಲೆ ಮಾಡಿದ ಮತ್ತು ಇದಕ್ಕೆ ಪ್ರಚೋದನೆ ನೀಡಿದವರ ಮೇಲೆ ಸೂಕ್ತ ಶಿಸ್ತಿನ ಕ್ರಮ ಕೈಗೊಂಡು ಇಂಥ ಘಟನೆ ಪುನರಾವರ್ತನೆಯಾಗದಂತೆ ನೋಡಿಕೊಳ್ಳಬೇಕೆಂದು ಕೋರುತ್ತೇನೆ. ತಮ್ಮ ವಿಶ್ವಾಸಿ ಭೈರೇಗೌಡರು. ಕೊನೆಯ ಪ್ಯಾರಾ ಬಗ್ಗೆ ನನ್ನ ಒತ್ತಾಯ. ಪಿ.ಜಿ.ಆರ್. ಸಿಂಧ್ಯಾರವರ ಮೇಲೆ ಹಲ್ಲೆ ಮಾಡಿದ ಮತ್ತು ಇದಕ್ಕೆ ಪ್ರಚೋದನೆ ನೀಡಿದವರ ಮೇಲೆ ಸೂಕ್ತ ಶಿಸ್ತಿನ ಕ್ರಮ ಕೈಗೊಂಡು ಇಂಥ ಘಟನೆ ಪುನರಾವರ್ತನೆಯಾಗದಂತೆ ನೋಡಿಕೊಳ್ಳಬೇಕೆಂದು ಕೋರುತ್ತೇನೆ. ಏಕೆಂದರೆ ಮಂತ್ರಿಗಳ ಸ್ಥಿತಿಯೇ ಹೀಗಾದರೆ ಸಾಮಾನ್ಯ ಜನರ ಕಥೆಯೇನು? ಪೋಲೀಸ್ ರಕ್ಷಣೆ ನಮಗೆ ಸಿಕುತ್ತಿಲ್ಲ. ಕರ್ನಾಟಕ ರಾಜ್ಯದಲ್ಲಿ ಗೂಂಡಾರಾಜ್ಯ ನಡೆಯುತ್ತಿದೆಯೇ? ಒಬ್ಬ ಮಂತ್ರಿ ತನ್ನ ಜೀವವನ್ನು ರಕ್ಷಣೆ ಮಾಡಿಕೊಳ್ಳುವುದಕ್ಕೆ ಯೋಗ್ಯತೆ ಇಲ್ಲವೆಂದರೆ ಅವನು ಬದುಕುವುದಕ್ಕೆ ಅವಕಾಶ ಕೊಡುವುದಿಲ್ಲವೆಂದರೆ ಈ ಸರ್ಕಾರ ಇನ್ ಬದುಕಿದೆಯೇ ಒಂದು ನಾನು ಪ್ರಶ್ನೆ ಕೇಳುತ್ತೇನೆ. ಇದಕ್ಕೆ ಉತ್ತರವನ್ನು ಕೊಡಬೇಕಾಗುತ್ತದೆ. ಇದು ಇಡೀ ದೇಶಕ್ಕೆ ಕರ್ನಾಟಕ ಒಂದು ಮಾದರಿಯಾಗಿತ್ತು. ಈ ಸರ್ಕಾರ ಬರುವತನಕವೂ ಕೂಡ ಇಷ್ಟು ಬಹಿರಂಗವಾಗಿ ಯಾವುದೇ ಮಂತ್ರಿ ಮೇಲೆ ಹಲ್ಲೆಯಾಗಿರಲಿಲ್ಲ. ಕಾಂಗ್ರೆಸ್‌ನವರು ಅಧಿಕಾರ ನಡೆಸುತ್ತಿರುವ ಸಂದರ್ಭದಲ್ಲಿ ಒಳಗಡೆ ಬಂದು ಧರಣಿ ಮಾಡಿದರು. ಅದು ಅವರ ವೈಯಕ್ತಿಕ. ಚಪ್ಪಲಿ ಏಟುಗಳು. ಇದು ಖಂಡಿತಾ ಶೋಭೆ ತರುವ ವಿಚಾರವಲ್ಲ. ಇದರ ಬಗ್ಗೆ ಸೂಕ್ತ ಕ್ರಮ ಕೈಗೊಂಡು ರಾಜ್ಯದ ಜನತೆಯ ಕ್ಷಮೆ ಕೇಳಿ ಇನ್ನು ಮುಂದೆ ಯಾರು ಅದನ್ನು ಮಾಡಿದ್ದಾರೋ ಅವರನ್ನು ತಕ್ಷಣ ಹುಡುಕಿ. ಯಾರು ಪ್ರಚೋದನೆ ಕೊಟ್ಟರೋ ಅವರ ಬಗ್ಗೆ ಕೂಡ ಕ್ರಮವನ್ನು ಕೈಗೊಳ್ಳಬೇಕೆಂದು ತಮ್ಮ ಮುಖಾಂತರ ಒತ್ತಾಯ ಮಾಡುತ್ತೇನೆ. ಇದು ಎರಡನೆಯ ಘಟನೆ. ಮೂರನೇಯ ವಿಚಾರ ಹೇಳುತ್ತೇನೆ. ಏಕೆಂದರೆ ಏನೋ ಒಂದು ಉತ್ತರವನ್ನ ಕೊಟ್ಟುಕೊಂಡು ಹೋಗಬಹುದು. ಸನ್ಮಾನ್ಯ ಜೆ.ಹೆಚ್. ಪಟೇಲ್ ಅವರ ಬಗ್ಗೆ ನನಗೆ ಎಲ್ಲವನ್ನೂ ಟೀಕೆ ಮಾಡಬೇಕೆಂದಲ್ಲ. ಕೇವಲ ರಾಜಕಾರಣ ಮಾಡುತ್ತಿದ್ದಾರೆ ಎಂದು ನಾನು ಒಪ್ಪುವುದಿಲ್ಲ. ಕೆಲವು ವಿಚಾರಗಳಲ್ಲಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತಿದ್ದಾರೆ. ಉದಾಹರಣೆಗೆ ಕಾವೇರಿ ವಿಚಾರ. ಕಾವೇರಿ ವಿಚಾರ ಬಂದಾಗ ಅನೇಕ ಪಕ್ಷಗಳು ಅನೇಕ ರಾಜ್ಯಗಳು ಕಾವೇರಿಯನ್ನು ರೈತರ ನೀರಿನ ಬಗ್ಗೆ ಪ್ರಶ್ನೆ ಮಾಡಲಿಲ್ಲ. ಕಾವೇರಿಯನ್ನು ಅನೇಕ ವರ್ಷಗಳ ಕಾಲ ರಾಜಕಾರಣ ಮಾಡಿಕೊಳ್ಳುತ್ತಾ ಬಂದರು. ಆದರೆ ನಮ್ಮ ರಾಜ್ಯದ ಮುಖ್ಯಮಂತ್ರಿಗಳಾದ ಜೆ.ಎಚ್. ಪಟೇಲರು ಕಾವೇರಿಯನ್ನು ಕೇವಲ ರಾಜಕಾರಣಕ್ಕಾಗಿ ಮಾಡದೇನೇ ನೆಮ್ಮದಿಯನ್ನು ಶಾಂತಿಯನ್ನು ಕಾಪಾಡಬೇಕು

ಎನ್ನುವಂತಹ ವಿಚಾರದಲ್ಲಿ ಮಾನ್ಯ ಪ್ರಧಾನ ಮಂತ್ರಿಗಳ ಹತ್ತಿರ ಮಾತನಾಡಿದರು. ವಿರೋಧ ಪಕ್ಷವನ್ನು ಜೊತೆಗೆ ತೆಗೆದುಕೊಂಡು ಹೋಗಿ ಒಂದು ಸಮಾಧಾನವಾದ, ಶಾಂತಿಯನ್ನು ಕಾಪಾಡುವುದಕ್ಕೆ ಪ್ರಯತ್ನಮಾಡಿ ಯಶಸ್ವಿಯಾಗಿರುವುದಕ್ಕೆ ನಾನು ಅಭಿನಂದನೆಯನ್ನು ಸಲ್ಲಿಸುತ್ತೇನೆ. ಅದೇ ರೀತಿ ಅನೇಕ ರೈತರು, ಕಾರ್ಮಿಕರು, ಒಂದು ಖಾಸಗಿ ಸಕ್ಕರೆ ಕಾರ್ಖಾನೆಯಲ್ಲಿ ಸಮಸ್ಯೆ ಇರುವಂತಹ ಸಂದರ್ಭದಲ್ಲಿ ಕೇಂದ್ರದಿಂದ ಒಪ್ಪಿಗೆ ತೆಗೆದುಕೊಂಡು ರಾಜ್ಯ ಸರ್ಕಾರದ ಕೈಯಲ್ಲಿ ತೆಗೆದುಕೊಂಡಿದ್ದಾರೆ. ನಾನು ಅಭಿನಂದನೆ ಸಲ್ಲಿಸುತ್ತೇನೆ. ಅವರು ಶಿವಮೊಗ್ಗ ಸಕ್ಕರೆ ಕಾರ್ಖಾನೆ ಬಗ್ಗೆ ಮಾಡಿದ್ದಾರೆ. ಆದರೆ ಇವತ್ತು ನೇರವಾಗಿಯೂ ಹೇಳಿದರು. "ಒಬ್ಬ ಮಂತ್ರಿ ಒಂದು ಕೊಲೆ ಪ್ರಕರಣದಲ್ಲಿ ಸಿಕ್ಕಿರುವಂತಹ ಸಂದರ್ಭದಲ್ಲಿ ತೇಲಿಸಿ ಉತ್ತರ ಕೊಡುವ ಪ್ರಯತ್ನ ನಡೆಸಿದರೆ ನನಗೆ ಅನಿಸುತ್ತದೆ ಈ ರಾಜ್ಯದ ಜನರು ನಿಮ್ಮನ್ನು ಕ್ಷಮಿಸುವುದಿಲ್ಲ. XXXX ಎಂದು ತೀರ್ಮಾನ ಆಗುತ್ತದೆ. ಕೊಲೆಗಡುಕರಿಗೆ ರಕ್ಷಣೆ ಕೊಡುತ್ತಿರುವಂತಹ ಮುಖ್ಯಮಂತ್ರಿಗಳು, ಗೃಹಮಂತ್ರಿಗಳು ಎಂದು ತೀರ್ಮಾನ ಆಗುತ್ತದೆ."

ಅಧ್ಯಕ್ಷರು :— ನೀವು ನೋಟೀಸ್ ಕೊಡಬೇಕು. ಛಾರ್ಜ್ ಮಾಡಬೇಕಾದರೆ ನನಗೆ ತಿಳಿಸಿಬೇಕಲ್ಲಾ.

ಶ್ರೀ ಕೆ.ಎಸ್. ಈಶ್ವರಪ್ಪ :— ನಾನು ಹೆಸರು ಹೇಳಲಿಲ್ಲ. ಬೇಕಾದರೆ ಹೆಸರೂ ಹೇಳುತ್ತೇನೆ. ಅವರನ್ನು ಕಿತ್ತು ಹಾಕಿದರೆ ನನಗೆ ಸಂಭಂದ ಇಲ್ಲ. ಏಕೆಂದರೆ ಹೆಸರು ಹೇಳುತ್ತಾ ಕುಳಿತುಕೊಂಡರೆ ಆಗುವುದಿಲ್ಲ. ನಾನು ಕಳೆದ ಬಾರಿ ಒಂದು ಹೆಸರು ನಿಮ್ಮ ಮುಂದೆ ಹೇಳಿದೆ. ಲಾಭ ಏನು ಸಾರ್? ಏನಾಯಿತು? ಕೊಲೆ ಮಾಡುವುದಕ್ಕಿಂತ ತಪ್ಪಾ, ಹಾಗದರೆ ಹೆಸರು ಹೇಳಿ ಎಂದರೆ ನಾನು ಹೆಸರು ಹೇಳಿಬಿಡುತ್ತೇನೆ.

ಶ್ರೀ ಕೆ.ಎನ್. ನಾಗೇಗೌಡ :— ಪಾಯಿಂಟ್ ಆಫ್ ಆರ್ಡರ್ ಸಾರ್.

ಅಧ್ಯಕ್ಷರು :— ನಾನು ಹೇಳುವವರೆಗೆ ನಿಮ್ಮದು ಆರ್ಡರೂ ಇಲ್ಲಾ ಪಾಯಿಂಟೂ ಇಲ್ಲ.

ಶ್ರೀ ಕೆ.ಎನ್. ನಾಗೇಗೌಡ :— ಕ್ಷಮಿಸಿ ಸಾರ್. ಇಂಪಾರ್ಟೆಂಟ್ ಪೊಲಿಟಿಕಲ್ ಪಾರ್ಟಿ ಲೀಡರ್ ಮಾತನಾಡುತ್ತಿದ್ದಾರೆ, ಡಿಸ್ಟರ್ಬ್ ಮಾಡಬಾರದು, ಇವರಿಗೂ ಜವಾಬ್ದಾರಿ ಇದೆ ಎಂದು ನಾನು ತಿಳಿದುಕೊಂಡು ಹೇಳಲಿಲ್ಲ. ಮಾನ್ಯ ಈಶ್ವರಪ್ಪನವರು ಮಾತನಾಡುತ್ತಿದ್ದಾ ಮಂತ್ರಿಗಳು ಕೊಲೆಗಾರರು ಎಂದು ನೇರವಾಗಿ ಮಂತ್ರಿಗಳ ಹೆಸರು ಹೇಳದೆ ಪ್ರಸ್ತಾವ ಮಾಡಿದರು. ಒಬ್ಬ ವ್ಯಕ್ತಿ ಅಥವಾ ಮಂತ್ರಿಗಳ ಮೇಲೆ ಛಾರ್ಜ್‌ಸ್ ಮಾಡಿದ್ದಾರೆ.

XXXX ಈ ಪದಗಳನ್ನು ಅಧ್ಯಕ್ಷರ ಆದೇಶದ ಮೇರೆಗ ಕಡತದಿಂದ ತೆಗೆದುಹಾಕಲಾಗಿದೆ.

ಅವರ ಹತ್ತಿ ಕೊಲೆ ಛಾರ್ಜ ಶೀಟ್‌ನಲ್ಲಿ ಇದ್ದಾರ ಎಂಬ ಬಗ್ಗೆ ಏನಾದರೂ ಮಾಹಿತಿ ಇದ್ದರೆ ಆ ಮಾಹಿತಿ ಆಧಾರ ಇಟ್ಟುಕೊಂಡು ತಮಗೆ ನೋಟೀಸ್ ಕೊಟ್ಟು ಆ ಛಾರ್ಜಸ್ ಇದ್ದರೆ ಅವರು ಛಾರ್ಜ ಮಾಡಬಹುದು ಮಾಡಲಿ ನ್ಯಾಷನಲ್ ಲೀಡರ್ ಮಾತನಾಡುತ್ತಿದ್ದಾರೆ,. ಆದ್ದರಿಂದ ನಾವು ಮಧ್ಯೆ ಮಧ್ಯೆ ಎದ್ದು ಮಾತನಾಡುವುದು ಅಷ್ಟು ಚೆನ್ನಾಗಿ ಕಾಣಿಸುವುದಿಲ್ಲ. For his position, we have given full liberty.

ಅಧ್ಯಕ್ಷರು :— ನಿಮ್ಮ ವಾದವನ್ನು ಒಪ್ಪಿದ್ದೇನೆ.

ಡಾ: ಎಂ.ಪಿ. ಕರ್ಕಿ :— ವೈಯಕ್ತಿಕ ಅಪಾದನೆ ಮಾಡುವಾಗ ಮಾತ್ರ ಅವರಿಗೆ ನೋಟೀಸ್ ಕೊಟ್ಟು ಅವರು ಇರತಕ್ಕ ಸಂದರ್ಭದಲ್ಲಿ ನಾವು ಮಾತನಾಡಬೇಕಾಗುತ್ತದೆ. ಇದು ಮಂತ್ರಿಮಂಡಲದ ಮೇಲೆ ಪೇಪರ್‌ನಲ್ಲಿ ಪಬ್ಲಿಷ್ ಆಗಿರತಕ್ಕ ವಿಚಾರ. ಇದನ್ನು ಹೇಳಬೇಕಾಗಿದ್ದರೆ ತಾವು ಪರ್ಮಿಷನ್ ಕೊಡಬೇಕಾದ್ದು, ಪ್ರೀವಿಯಸ್ ನೋಟೀಸ್ ಅಗತ್ಯ ಇಲ್ಲ.

ಅಧ್ಯಕ್ಷರು :— ಮಂತ್ರಿಗಳು ಆಗಿರತಕ್ಕವರು ಇಲ್ಲಿ ಕುಳಿತಿರುತ್ತಾರೆ. ಒಬ್ಬ ಮಂತ್ರಿ ಕ್ರಿಮಿನಲ್ ಕೇಸ್‌ನಲ್ಲಿ ಸಿಕ್ಕಿ ಹಾಕಿಕೊಂಡಿದ್ದಾಗ, ಮರ್ಡರ್ ಕೇಸ್‌ನಲ್ಲಿ ಸಿಕ್ಕಿ ಹಾಕಿಕೊಂಡಿದ್ದಾನೆ ಎಂದು ಹೇಳಿದ ಮೇಲೆ ಇಲ್ಲಿರುವ ಎಲ್ಲರೂ ಮಂತ್ರಿಗಳು ಏನಲ್ಲ. ಕೆಲವರು ಮಂತ್ರಿಗಳು ಇದ್ದಾರೆ. ಯಾರು ಎಂದು ನಾಳೆ ಪತ್ರಿಕೆಯಲ್ಲಿ ಬಂದರೆ ಇವರ ಪೈಕಿ ಯಾರನ್ನಾದರೂ ಹೊರಗಡೆ ಇರುವಂತಹ ಜನ ಅನುಮಾನ ಪಡಬಹುದಲ್ಲಾ. ಆದ್ದರಿಂದ ಅವರನ್ನು ಡಿಫೆಂಡ್ ಮಾಡಿಕೊಳ್ಳಬೇಕಲ್ಲಾ.

ಡಾ: ಎಂ.ಪಿ. ಕರ್ಕಿ :— ಪೇಪರಿನಲ್ಲಿ ಬರುತ್ತಿದೆ. ರಾಜ್ಯದ ಜನರಿಗೆ ಗೊತ್ತಿದೆ. ಇಲ್ಲಿ ಹೇಳಬೇಕಾದ ಅಗತ್ಯ ಇಲ್ಲ, ಯಾರು ಎಂಬುದು ಗೊತ್ತಿದೆ.

ಅಧ್ಯಕ್ಷರು :— ಅಲ್ಲಿ ಕ್ಲೋಸ್ ಸರ್ಕ್ಯೂಟ್ ಟಿ.ವಿ. ನೀವು ಹೇಳಿದ್ದು ಎಲ್ಲಾ ಕೇಳಿಕೊಂಡು ಇಲ್ಲಿಗೆ ಬಂದಿದ್ದಾರೆ.

ಅಧ್ಯಕ್ಷರು :— ಡಾ: ಕರ್ಕಿಯವರೇ, ನಾವು ಈ ಸದನದ ನಿಯಮಾವಳಿಗಳಿಗೆ ಅನುಸಾರವಾಗಿ ಕೆಲಸ ಮಾಡಬೇಕಾಗುತ್ತದೆ. ನೀವು ಅಪಾದನೆ ಮಾಡುವುದಕ್ಕೆ ನನ್ನದೇನೂ ಅಭ್ಯಂತರ ಇಲ್ಲ, ಅದು ನಿಮ್ಮ ಹಕ್ಕು. ನೀವು ಆಪಾದನೆ ಮಾಡಬಹುದು. ನಾಳೆ ಮಾನ್ಯ ಎಸ್.ಎಸ್. ಪಾಟೀಲ್ ಅವರು ಹೋದಾಗ ಮುಂಡರಗಿಯಲ್ಲಿ ಹಿಡಿದುಕೊಂಡು ನೀವು ಯಾರನ್ನು ಕೊಲೆ ಮಾಡಿದಿರಿ ಎಂದು ಕೇಳಿದರೆ ಅವರೇನು ಉತ್ತರ ಹೇಳಬೇಕು? ಅವರಿಗೆ ಹೇಳಿದರೂ ಪರವಾಗಿಲ್ಲ, ಗೋವಿಂದೇಗೌಡರನ್ನು ಕೇಳಿದರೆ ಅವರೇನು ಮಾಡಬೇಕು ಹೇಳಿ?

ಶ್ರೀ ಕೆ.ಎಸ್. ಈಶ್ವರಪ್ಪ :— ಆಗ ನನ್ನ ಕೊಲೆ ಆಗಿ ಬಿಡುತ್ತದೆ. ಸಾರ್ ನಾನು ಏನು ಹೇಳುವುದಕ್ಕೆ ಹೊರಟಿದ್ದೇನೆ ಎಂದರೆ ಖಂಡಿತವಾಗಿ ಈ ವೇದಿಕೆಯನ್ನು ದೇವರ ಸಾಕ್ಷಿಯಾಗಿ ರಾಜಕೀಯಕ್ಕೆ ಬಳಸಿಕೊಳ್ಳುತ್ತಿಲ್ಲ. ದೇವರ ಸಾಕ್ಷಿಯಾಗಿ ಹೇಳುತ್ತಿದ್ದೇನೆ. ಕಾವೇರಿ ಬಗ್ಗೆ ಒಳ್ಳೆಯ ಕೆಲಸ ಮಾಡಿದ್ದಾರೆ, ನಾನು ಹೊಗಳಿದೆ. ಸಕ್ಕರೆ ಕಾರ್ಖಾನೆ ಬಗ್ಗೆ ಕೇಂದ್ರ ಸರ್ಕಾರದಿಂದ ಒಪ್ಪಿಗೆ ತಂದರು, ಆ ವಿಚಾರದ ಬಗ್ಗೆ ಹೊಗಳಿದೆ. ಈ ರಾಜ್ಯದ ಮುಖ್ಯಮಂತ್ರಿಗಳ ಬಗ್ಗೆ ಹೇಳುವುದಾದರೆ ಅವರ ಮನಸ್ಸಿನಲ್ಲಿ ಕಹಿ ಇಲ್ಲ. ಅವರ ಮನಸ್ಸಿನಲ್ಲಿ ವಿಷ ಇಲ್ಲ. ಉದಾಸೀನತೆ ನಡಯುತ್ತದೆ. ಅಷ್ಟು ಬಿಟ್ಟರೆ ಬೇರೆ ಏನೂ ಇಲ್ಲ. ಅದರಲ್ಲೂ ಸ್ವಲ್ಪ ಬಿಗಿಯಾಗಿದ್ದರೆ ಈ ದೇಶದಲ್ಲಿ ಇಂತಹ ಮುಖ್ಯಮಂತ್ರಿ ಸಿಗುತ್ತಿರಲಿಲ್ಲ. ಇಷ್ಟು ಉದಾಸೀನ, ನಡೆಯುತ್ತಿದೆ ಬಿಡಿ. ನಾನು ಮುಂಚೆ ಶಿವಮೊಗ್ಗದಲ್ಲಿ ಹುಟ್ಟಿ ಬೆಳೆದೆ. ನಾನು ಅವರನ್ನು ನೋಡಿಕೊಂಡು ಬಂದಿದ್ದೇನೆ. ಎಮರ್ಜೆನ್ಸಿ ಸಮಯದಲ್ಲಿ ಜೈಲಿನಲ್ಲಿ ಒಟ್ಟಿಗೇ ಇದ್ದೆವು. ಆದ್ದರಿಂದ ನನಗೆ ನೋವಾಗುತ್ತಿರುವುದು, ಮೂರು ಘಟನೆ ಅವರ ಕಣ್ಮುಂದೆ ನಡೆಯಿತು. ನಾನು ಪ್ರಸ್ತಾಪ ಮಾಡಿದೆ. ಮೊದಲನೆಯದು ರಾಮಕೃಷ್ಣ ಹೆಗಡೆ ಅವರ ಮೇಲೆ ಚಪ್ಪಲಿ ವ್ಯವಹಾರ. ಅವರು ಮೊದಲ ಮುಖ್ಯಮಂತ್ರಿ ಆಗುವಂತಹ ಸಂದರ್ಭದಲ್ಲಿ ಕೋದಂಡ ರಾಮಯ್ಯನವರ ವರದಿ. ಏಕೆ ಸ್ವಾಮಿ ಇನ್ನೂ ಅದನ್ನು ಬಹಿರಂಗ ಮಾಡಲಿಲ್ಲ? ಏಕೆ ಅವರ ಬಗ್ಗೆ ಕ್ರಮ ತೆಗೆದುಕೊಂಡಿಲ್ಲ? ನೀವು ಬಂದಾಗಿನಿಂದ ಆ ಕೆಲಸವನ್ನು ಮಾಡಬಹುದಿತ್ತಲ್ಲ. ಹಿಂದಿನವರು ಮಾಡಿದರೋ ಬಿಟ್ಟರೋ, ಅವರ ಪಾತ್ರ ಏನು? ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುವುದಿಲ್ಲ.

ಅಧ್ಯಕ್ಷರು :— ಅಲ್ಲಿ ಕ್ಲೋಸ್ ಸರ್ಕ್ಯೂಟ್ ಟಿ.ವಿ. ನೀವು ಹೇಳಿದ್ದು ಎಲ್ಲಾ ಕೇಳಿಕೊಂಡು ಇಲ್ಲಿಗೆ ಬಂದಿದ್ದಾರೆ.

ಶ್ರೀ ಕೆ.ಎಸ್. ಈಶ್ವರಪ್ಪ :— ಅದಕ್ಕೋಸ್ಕರ ಅವರು ಬಂದಿದ್ದಾರೆ. ತುಂಬಾ ಸಂತೋಷ. ಅದಕ್ಕೋಸ್ಕರ ನಾನು ಹೇಳುತ್ತಿರುವುದು.

ಶ್ರೀ ಜೆ.ಎಚ್. ಪಟೇಲ್ :— ಸರ್ಕಾರದ ಬಗ್ಗೆ ಪತ್ರಿಕೆಗಳಲ್ಲಿ ಬಂತು. ಆ ಕಾರಣದಿಂದ ಇಂಥಹ ಒಂದು ಅಪಾದನೆ ಎಂದು ಹೇಳುವುದಕ್ಕಿಂತ ಮುಂಚೆ ನಿಶ್ಚಿತವಾಗಿ ಇಂತಹ ಮಂತ್ರಿಗಳ ಮೇಲೆ ಹೀಗೆ ಇದೆ ಎಂದು ಅಧ್ಯಕ್ಷರ ಗಮನಕ್ಕೆ ತರದೆ ಬರೀ ಸದನದಲ್ಲಿ ಹಾಗೆ ಹೇಳುವುದಕ್ಕೆ ರೂಲ್ಸ್ ಪರ್ಮಿಟ್ ಮಾಡುವುದಿಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ ನಾನು ಏಕೆ ಹೇಳುವುದಕ್ಕೆ ಹೊರಟ್ಟಿದ್ದೇನೆಂದರೆ ಇಡೀ ದೇಶದ ಮುಂದೆ ಈ ಮೂರು ಘಟನೆ ಕಾಣುತ್ತಿದೆ. ಮಾನ್ಯ ರಾಮಕೃಷ್ಣ ಹೆಗಡೆಯವರು ಇವತ್ತಿನ ಸಾಮಾನ್ಯ ಪ್ರಜೆ ಅಲ್ಲ. ಕೇಂದ್ರ ಸರ್ಕಾರದ ಮಂತ್ರಿ. ಈ ಸರ್ಕಾರ

ಬರುವಂತಹ ಸಂದರ್ಭದಲ್ಲಿ ಅವರೇ ನೊಂದು ಹೇಳಿದರು. ಯಾರನ್ನು ಮುಖ್ಯಮಂತ್ರಿಯಾಗಿ ಮಾಡಬೇಕು ಎಂದು ಪ್ರಯತ್ನ ಮಾಡಿ ಅದರಲ್ಲಿ ಯಶಸ್ವಿ ಆದೆನೋ ಅದಕ್ಕೋಸ್ಕರ ನಾನು ಇವತ್ತು ಪಶ್ಚಾತ್ತಾಪ ಪಟ್ಟುಕೊಂಡು ಚಪ್ಪಲಿ ಏಟು ತಿನ್ನುತ್ತಿದ್ದೇನೆಂದು ಹೇಳಿದರು. ನಾನು ಏಕೆ ಪ್ರಸ್ತಾಪ ಮಾಡುತ್ತಿದ್ದೇನೆ ಎಂದರೆ ಕೋದಂಡರಾಮಯ್ಯನವರನ್ನು ನೇಮಕ ಮಾಡಿದಿರಿ, ವರದಿ ಕೊಡುವುದಕ್ಕೆ. ಅದನ್ನು ಸರ್ಕಾರ ಒಪ್ಪಿಕೊಂಡಿತು. ವರದಿಯನ್ನು ಒಪ್ಪಿಕೊಂಡ ಮೇಲೆ ಅದನ್ನು ಈ ಸಭೆಯಲ್ಲಿ ಇಡಬೇಕಾಗಿತ್ತು. ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಳ್ಳಬಹುದಿತ್ತಲ್ಲಾ, ಏಕೆ ತೆಗೆದುಕೊಂಡಿಲ್ಲ? ಇದು ಕಾನೂನು ಏನು ಎಂದು ನನಗೆ ಗೊತ್ತಿಲ್ಲ. ತಪ್ಪು, ಎನ್ನುವುದಾದರೇ ನಾನು ಕ್ಷಮೆ ಕೇಳುತ್ತೇನೆ. ಎರಡನೆಯ ವಿಚಾರ ಮಾನ್ಯ ಸಿಂಧ್ಯರವರ ಬಗ್ಗೆ ಒಬ್ಬ ಮಂತ್ರಿಗೇ ರಕ್ಷಣೆ ಇಲ್ಲ, ನಮಗೆ ಇನ್ನೇನು ರಕ್ಷಣೆ? ಪೋಲೀಸ್ ಇಲಾಖೆ ಎಂದು ಅವರು ಹೇಳಿ ಚಪ್ಪಲಿ ಬಿತ್ತು ಕಲ್ಲು ಬಿತ್ತು ಎಂದು ಹೇಳುತ್ತಿರುವ ಸಂದರ್ಭದಲ್ಲಿ, ಮಂತ್ರಿಯೇ ಹೀಗೆ ಹೇಳುತ್ತಿರಬೇಕಾದರೆ ಒಬ್ಬ ವಿರೋಧ ಪಕ್ಷದವರು ಹೇಳಬಾರದಾ? ಮಾನ್ಯ ನಾಗೇಗೌಡರು ಹೇಳಿದರು, ರಾಷ್ಟ್ರೀಯ ಪಕ್ಷದ ಲೀಡರ್ ಎಂದು. ನಾನು ಇವತ್ತು ಪ್ರಸ್ತಾಪ ಮಾಡುತ್ತಿದ್ದೇನೆ. ಒಬ್ಬ ಮಂತ್ರಿ ಕೊಲೆಗಡುಕ, ಅವರ ಮೇಲೆ ಮಹಾರಾಷ್ಟ್ರ ಸರ್ಕಾರ ಕ್ರಮ ತೆಗೆದುಕೊಂಡಿತು ಎಂದು ಹೇಳಿದಿರಿ. ನಾನು ಇಲ್ಲಿಂದ ಹೋಗುತ್ತಿರಬೇಕಾದರೆ ನನ್ನ ಕೊಲೆ ಆದರೆ ಯಾರು ರಕ್ಷಣೆ ಮಾಡುವವರು? ಪ್ರಸ್ತಾಪ ಮಾಡಬಾರದಾ?

ಶ್ರೀ ಜೆ.ಎಚ್. ಪಟೇಲ್ :— ಅಧ್ಯಕ್ಷರು ಸ್ಪಷ್ಟಪಡಿಸಿದ್ದಾರೆ. ವಿಷಯವನ್ನು ಪ್ರಸ್ತಾಪ ಮಾಡುವುದರ ಬಗ್ಗೆ ಯಾರದ್ದೂ ವಿರೋಧ ಇಲ್ಲ. ಆದರೆ ಕೊಲೆ ಅಪಾದನೆ ಬಗ್ಗೆ ಒಬ್ಬ ಮಂತ್ರಿಯನ್ನು ಜೋಡಿಸುವುದಾದರೆ ಅದೂ ಪತ್ರಿಕೆಯ ಆಧಾರದ ಮೇಲೆ ನೀವು ಹೇಳಿದಿರಿ. ಆ ಪತ್ರಿಕೆಯಲ್ಲಿ ಬರುವುದನ್ನೆಲ್ಲಾ ನಾವು ಸದನದಲ್ಲಿ ಉಲ್ಲೇಖ ಮಾಡಿಕೊಳ್ಳುತ್ತಾ ಹೋದರೆ ಬಹಳ ಕಷ್ಟ ಆಗುತ್ತದೆ. ಎಲ್ಲರಿಗೂ ಕಷ್ಟ ಆಗುತ್ತದೆ. ಆದ್ದರಿಂದ ಅದನ್ನು ಮೊದಲು ಅಧ್ಯಕ್ಷರಿಗೆ ತಿಳಿಸಬೇಕು. ಆ ನಂತರ ಮಾತನಾಡಬಹುದು. ಇಲ್ಲದಿದ್ದರೆ ಅದು ಸದನದ ರೆಕಾರ್ಡಿಗೆ ಹೋಗಬಾರದು.

ಕೆ.ಎಸ್. ಈಶ್ವರಪ್ಪ :— ಅಧ್ಯಕ್ಷರೆ, ನಾನು ದೇವರ ಮೇಲೆ ಪ್ರಮಾಣಮಾಡಿ ಹೇಳಿದೆ, ನಾನು ಇಲ್ಲಿ ರಾಜಕಾರಣ ಮಾಡುತ್ತಾ ಇಲ್ಲ ಎಂದು ಹೇಳಿದೆ. ನಿಮ್ಮ ಬಗ್ಗೆ ನನಗೆ ಅಷ್ಟೇ ವಿಶ್ವಾಸ ಇದೆ. ನಾನು ಇಲ್ಲಿ ಖಂಡಿತ ಪ್ರಸ್ತಾಪ ಮಾಡುತ್ತಿರುವಂತಹ ಸಂದರ್ಭದಲ್ಲಿ ಹೇಳಿದೆ, ನೀವು ಕೆಲವು ಸಂದರ್ಭದಲ್ಲಿ ರಾಜಕಾರಣ ಮಾಡಿದಿರಿ. ಏಕೆ ನಾವು ರಾಜಕಾರಣ ಮಾಡಿದಾಗ ನೀವು ಸುಮ್ಮನೆ ಕುಳಿತುಕೊಳ್ಳುವುದಕ್ಕೆ ಆಗುವುದಿಲ್ಲ. ಆದರೆ ನಾನು ಈಗ ಪ್ರಸ್ತಾಪ ಮಾಡುತ್ತಿರುವಂತಹ ಚರ್ಚೆಯನ್ನು ದಯವಿಟ್ಟು ರಾಜಕಾರಣ ಎಂದು ತಿಳಿದುಕೊಳ್ಳಬೇಡಿ. ರಾಜ್ಯದ ಹಿತದೃಷ್ಟಿಯಿಂದ, ಒಬ್ಬ

ಮುಖ್ಯಮಂತ್ರಿಯಾಗಿ ನೀವು ಮಾಡಬೇಕಾದಂತಹ ಕರ್ತವ್ಯವನ್ನು ನಾನು ನೆನಪು ಮಾಡಿಕೊಡುತ್ತಿದ್ದೇನೆ.

ಅಧ್ಯಕ್ಷರು :— ಈಗ ಒಂದು ಪ್ರಶ್ನೆ ಇದೆ. ಅವರೂ ನೀವು ಏನುಬೇಕಾದರೂ ಮಾತನಾಡಿ. ನನ್ನದೊಂದು ಜವಾಬ್ದಾರಿ ಇದೆಯಲ್ಲಾ. ಕೊಲೆಗಡುಕ ಮಂತ್ರಿ ಎಂದು ಹೇಳಿದಿರಿ. ಒಬ್ಬ ಕೊಲೆಗಡುಕ ಆದವನು ಮಂತ್ರಿಯಾಗಿರುವುದಕ್ಕೆ ಸಾಧ್ಯವಿಲ್ಲ. ಇರಬಾರದು. ನಮ್ಮ ಸಂವಿಧಾನ ಒಪ್ಪಿಕೊಳ್ಳುವುದಿಲ್ಲ. ಅಥವಾ ಮಂತ್ರಿಯಾಗಿರತಕ್ಕವನು ಅಲ್ಲ, ಅಥವಾ ಯಾವುದೇ ಮನುಷ್ಯ, ಮಂತ್ರಿ ಯಾದವನೇ ಆಗಲೀ ಅಥವಾ ಒಬ್ಬ ಸಾಮಾನ್ಯ ಮಾನುಷ್ಯನೇ ಆಗಲೀ ಅವನು ಕೊಲೆ ಮಾಡುವುದಕ್ಕೆ ಸಾಧ್ಯವಿಲ್ಲ. ಕೊಲೆಮಾಡಿದರೆ ಕಾನೂನು ಕ್ರಮ ಜರಗಿಸುತ್ತದೆ. ಒಂದು ವೇಳೆ ಕರ್ನಾಟಕ ರಾಜ್ಯದ ಮಂತ್ರಿಮಂಡಲದಲ್ಲಿ ಸದಸ್ಯರಾಗಿರತಕ್ಕ ಯಾವುದೇ ಒಬ್ಬ ಸದಸ್ಯರು ಕೊಲೆ ಮಾಡತಕ್ಕ ಸಾಹಸಕ್ಕೆ ಕೈ ಹಾಕಿದ್ದು ಅದಕ್ಕೆ ನಿಮ್ಮ ಹತ್ತಿರ ದಾಖಲೆ ಪುರಾವೆಗಳು ಇದ್ದರೆ, ಆಯಿತು. ನೀವು ನೋಟೀಸ್ ಕೊಟ್ಟಿಲ್ಲ. ತಾವು ಹೇಳಿದ್ದೀರಿ. ದಾಖಲೆ ಇದ್ದರೆ ಈಗಲೂ ಕೂಡ ಕಳುಹಿಸಿಕೊಟ್ಟರೆ ನಾನು ನೋಟೀಸ್ ಇಲ್ಲದೇ ಇದ್ದರೂ ಅದನ್ನು ಸ್ವೀಕಾರಮಾಡುತ್ತೇನೆ. ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳ ವಿವೇಚನೆಗೆ ಬಿಡೋಣ. ಕೊಲೆ ಮಾಡಿ, ಕೊಲೆ ಅಪಾದನೆಯಲ್ಲಿರತಕ್ಕವನು ಇರಬೇಕೋ ಬೇಡವೂ? ಏನೂ ಹೇಳದೇ ಹಾಗೆಯೇ ಮುಂದುವರಿದುಕೊಂಡು ಹೋಗುವುದು, ಅದು ಪತ್ರಿಕೆಗೆ ಬರುವುದು ತೊಂದರೆ ಆಗುತ್ತದೆ. ದಯಮಾಡಿ ನೀವು ಸಹಕರಿಸಬೇಕು.

ಶ್ರೀ ಅರಗ ಜ್ಞಾನೇಂದ್ರ :— ಕೊಲೆ ಎಫ್ಐಆರ್‌ನಲ್ಲಿ ಇಲ್ಲ. ಶಂಕಿತರ ಪಟ್ಟಿಯಲ್ಲಿ ಇದೆ ಎಂದು ಹೇಳಿ ನಿನ್ನೆ ಏನೋ ಮಾನ್ಯ ಗೃಹ ಸಚಿವರು ಮೇಲ್ಮನೆಯಲ್ಲಿ ಹೇಳಿಕೆಯನ್ನು ಕೊಟ್ಟ ಹಾಗೆ ಇದೇ.

ಅಧ್ಯಕ್ಷರು :— ನೀವು ವಕೀಲರನ್ನು ಕೇಳಿ. ಎರಡು ಸ್ಟೇಜ್ ಇರುತ್ತದೆ. ಎಫ್ಐಆರ್ ಒಂದು. ಎಫ್ಐಆರ್ ಆದ ಮೇಲೆ ಇನ್ವೆಸ್ಟಿಗೇಷನ್ ಮಾಡಿ ಕೋರ್ಟಿಗೆ ಸಬ್ಮಿಟ್ ಮಾಡತಕ್ಕ ಛಾರ್ಜ್ ಶೀಟ್ ಮತ್ತೊಂದು. ಚಾರ್ಜ್ ಶೀಟ್‌ನಲ್ಲಿ ಇಂಥ ಅಪರಾಧಿ ಇಂತಹ ಅಪರಾಧವನ್ನು ಮಾಡಿದ್ದಾನೆಂದು ನಮೂದಿಸಿರುತ್ತಾರೆ. ಚಾರ್ಜ್ ಶೀಟ್‌ನಲ್ಲಿ ಅವರ ಹೆಸರೇನಾದರೂ ಇದ್ದರೆ ಚಾರ್ಜ್ ಶೀಟ್‌ನ್ನು ದಯಮಾಡಿಕೊಡಿ. ಚಾರ್ಜ್ ಶೀಟ್‌ನಲ್ಲಿ ಹೆಸರು ಇಲ್ಲದಿದ್ದರೆ ನಾವೇ ಆಗಲಿ, ಯಾರೇ ಆಗಲಿ ಹಾಗೆಲ್ಲಾ ಮಾತನಾಡಬಾರದು. Let us be fair to anyone. ಹೌದೋ ಅಲ್ಲವೋ? What is the basis of jurisprudence? ನೂರು ಜನ ಅಪರಾಧಿಗಳು ತಪ್ಪಿಸಿಕೊಂಡಿದ್ದರೂ ಒಬ್ಬ ನಿರಪರಾಧಿಗೆ ತೊಂದರೆಯಾಗಬಾರದು. ಇದು ಹೌದೇ ಅಲ್ಲವೋ? I am not a lawyer. Pleassse guide me.

ಶ್ರೀ ಜೆ.ಹೆಚ್. ಪಟೇಲ್ :— ಮಾನ್ಯ ಈಶ್ವರಪ್ಪನವರೆ, ನಿಮ್ಮ ಗಮನಕ್ಕೆ ರೂಲ್ 328 ಅನ್ನು ತರುತ್ತಿದ್ದೇನೆ.

> ``No allegation of a defamatory or incirminatory nature shall be made by a member against any person unless the member has given previous intimation to the Speaker and also to the Minister concerned..."

ಅಧ್ಯಕ್ಷರು :— ನಾನು ಅದನ್ನೆ ಹೇಳಿದ್ದುದು. ಸನ್ಮಾನ್ಯ ಸದಸ್ಯರ ಅನುಕೂಲಕ್ಕಾಗಿ ಆ ಕಂಡಿಷನ್ ಅನ್ನು ಕೂಡ ವೇವ್‌ಆಫ್ ಮಾಡತಕ್ಕಂಥ ಅಧಿಕಾರ ನನಗಿರುತ್ತದೆ. ನಾನು ಅದಕ್ಕೂ ಕೂಡ ತಯಾರಿದ್ದೇನೆ. ಒಂದು ವೇಳೆ ತಮ್ಮ ಹತ್ತಿರ ಚಾರ್ಜ್ ಶೀಟ್‌ನ ಕಾಪಿ ಇದ್ದು,ಅದರಲ್ಲಿ ಅವರ ಹೆಸರೇನಾದರೂ ನಮೂದಾಗಿದ್ದರೆ. I would advise the Leader to look into it...

ಶ್ರೀ ಕೆ.ಎಸ್. ಈಶ್ವರಪ್ಪ :— ನಾನಂತೂ ಕಾನೂನನ್ನು ಓದಿಲ್ಲ. ಅದೇ ನಮಗೆ ಸಮಸ್ಯೆಯಾಗಿರುವುದು.

ಅಧ್ಯಕ್ಷರು :— ನಾನು ಸಹ ಕಾನೂನು ಓದಿಲ್ಲ, ಅದೇ ತೊಂದರೆ. ನಾನು ಲಾಯರ್ ಅಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ :— ಮಾನ್ಯ ಅಧ್ಯಕ್ಷರೆ ಇಲ್ಲಿ ಎರಡು ವಿಚಾರಗಳಿವೆ. ಒಂದು ಕಾನೂನು, ಇನ್ನೊಂದು ನೈತಿಕತೆ. ನಮ್ಮ ರಾಜ್ಯದ ಮುಖ್ಯಮಂತ್ರಿಗಳು ಎರಡು ವಿಚಾರಗಳಲ್ಲಿ ದಿಟ್ಟ ಕ್ರಮ ತೆಗೆದುಕೊಂಡರು. ಮೊದಲನೆಯದಾಗಿ, ಡಾ: ಅಂಬೇಡ್ಕರ್ ಪ್ರತಿಮೆ ಮೇಲೊ ಸಚಿವರಾಗಿದ್ದ ಶ್ರೀಮತಿ ಬಿ.ಟಿ. ಲಲಿತಾ ನಾಯಕರ ಮಗ ಮದ್ಯ ಸುರಿದರೆಂಬ ಕಾರಣಕ್ಕೆ ಅವರಿಂದ ರಾಜೀನಾಮೆ ತೆಗೆದುಕೊಂಡರು. ಶ್ರೀಮತಿ ಲಲಿತಾ ನಾಯಕ್‌ರವರ ಮೇಲೆ ಯಾವ ಕೇಸ್ ಇತ್ತು? ಏಕೆ ಅವರನ್ನು ಸಚಿವ ಸಂಪುಟದಿಂದ ಕಿತ್ತು ಹಾಕಿದರು? ಎರಡನೆಯದಾಗಿ, ಅದೇ ರೀತಿ ಸಚಿವರಾಗಿದ್ದ ಸೋಮಶೇಖರ್‌ರವರ ರಾಜಿನಾಮೆ ತೆಗೆದುಕೊಂಡರು. ಅವರ ಮೇಲೆ ಯಾವ ಆರೋಪವಿತ್ತು? ಅವರ ಬಗ್ಗೆ ಯಾರು ಪ್ರಸ್ತಾಪ ಮಾಡಿದ್ದರು? ಅವರಿಬ್ಬರೂ ದಲಿತರೆಂಬ ಕಾರಣಕ್ಕೆ ಸಚಿವ ಸಂಪುಟದಿಂದ ಕೈ ಬಿಟ್ಟರೆ? ಇವರಿಂದ ನಿಮಗೆ ರಕ್ಷಣೆಯಿಲ್ಲವೆಂದು ಅಥವಾ ನೀವು ಹೊರಗಡೆ ಬಂದರೆ ನಿಮ್ಮ ಜೀವಕ್ಕೆ ಅಪಾಯವಿದೆಯೆಂದು ಅವರ ಬಗ್ಗೆ ನೀವು ಕ್ರಮ ತೆಗೆದುಕೊಳ್ಳುತ್ತಿಲ್ಲವೋ? ನಾನು ಏಕೆ ಹೇಳುತ್ತಿದ್ದೇನೆಂದರೆ, ಇದು ಸಣ್ಣ ವಿಚಾರವಲ್ಲ. ಇದು ದೇಶಾದ್ಯಂತ ಚರ್ಚೆಯಾಗುತ್ತಿರುವ ವಿಷಯವಾಗಿದೆ.

ಶ್ರೀ ಜೆ.ಹೆಚ್. ಪಟೇಲ್ :— ಮಾನ್ಯ ಸದಸ್ಯರಾದ ಈಶ್ವರಪ್ಪನವರು ಮಾತನಾಡುತ್ತಾ ಕಾನೂನು ಬೇರೆ ನೈತಿಕತೆ ಬೇರೆ ಎಂದು ಅವರೇ ಹೇಳಿದರು. ಇಲ್ಲಿ ನೈತಿಕತೆಯೆಂಬುದು ಕಾನೂನಿನ ಮೇಲೆ ಹೋಗುವುದಿಲ್ಲ. ನೈತಿಕತೆ ಎಂದರೆ ನನ್ನ ಆಲೋಚನೆ ಈ ತರಹ ಇರುವುದರಿಂದ, ಅದಕೋಸ್ಕರ ಬಿಟ್ಟು ಹೋಗುತ್ತೇನೆನ್ನುವುದು ನೈತಿಕತೆ. ಆದರೆ, ಮೆಂಬರಗಿರಿ ಕಾನೂನಿನ ಪ್ರಕಾರ ಹೋಗುತ್ತದೆ. ಸಚಿವರಾಗಿದ್ದ ಶ್ರೀಮತಿ ಲಲಿತಾ ನಾಯಕ್‌ರವರು ನೈತಿಕತೆಯಿಂದ ರಾಜೀನಾಮೆ ಕೊಟ್ಟರು. ಅವರು ಡಾ: ಅಂಬೇಡ್ಕರ್ ಪ್ರತಿಮೆ ಮೇಲೆ ಮದ್ಯ ಸುರಿದ ಪ್ರಕರಣದಲ್ಲಿ ಭಾಗಿಯಾಗಿರಲಿಲ್ಲ, ಆ ಆರೋಪ ಅವರ ಮಗನ ಮೇಲೆ ಬಂದಿದ್ದರಿಂದ ರಾಜೀನಾಮೆ ಕೊಟ್ಟರು. ಅದೇ ರೀತಿ ಸಚಿವರಾಗಿದ್ದ ಸೋಮಶೇಖರ್‌ರವರೂ ಸಹ ಸ್ವಯಂಪ್ರೇರಿತರಾಗಿ ರಾಜೀನಾಮೆ ಕೊಟ್ಟರು. ಯಾರು ಅವರನ್ನು ಹೊರಗಡೆ ಹಾಕಲಿಲ್ಲ, ಅವರು ದಲಿತರೆಂಬ ಕಾರಣಕ್ಕೆ ಹೊರಗೆ ಹಾಕಲಿಲ್ಲ ಅಥವಾ ಇನ್ನೊಬ್ಬರು ಯಾರೋ ಉತ್ತಮ ಜಾತಿಯವರೆಂದು ಅವರನ್ನು ಒಳಗಡೆ ತೆಗೆದುಕೊಳ್ಳಲಿಲ್ಲ. ಆದುದರಿಂದ, ಈಶ್ವರಪ್ಪನವರಿಗೆ ನಾನು ತಿಳಿಸುವುದೇನೆಂದರೆ, ಯಾರ ಮೇಲಾದರೂ ಆರೋಪವಿರುವ ಬಗ್ಗೆ ನಿಮ್ಮ ಹತ್ತಿರ ಆ ಕುರಿತು ದಾಖಲೆಗಳಿದ್ದರೆ even now you can file it to the Speaker and then refer.

MR SPEAKER: Yes. That is what I said.

ಶ್ರೀ ಕೆ.ಎಸ್. ಈಶ್ವರಪ್ಪ :— ಅವರು ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳು.

ಶ್ರೀ ಎನ್. ರಾಜಣ್ಣ :—ಎಫ್.ಐ.ಆರ್. ನಲ್ಲಿ ಇಲ್ಲ ಆದರೂ ಅಪರಾಧಿಯೆಂದು ಹೇಳುತ್ತಿದ್ದಾರೆ. ಆದರೆ XXXX

ಅಧ್ಯಕ್ಷರು :— ಇನ್ನೊಂದು ವಿಧಾನಸಭೆ ಬಗ್ಗೆ ನಾವು ಹೇಳಬಾರದು. That will not form part of the proceedings. That will not go into records because casting aspersions on the neighbouring Assembly is not correct.

ಶ್ರೀ ಕೆ.ಎಸ್. ಈಶ್ವರಪ್ಪ :— ನಮ್ಮ ರಾಜ್ಯದ ಮುಖ್ಯಮಂತ್ರಿಗಳ ಬಗ್ಗೆ ನನಗೆ ಸಂಪೂರ್ಣ ವಿಶ್ವಾಸವಿದೆ. ಏಕೆಂದರೆ, ಈ ರಾಜ್ಯದಲ್ಲಾದ 12 ಕೊಲೆ ಪ್ರಕರಣದಲ್ಲಿ ಸಚಿವರ ಕೈವಾಡವಿದ್ದು ಸಾಬೀತಾಗಿರುವುದು ಪತ್ರಿಕೆಯಲ್ಲಿ ವರದಿಯಾಗಿದೆ. ಕರ್ನಾಟಕದಲ್ಲಿ ನಡೆದ 12 ಕೊಲೆ ಪ್ರಕರಣಗಳ ಹಿಂದೆ ರಾಜ್ಯದ ಪ್ರಮುಖ ಸಚಿವರೊಬ್ಬರು.....

XXXX ಈ ಪದಗಳನ್ನು ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ಅಧ್ಯಕ್ಷರು :— ನಿಮಗೆ ನಾನು ಒಂದು ತಮಾಷೆ ಹೇಳುತ್ತೇನೆ. ಅದು ಎಲ್ಲಾ ಪತ್ರಿಕೆಗಳಲ್ಲೂ ವರದಿಯಾಗಿದೆ. ಏನೆಂದರೆ, ನನ್ನ ಕ್ಷೇತ್ರದಲ್ಲಿ ನನ್ನ ಪ್ರತಿಸ್ಪರ್ಧಿಯಾಗಿದ್ದವರು ಏನು ಮಾಡಿದರೆಂದರೆ, ಮಾಜಿ ಲೋಕಸಭಾಧ್ಯಕ್ಷರಾಗಿದ್ದ ಪಿ.ಎ. ಸಂಗ್ಮಾರವರು ಒಮ್ಮೆ ಬೆಂಗಳೂರಿಗೆ ಬಂದಿದ್ದರು. ಅವರು ಲೋಕಸಭಾಧ್ಯಕ್ಷರಾಗಿದ್ದಾಗ ಬೆಂಗಳೂರಿಗೆ ಬರುವುದಕ್ಕಾಗುವುದಿಲ್ಲ. ಆದರೆ, ತಮ್ಮ ಅಧ್ಯಕ್ಷಗಿರಿ ಕಳೆದುಕೊಂಡಾಗ ಬಂದಿದ್ದರು. ಅವರು ಆತ್ಮೀಯರು ಎನ್ನುವ ಕಾರಣಕ್ಕಾಗಿ ನಮ್ಮ ಮನೆಗೆ ಚಹಾಕ್ಕೆ ಬನ್ನಿ ಎಂದು ಆಹ್ವಾನಿಸಿದ್ದೆ. ಅದೇನಾಯತೆಂದರೆ, ಯಾರೋ ಹೆದರಿಸಿದ್ದಾರೆ, ನಾನು ಕಾಂಗ್ರೆಸ್‌ಗೆ ಸೇರುತ್ತೇನೆ, ಸಂಗ್ಮಾರವರು ಬಹಳ ಪವರ್‌ಫುಲ್ ಲೀಡರ್ ಆಗಿರುವುದರಿಂದ ನನಗೆ ಕಾಂಗ್ರೆಸ್‌ಗೆ ಸೇರಲು ಟಿಕೇಟ್ ಕೊಡುತ್ತಾರೆಂದು ಆತ ಪತ್ರಿಕೆಗಳಿಗೆ ನನ್ನ ಮೇಲೆ ಹೇಳಿಕೆ ಕೊಟ್ಟು ನಾನು 15-16 ಕೊಲೆಗಳನ್ನು ಮಾಡಿಸಿದ್ದೇನೆಂದು ತಿಳಿಸಿದ. ಕೊಲೆಯಾದರೆ ಒಬ್ಬ ಸತ್ತಿರುತ್ತಾನೆ. ಒಬ್ಬ ಕಂಪ್ಲೇಟ್ ಕೊಟ್ಟಿರುತ್ತಾನೆ. ಎಫ್.ಐ.ಆರ್ ಇರುತ್ತದೆ. ಚಾರ್ಜ್ ಶೀಟ್ ಇರುತ್ತದೆ, ಇನ್ವೆಸ್ಟಿಗೇಷನ್ ಇರುತ್ತದೆ. ಎಲ್ಲಾದರೂ, ಏನಾದರೂ ಇರಬೇಕಲ್ಲಾ. ನಾನು ಎಲ್ಲಿಯೂ ಡಿಫೆಂಡ್ ಮಾಡಿಕೊಳ್ಳುವಂತಿಲ್ಲ. ಪತ್ರಿಕಾ ಸಮಾವೇಶನ್ನು ಕರೆಯುವಂತಿಲ್ಲ ಅದರ ಬಗ್ಗೆ ಪಾರ್ಟಿಯವರೂ ಹೇಳಲಿಲ್ಲ. ಕೆಲವರು ನಂಬಿದವರು ನಂಬಿದರು, ಕೆಲವರು ಬಿಟ್ಟರು. These are all very delicate things. ಬೇಕಾದರೆ ವೀರಪ್ಪ ಮೊಯಿಲಿಯವರನ್ನೇ ಕೇಳಿ, he came with about 200 people and set before the Congress (I) Office and went on telling that I have killed about 15 people and I am a murderer. ನಾನೇನು ಮಾಡಲಿ? I am without any defence.

ಶ್ರೀ ಜೆ.ಹೆಚ್. ಪಟೇಲ್ :— ಪ್ರಮೀಳಾ ನೇಸರ್ಗಿಯವರೇ ಹೇಳಲಿ, ಅವರಿಗೆ ಕಾನೂನು ಗೊತ್ತಿದೆ.

ಅಧ್ಯಕ್ಷರು :— ಅಲಿಗೇಷನ್ಸ್ ಇದೇಯಲ್ಲಾ 12 ಕೊಲೆಯೆಂದು ಹೇಳಿದಿರಿ 12 ಅಲ್ಲ 22 ಅಲ್ಲ ಒಂದೇ ಆದರೂ, even an attempt to murder, not necessarily a murder by a person in office ಆಗ ನೈತಿಕತೆ ಪ್ರಶ್ನೆ ಬರುತ್ತದೆ. ನಾನು ಹೇಳುವುದೇನೆಂದರೆ, you are free to make the allegation. but kindly substantiate it with records. I will be too happy to admit it.

ಶ್ರೀ ಕೆ.ಎಸ್. ಈಶ್ವರಪ್ಪ :— ನಾನು ಏನು ಹೇಳಲು ಹೊರಟೆನೆಂದರೆ, ಸನ್ಮಾನ್ಯ ಮುಖ್ಯಮಂತ್ರಿಗಳು....

(ಈ ಹಂತದಲ್ಲಿ ಮಾನ್ಯ ಸಚಿವರಾದ ಶ್ರೀ ಸುಭಾಷ್ ಆರ್. ಗುತ್ತೇದಾರ್‌ರವರು ಮಾತನಾಡಲು ಎದ್ದು ನಿಂತರು)

ಅಧ್ಯಕ್ಷರು :— ಸುಭಾಷ್‌ರವರೇ, ತಾವು ಕುಳಿತುಕೊಳ್ಳಬೇಕು.

ಶ್ರೀ ಸುಭಾಷ್ ಆರ್. ಗುತ್ತೇದಾರ್ :— ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ನಾನು ಸ್ವಲ್ಪ ಮಾತನಾಡಬೇಕಾಗುತ್ತದೆ. ಮಾತನಾಡಲು ನನಗೂ ಅನುಕೂಲ ಮಾಡಿಕೊಟ್ಟರೆ ಒಳ್ಳೆಯದು. ಈ ಕುರಿತು ಸವಿಸ್ತಾರವಾಗಿ ನಾನು ಮಾತನಾಡಬೇಕು. ದೇವರಾಣೆಗೂ ಇದರಲ್ಲಿ ರಾಜಕೀಯ ಇದ್ದು, ಅವರು ರಾಜಕೀಯ ಮಾಡುತ್ತಿದ್ದಾರೆ.

ಅಧ್ಯಕ್ಷರು :— ಸನ್ಮಾನ್ಯ ಈಶ್ವರಪ್ಪನವರು ಒಬ್ಬ ಹಿರಿಯ ಸದಸ್ಯರಾಗಿದ್ದು ನಾನು ರಾಜಕೀಯ ಮಾಡುವುದಿಲ್ಲವೆಂದು ಅವರು ಪ್ರಾಮಾಣಿಕವಾಗಿ ಹೇಳಿದ ನಂತರ ನಾನು ಅನುಮಾನಿಸುವುದಕ್ಕೆ ಕಾರಣಗಳಿಲ್ಲ, ನೈತಿಕತೆಯ ಪ್ರಶ್ನೆ ಎಂದು ಹೇಳುತ್ತಿರುವುದರಿಂದ ಅದನ್ನು ನಾನು ಒಪ್ಪುತ್ತೇನೆ. ಆದುದರಿಂದ, ದಯವಿಟ್ಟು ದಾಖಲೆಗಳನ್ನು ಕೊಡಿ. That is all my suggestion.

ಶ್ರೀ ಕೆ.ಎಸ್. ಈಶ್ವರಪ್ಪ :— ಈಗ ನಮ್ಮದೂ ಸರ್ಕಾರವಿದೆ, ಮಹಾರಾಷ್ಟ್ರ ಸರ್ಕಾರವಿದೆ, ತಾವು ಅಲ್ಲಿ ಹೇಳಿಕೆ ಕೊಟ್ಟಿದ್ದೀರಿ. ಶಂಕಿತರ ಪಟ್ಟಿಯಲ್ಲಿದ್ದಾರೆಂದಿದ್ದೀರಿ. ನೈತಿಕ ವಿಚಾರ ಇಟ್ಟುಕೊಂಡು ನನಗನ್ನಿಸುತ್ತದೆ ಬೇರೆಯವರೆಲ್ಲರ ಬಗ್ಗೆ ತಾವು ಏನು ಕ್ರಮ ತೆಗೆದುಕೊಂಡಿದ್ದೀರೋ, ಇದರ ಬಗ್ಗೆಯೂ ತಾವು ಕ್ರಮ ತೆಗೆದುಕೊಂಡರೆ ರಾಜ್ಯದ ಜನತೆ ಮುಂದೆ ನೀವು ಪವಿತ್ರರಾಗಿದ್ದೀರಿ, ಪ್ರಾಮಾಣಿಕರಾಗಿದ್ದೀರೆಂಬ ಭಾವನೆ ಬರುತ್ತದೆ. ಆದ್ದರಿಂದ ನೈತಿಕತೆಯ ದಿಕ್ಕಿನಲ್ಲಿ ಮುಂದೆ ತಾವು ಯೋಚನೆ ಮಾಡಿದರೆ ಒಳ್ಳೆಯದೆಂದು ನನಗನ್ನಿಸುತ್ತದೆ. ಇದರ ಬಗ್ಗೆ ನಾನು ಹೆಚ್ಚಿಗೆ ಮಾತನಾಡಿದರೆ ತಮಗೂ ಸಮಾಧಾನವಾಗುವುದಿಲ್ಲವೆಂದು ಅನಿಸುತ್ತದೆ. ನಾನು ತಮ್ಮ ಮುಂದೆ ಮೂರು ವಿಚಾರಗಳನ್ನು ಪ್ರಸ್ತಾಪಿಸಿದ್ದೇನೆ. ಮೊದಲನೆಯದು, ಕೋದಂಡರಾಮಯ್ಯನವರ ವರದಿ ಕುರಿತು ಏನು ವರದಿ ಬಂದಿದೆ? ಯಾರು ತಪ್ಪಿತಸ್ಥರು.

ಶ್ರೀ ಜೆ.ಹೆಚ್. ಪಟೇಲ್ :— ಕೋದಂಡರಾಮಯ್ಯನವರ ವರದಿ ಆಗಿನ ಮುಖ್ಯಮಂತ್ರಿಗಳಾಗಿದ್ದ ದೇವೇಗೌಡರ ಮಂತ್ರಿಮಂಡಲದ ಮುಂದೆ ಬಂದಾಗ ಅದನ್ನು ರಿಜೆಕ್ಟ್ ಮಾಡಿದ್ದಾರೆ. ಈಗ ದರ ಬಗ್ಗೆ ನಾನು ಹೇಗೆ ಪ್ರಸ್ತಾಪಿಸಲಿ?

ಶ್ರೀ ಕೆ.ಎಸ್. ಈಶ್ವರಪ್ಪ :— ಹಾಗಾದರೆ, ಒಂದು ಘಟನೆ ನಡೆದದ್ದು ಸತ್ಯವೇ? ಸುಳ್ಳೆ? ವಿಧಾನಸಭೆಯ ಗಾಜುಗಳು ಪುಡಿಯಾಗಿದ್ದು, ಪೀಠೋಪಕರಣಗಳು ತುಂಡಾಗಿದ್ದು ಸುಳ್ಳೇ? ಸನ್ಮಾನ್ಯ ರಾಮಕೃಷ್ಣ ಹೆಗಡೆಯವರು ಪತ್ರಿಕೆಗಳಿಗೆ ಈ ರೀತಿ ಹೇಳಿದ್ದು ಸುಳ್ಳೆ? ದೇಶಪಾಂಡೆಯವರಿಗೆ ಹಾಗೂ ಈ ಸದನದ ಅನೇಕ ಗೌರವಾನ್ವಿತ ಸದಸ್ಯರುಗಳ ಬಗ್ಗೆ ಅವಮಾನವಾಗಿದ್ದು ಸುಳ್ಳೆ? ಅವರು ರಿಜೆಕ್ಟ್ ಮಾಡಿದ್ದಾರೆನ್ನುವುದಾದರೆ ಅದು ಅವರ

ಹಕ್ಕು ಇರಬಹುದು. ನನಗೆ ಗೊತ್ತಿಲ್ಲ. ಇದು ನ್ಯಾಯವೇ? ಏಕೆಂದರೆ, ನಾನು ಕಾನೂನು ಓದಿಲ್ಲ, ಇದನ್ನು ಮತ್ತೆ ಹೇಳುತ್ತಿದ್ದೇನೆ.

ಅಧ್ಯಕ್ಷರು :— ನಾನು, ನೀವು ಕಾನೂನು ಓದುವುದು ಬೇಡ, ಹೀಗೆ ಮ್ಯಾನೇಜ್ ಮಾಡೋಣ.

ಶ್ರೀ ಕೆ.ಎಸ್ ಈಶ್ವರಪ್ಪ :— ನೀವು ಕಾನೂನನ್ನು ಓದಿ ತೊಂದರೆ ಅನುಭವಿಸುತ್ತಿದ್ದೀರಿ, ನಾನು ಕಾನೂನು ಓದದೇ ತೊಂದರೆ ಅನುಭವಿಸುತ್ತಿದ್ದೇನೆ. ನೀವು ಕಾನೂನು ಓದಿದ್ದೀರಿ. ನಿಮ್ಮ ಮುಂದೆಯೇ ಈ ರೀತಿ ಆಗುತ್ತಿರುವ ಘಟನೆಗಳನ್ನು ಕಣ್ಣಿಂದ ನೋಡಿ ನೋಡಿ ಈ ಕಾನೂನು ಏನೂ ಮಾಡಕ್ಕಾಗುವುದಿಲ್ಲವೆಂದು ತೀರ್ಮಾನವಾಯಿತೇ?

ಅಧ್ಯಕ್ಷರು :— ನೀನು ಬರೀ ಬಿ.ಎಸ್.ಸಿ ಗ್ರಾಜ್ಯುಯೇಟ್ ಅಷ್ಟೆ. ನಾನು ಕಾನೂನನ್ನು ಓದಿಲ್ಲವೆಂದು ಹೇಳುತ್ತಿದ್ದೇನೆ. ಅನೇಕ ಸಂದರ್ಭಗಳಲ್ಲಿ ನಾನು ಕಕ್ಷಿದಾರನಾಗಿದ್ದೇನೆ.

ಶ್ರೀ ಕೆ.ಎಸ್. ಈಶ್ವರಪ್ಪ :— ಮಾತೆತ್ತಿದರೆ ನೀವು ಪುಸ್ತಕ ತೆಗೆಯುತ್ತೀರಿ. ಅವರು ಲಾ ಪುಸ್ತಕ ತೆಗೆಯುತ್ತಾರೆ, ತೋರಿಸುತ್ತಾರೆ, ನಮ್ಮ ಬಾಯಿ ಮುಚ್ಚಿಸುತ್ತಾರೆ. ನೀವೂ ಆ ಬದುದಕು ಮಾಡುತ್ತಿದ್ದೀರಿ. ಅವರನ್ನು ಮುಗಿಸಿದರೆಂದು ಇವೊತ್ತು ಹೇಳುತ್ತಿದ್ದಾರೆ. ಇವರಾಯರು ಮುಗಿಸುವುದಕ್ಕೆ? ಈ ರಾಜ್ಯದಲ್ಲಾಗಿರುವ ಒಂದು ಘಟನೆ ಬಗ್ಗೆ ತೆಗೆದುಕೊಂಡು ನಾವು ಜನತೆ ಹತ್ತಿರ ಹೋಗುತ್ತೇವೆ, ಈ ರೀತಿ ಘಟನೆ ನಡೆದಿತ್ತು. ಘಟನೆ ನಡೆದಂಥ ಸಂದರ್ಭದಲ್ಲಿ ರಾಮಕೃಷ್ಣ ಹೆಗಡೆಯವರು ಮತ್ತು ದೇಶಪಾಂಡೆಯವರಿಗೆ ಈ ರೀತಿ ಆಗಿತ್ತು. ಈ ಬಗ್ಗೆ ಕೋದಂಡರಾಮಯ್ಯನವರಿಗೆ ವರದಿ ಕೊಡುವುದಕ್ಕೆ ಹೇಳಿದ್ದೆವು. ವರದಿ ಕೊಟ್ಟ ನಂತರ ಮುಖ್ಯಮಂತ್ರಿಗಳಾಗಿದ್ದ ದೇವೇಗೌಡರ ಸರ್ಕಾರ ಅದನ್ನು ತಿರಸ್ಕಾರ ಮಾಡಿತು ಎಂಬ ಅಂಶಗಳನ್ನು ನಿಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಹಾಕಿಕೊಂಡು ಜನತೆಯ ಮುಂದೆ ಹೋಗುತ್ತೀರಾ?

ಶ್ರೀ ಜೆ.ಹೆಚ್. ಪಟೇಲ್ :— ಅದೊಂದು ವರ್ಡಿಕ್ಟ್ ಅಲ್ಲ. Kodandaramaiah, as an investigating police officer has submitted a report, according to which, nothing has been mentioned. ಆದ್ದರಿಂದ ಆಗಿನ ಸರ್ಕಾರ in its wisdom, they have not accepted it.

ಶ್ರೀ ಕೆ.ಎಸ್. ಈಶ್ವರಪ್ಪ :— ಚಾರ್ಜ್ ಶೀಟ್ ಆದರೂ ಹಾಕಬಹುದಿತ್ತಲ್ಲಾ. ಏಕೆಂದರೆ ಯಾವನೋ ಒಬ್ಬ ರಸ್ತೆಯಲ್ಲಿ ಹೋಗುತ್ತಿರುವಂತಹ ಯಾರಾದರೂ ಬಂದು ತಿವಿದರೆ, ಗುದ್ದಿದರೆ ಪೋಲೀಸ್‌ನವರು ಅವರನ್ನು ಕರೆದುಕೊಂಡು ಹೋಗಿ, ಕೇಸ್ ಹಾಕಿ, ಅರೆಸ್ಟ್ ಮಾಡಿ ಕೋರ್ಟಿಗೆ ಕಳಿಸಿ, ಜೈಲಿಗೆ ಕಳುಹಿಸುತ್ತೀರಿ.

ಅಧ್ಯಕ್ಷರು :— ಅಕ್ಸೆಪ್ಟ್ ಮಾಡಿದರೆ ಚಾರ್ಜ್ ಶೀಟ್. ರಿಜೆಕ್ಟ್ ಮಾಡಿರುವುದರಿಂದ ಛಾರ್ಜ್ ಶೀಟ್ ಪ್ರಶ್ನೆ ಬರುವುದಿಲ್ಲ. (ಬಿ) ರಿಪೋರ್ಟ್ ಇಶ್ಯೂ ಮಾಡಿದ ಹಾಗೆ ಆಯಿತು.

ಶ್ರೀಮತಿ ಪ್ರಮೀಳ ನೇಸರ್ಗಿ :— ಅಧ್ಯಕ್ಷರೆ, (ಬಿ) ರಿಪೋರ್ಟ್ ಕೋರ್ಟಿಗೆ ಕೊಡತಕ್ಕಂಥಹದು. ಇನ್‌ವೆಸ್ಟಿಗೇಷನ್ ಆದ ನಂತರ ಇನ್‌ವೆಸ್ಟಿಗೇಷನ್ ರಿಪೋರ್ಟ್ ಪ್ರಕಾರ ಆಕ್ಷನ್ ತೆಗೆದುಕೊಳ್ಳಬೇಕಾಗಿತ್ತು. ಛಾರ್ಜ್ ಶೀಟ್ ಹಾಕಬೇಕಾಗಿತ್ತು. ನಾನು ಆಗಲೇ ಕೇಳಿದ್ದೇನೆ. ಎಫ್.ಐ.ಆರ್. ಎಂದರೇನು? ಛಾರ್ಜ್ ಶೀಟ್ ಎಂದರೇನು ಎಂದು ಕೇಳಿದ್ದೇನೆ. Charge sheet was ready. It should have been filed, they have withheld the chargesheet. Whether the Cabinet has got the power or not, that is a separate question. That, we will deal later. ಇದರಲ್ಲಿ ಸಂಪೂರ್ಣವಾಗಿ ಯಾರು ಅಪರಾಧಿಗಳು ಇದ್ದಾರೋ ಅವರನ್ನು ಮುಚ್ಚಿಹಾಕುವಂತಹ ಪ್ರಯತ್ನ ಇದರಲ್ಲಿ ನಡೆದಿದೆ ಎನ್ನುವುದನ್ನು ಅವರು ಹೇಳಿದ್ದಾರೆ. ರಿಪೋರ್ಟ್ ತಿರಸ್ಕಾರ ಮಾಡಿದ್ದೀರಿ ಎಂದರೆ ಆ ಪಾಯಿಂಟ್ ಹೇಳಬೇಕಾಗಿತ್ತಲ್ಲ.

SRI C. CHENNIGAPPA: Once the 'B' report is submitted by the Officer, it is false. Once the 'B' report is accepted by the police, it is false.

ಶ್ರೀಮತಿ ಪ್ರಮೀಳಾ ನೇಸರ್ಗಿ :— ರಿಪೋರ್ಟ್‌ನಲ್ಲಿ ಗೊತ್ತಿತ್ತಾ?

ಶ್ರೀ ಜೆ.ಹೆಚ್. ಪಟೇಲ್ :— ಮಾನ್ಯ ಅಧ್ಯಕ್ಷರೆ, ಜ್ಯುಡಿಷಿಯಲ್ ಪ್ರೋಬ್ ಆಗಿ ಜ್ಯುಡಿಷಿಯಲ್ ರಿಪೋರ್ಟನ್ನು ಸದನದಲ್ಲಿಟ್ಟು ಅದರ ಬಗ್ಗೆ ಚರ್ಚೆಮಾಡಿ, ಯಾರ ಮೇಲೆ ಕೇಸ್ ಹಾಕಬೇಕು, ಬಿಡಬೇಕು ಎಂದು ಇಲ್ಲಿಯವರೆಗೂ 50 ವರ್ಷಗಳಿಂದ ತಮ್ಮ ಗಮನಕ್ಕೆ ಬಂದ ಹಾಗೆ ಯಾವುದಾದರೂ ಜ್ಯುಡಿಷಿಯಲ್ ಪ್ರೋಬ್ ಮೇಲೆ ಅಥವಾ ಅದರ ಆಧಾರದ ಮೇಲೆ ಚಾರ್ಜ್ ಶೀಟ್ ಹಾಕಿದ್ದರೆ ನಾನು ಒಪ್ಪಿಕೊಳ್ಳುತ್ತೇನೆ. ತಾವು ವಕೀಲರು. ತಾವು ಇಡೀ ಇತಿಹಾಸ ಬಲ್ಲವರು. ಏಕೆ ಇದನ್ನು ಮತ್ತೆ ಪುನ ಪುನ: ಛಾರ್ಜ್ ಶೀಟ್ ಹಾಕಬೇಕಾಗಿತ್ತು ಎಂದು ಹೇಳುತ್ತೀರಿ. ಅದು ಹಾಕುವುದಕ್ಕೆ ಬರುವುದಿಲ್ಲ.

ಶ್ರೀಮತಿ ಪ್ರಮೀಳಾ ನೇಸರ್ಗಿ :— ಛಾರ್ಜ್ ಶೀಟ್ ಹಾಕುವುದಕ್ಕೆ ಬರುವುದಿಲ್ಲ ಅಲ್ಲ, ಹಾಕುವುದಕ್ಕೆ ಮನಸ್ಸು ಇಲ್ಲ. ಯಾವುದೇ ರಾಜಕೀಯ ಪಕ್ಷ ರಿಪೋರ್ಟ್ ಹಾಕುತ್ತಾರೆ. ಜ್ಯುಡಿಷಿಯಲ್ ಎನ್‌ಕ್ವೈರಿ ಮಾಡುತ್ತಾರೆ. ಷಾ ಕಮಿಷನದ ವಿಚಾರಣೆ

ಆಯಿತು. ಇವತ್ತಿನವರೆಗೆ ಯಾರು ಕ್ರಮ ಮಾಡುತ್ತಿಲ್ಲ. ಕಮಿಷನ್ ಆಫ್ ಎನ್‌ಕ್ವೈರಿ ಬೇಕೆ ಬೇಡವೆ ಎನ್ನುವ ಪರಿಸ್ಥಿತಿ ಈಗ ಬಂದಿದೆ. ಸುಮ್ಮನೆ ಸ್ಕ್ರಾಪ್ ಮಾಡಬಹುದಲ್ಲಾ ``We don't want to have it" they may say.

ಅಧ್ಯಕ್ಷರು :— ದಯಮಾಡಿ ಕನ್‌ಫ್ಯೂಸ್ ಮಾಡಿಕೊಳ್ಳಬೇಡಿ. ಮಾನ್ಯ ವೀರಪ್ಪ ಮೊಯಿಲಿಯವರು ಇಲ್ಲಿದ್ದಾರೆ. ಹೋಲ್ ಇನ್ಸಿಡೆಂಟನ್ನು ನಾವು ಎರಡು ಭಾಗ ಮಾಡಬೇಕು. ಇಲ್ಲಿ ನಡೆದಿರಬಹುದಾದಂತಹ ಅಹಿತಕರ ಘಟನೆಗಳು ಅಥವಾ ಅಫೆನ್ಸ್‌ಸ್ ಏನು ಇದ್ದಾವೆ, ಈ ಜ್ಯುರಿಸ್ಡಿಕ್ಷನ್‌ಗೆ ಬರತಕ್ಕ ಸಂಬಂಧಪಟ್ಟ ಸ್ಟೇಷನ್ ಹೌಸ್ ಆಫಿಸರ್ ಯಾರು ಇರುತ್ತಾರೆ ಕ್ರೈಮ್‌ನ ಆಧಾರದ ಮೇಲೆ ಸಬ್ ಇನ್ಸ್‌ಪೆಕ್ಟರ್ ಅಥವಾ ಇನ್ಸ್‌ಪೆಕ್ಟರ್‌ರವರು ಇನ್ವೆಸ್ಟಿಗೇಟ್ ಮಾಡತಕ್ಕದ್ದು. ಛಾರ್ಜ್ ಶೀಟ್ ಮಾಡುವುದು ಅಥವಾ "ಬಿ" ರಿಪೋರ್ಟ್ ಮಾಡುವುದು ಅಥವಾ ಎನ್‌ಸಿಆರ್ ಇಶ್ಯೂ ಮಾಡುವುದು ಅವರಿಗೆ ಸಂಬಂಧಿಸಿದ್ದುದು ಸರ್ಕಾರ ಇದ ರಾಜಕಾರಣದ್ದು ಇತ್ತು, ದೊಡ್ಡ ದೊಡ್ಡ ಮುಖಂಡರುಗಳೆಲ್ಲಾ ಇದರಲ್ಲಿ ಇನ್ವಾಲ್ವ್ ಆಗಿದ್ದರು ಎಂದು ಒಂದು ಎನ್ಕ್ವೆರಿ ಮಾಡಿ ಎಂದು ಪೋಲಿಸ್ ಕಮೀಷನರ್‌ಗೆ ಹೇಳಿದರು. ಪೋಲೀಸ್ ಕಮೀಷನರ್ ಅವರ ಕೆಪ್ಯಾಸಿಟಿಯಲ್ಲಿ ಒಂದು ರಿಪೋರ್ಟ್ ಕೊಟ್ಟಿದ್ದರು. In the capacity as Commissioner of Police, he has given a Report. Cabinet, in the best of its wisdom took a decision not to accept the recommendations or findingf of that Report. Why do you club these two things? ಹೌದೋ ಅಲ್ಲವೋ ಮೊಯಿಲಿಯವರೆ, ಈಗ ಮೊಯಿಲಿಯವರು ಪ್ರಾಕ್ಟೀಸಿಂಗ್ ಅಡ್ವೊಕೇಟ್ ಇದ್ದಾರೆ, ಅವರನ್ನು ಕೇಳಿ.

ಶ್ರೀಮತಿ ಪ್ರಮೀಳಾ ನೇಸರ್ಗಿ :— ಈಗ ಕೇಸ್ ರಿಜಿಸ್ಟರ್ ಆಗಿತ್ತೋ ಇಲ್ಲವೋ? ಇಲ್ಲಿ ಆಗಿದ್ದ ಇನ್ಸಿಡೆಂಟ್ ಬಗ್ಗೆ ಯಾವುದಾದರೂ ಒಂದು ಪೋಲಿಸ್ ಸ್ಟೇಷನ್‌ನಲ್ಲಿ ಕೇಸ್ ರಿಜಿಸ್ಟರ್ ಆಗಿತ್ತೋ ಇಲ್ಲವೋ?

ಶ್ರೀ ಸಿ. ಚೆನ್ನಿಗಪ್ಪ :— ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. "ಬಿ ರಿಪೋರ್ಟ್ ಕೊಟ್ಟಿದ್ದಾರೆ ಆ ಕೇಸ್ ಬಗ್ಗೆ ವಿಚಾರ ಇಲ್ಲ ಎಂದು ಹೇಳಿದ್ದಾರೆ. ಬಿ ರಿಪೋರ್ಟ್ ಕೊಟ್ಟಮೇಲೆ ಪೋಲೀಸ್ ಆಫೀಸರ್ ಕೋದಂಡರಾಮಯ್ಯಂವರು ಹೇಳಿದ ಹಾಗೆ ಕೇಳುತ್ತೇವೆ, ಆರರ ವರದಿ ತೆಗೆದುಕೊಳ್ಳಿ ಎಂದು ಮಾನ್ಯ ನಮ್ಮ ಈಶ್ವರಪ್ಪನವರು ಕೇಳಿದಾಗ ಅದೇ ಪೋಲಿಸ್ ಕಮೀಷನರ್ ಅವರು (ಬಿ) ರಿಪೋರ್ಟ ಕೊಟ್ಟ ಮೇಲೆ ತೆಗೆದುಕೊಳ್ಳುವ ಪ್ರಶ್ನೆ ಇದೆಯಾ ಎಂಬ ಬಗ್ಗೆ ಅವರು ಉತ್ತರ ಕೊಡಬೇಕು.

ಅಧ್ಯಕ್ಷರು :— "ಬಿ" ರಿಪೋರ್ಟ್ ಕೊಟ್ಟ ಮೇಲೂ ಒಂದು ಪ್ರಾವಿಷನ್ ಇರುತ್ತದೆ. ಅಗ್ರೀವ್ಡ್ ಪಾರ್ಟೀಸ್ ಯಾರು ಇರುತ್ತಾರೆ, (ಬಿ) ರಿಪೋರ್ಟ್ ಕೊಟ್ಟ

ಮೇಲೂ ಸಹ ಅವರು ಪ್ರೈವೇಟ್ ಕಂಪ್ಲೆಂಟನ್ನು ಪ್ರಿಫರ್ ಮಾಡಬಹುದು. ಅಲ್ಲವಾ? ಈ ಕೇಸ್‌ನಲ್ಲಿ ಕೊಟ್ಟಿಲ್ಲ ಎಂಬುದು ತಾನೆ?

(ಗೊಂದಲ)

MR. SPEAKER: This House is privileged. We have a man from the Department who was earlier there, and wehave a man from the judiciary

ಶ್ರೀ ಎಸ್.ಪಿ. ಮುದ್ದಹನುಮೇಗೌಡ :— ನನಗೇನು ಅಂದರೆ ಒಂದು ಅನುಮಾನ ಬಂತು. ತಮ್ಮ ಅನುಭವದಿಂದಲೇ ಲಿಟಿಗೆಂಟ್ ಎಂದು ಒಬ್ಬ, ಕ್ರಾನಿಕ್ ಲಿಟಿಗೆಂಟ್ ಎಂದು ಒಬ್ಬ.. ತಾವು ಯಾವ ವರ್ಗಕ್ಕೆ ಸೇರಿದ್ದೀರಿ.

ಅಧ್ಯಕ್ಷರು :— ಲಿಟಿಗೆಂಟ್ ಒಬ್ಬರು, ಕ್ರಾನಿಕ್ ಲಿಟಿಗೆಂಟ್ ಒಬ್ಬರು. I think I would take a position in between the two.

ಡಾ: ಎಂ.ಪಿ. ಕರ್ಕಿ :— ನನಗೆ ಅನುಮಾನ ಬರತಕ್ಕದ್ದು a criminal act has been committed. ಅದಕ್ಕೆ ಇನ್ವೆಸ್ಟಿಗೇಷನ್ ಆಯಿತು. ಆ ಇನ್ವೆಸ್ಟಿಗೇಷನ್‌ಅನ್ನು ತಿರಸ್ಕಾರ ಮಾಡತಕ್ಕಂಥ ಅಧಿಕಾರವನ್ನು ನಾವು ಮುಖ್ಯಮಂತ್ರಿಗಳಿಗೆ ಅಥವಾ ಕ್ಯಾಬಿನೆಟ್‌ಗೆ ಕೊಡುವುದಕ್ಕೆ ಆಗುತ್ತದೆಯೇ?

MR. SPEAKER :— I have made it very very clear.

SRI B.N. BACHEGOWDA :— Investigation report is different. Investigation agency is separate on an offence. Report is different. It is an indicent. Don't mix these two things.

MR. SPEAKER :— He is right.

ಡಾ: ಎಂ.ಪಿ. ಕರ್ಕಿ :— ಈ ರಿಪೋರ್ಟ್ ತಿರಸ್ಕಾರ ಆಯಿತು. ಇನ್ವೆಸ್ಟಿಗೇಷನ್ ಆದರೂ ಮಾಡಿಸಿದ್ದೀರಿ. A crime has been committed. ಆ ಕ್ರೈಮ್‌ಗೆ ಇನ್ವೆಸ್ಟಿಗೇಷನ್ ಬೇಡವೇ?

ಅಧ್ಯಕ್ಷರು :— ಜವಾಬ್ದಾರಿ ಮತ್ತೆ ನಿಮ್ಮ ಮೇಲೆ ಬಿತ್ತು. ಅದು ಕ್ರೈಮ್‌ಆಗಿ ರಿಜಿಸ್ಟರ್ ಆಗಿತ್ತಾ? ರಿಜಿಸ್ಟರ್ ಆಗಿದ್ದರೆ ನಂಬರ್ ಏನು? ಇನ್ವೆಸ್ಟಿಗೇಷನ್ ಆಗಿತ್ತಾ ಆ

ಇನ್ಫರ್ಮೇಷನ್ ತೆಗೆದುಕೊಂಡು ಬಂದು ಇಲ್ಲಿ ಹೇಳಬೇಕಾಗಿತ್ತು. Whether the crime has been registered or not, if it has been registered whether the investigation has been complete or incomplete, what is the outcome? You should have come out with the entire information or you can ask the Government whether such a crime did take place. ನೀವು ಈಗ ಇವರನ್ನು ಕೇಳಿ. ಕ್ರೈಮ್ ರಿಜಿಸ್ಟರ್ ಆಗಿತ್ತಾ? ವಿಧಾನಸೌಧ ಜ್ಯುರಿಸ್ಡಿಕ್ಷನ್‌ನಲ್ಲಿ ರಿಜಿಸ್ಟರ್ ಆಗಿತ್ತಾ ಎಂದು ಅವರನ್ನು ಕೇಳಿ, ಅವರು ಹೇಳುತ್ತಾರೆ.

ಶ್ರೀ ಕೆ.ಎಸ್. ಈಶ್ವರಪ್ಪ :— ಕೇಳುವುದು ಒಂದು ವಿಚಾರ ಸಾರ್. ಎರಡನೆಯದು ಸರ್ಕಾರದ ಕರ್ತವ್ಯ ಇಲ್ಲವಾ? ಈ ವಿಧಾನಸೌಧ ಪವಿತ್ರ ಅಲ್ಲವಾ? ನನಗೆ ಗೊತ್ತಿಲ್ಲ. ಈ ಘಟನೆ ಆದದ್ದು ವಿಧಾನಸೌಧದಲ್ಲಿ ನೀವು ಸ್ಪೀಕರ್ ಆದ ಮೇಲೆ. ಕನಿಷ್ಟ ನೀವು ಇವರ ಬಗ್ಗೆ ಆಕ್ಷನ್ ತೆಗೆದುಕೊಳ್ಳಬೇಕಿತ್ತು ಎಂಬುದು ನನ್ನ ಅಭಿಪ್ರಾಯ. ನನಗೆ ಗೊತ್ತಿಲ್ಲ.

ಅಧ್ಯಕ್ಷರು :— ಇವರೆಲ್ಲಾ ಜಗಳವನ್ನು ಇತ್ಯರ್ಥ ಮಾಡಿಕೊಂಡು ಬಂದ ಮೇಲೆ ನನ್ನನ್ನು ಸ್ಪೀಕರ್ ಮಾಡಿದ್ದುದು. ಅವತ್ತಿಗೆ ನಾನು ಸ್ಪೀಕರ್ ಆಗಿರಲಿಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ :— ಆಮೇಲಾದರೂ ಮಾಡಬಹುದಿತ್ತಲ್ಲಾ.

ಅಧ್ಯಕ್ಷರು :— ದಯಮಾಡಿ ಕೇಳಿ ಬಹಳ ಜನರಿಗೆ ಕನ್‌ಫ್ಯೂಷನ್. ವಿಧಾನಸೌಧ ನನಗೆ ಸೇರಿದ್ದು ಎಂದು ತಿಳಿದುಕೊಂಡಿದ್ದಾರೆ. ನಾನೂ ಸಹ ಬಹಳ ದಿವಸ ಹಾಗೆಯೇ ಜಂಭದಲ್ಲಿದ್ದೆ. ನನಗೆ ಈ ಎರಡು. ಪ್ರಿಸಿಂಕ್ಟ್ ಈ ಹಾಲ್, ಈ ಎರಡು ನನಗೆ ಇಷ್ಟೇ ಬರುವುದು. ಉಳಿದವೆಲ್ಲಾ ಚೀಫ್ ಸೆಕ್ರೆಟರಿ ಜವಾಬ್ದಾರಿಗೆ ಬರುತ್ತದೆ. ಅವರು ಇಲ್ಲಿ ಹೊಡೆದಾಡಲಿಲ್ಲ. ಇಲ್ಲಿ ಹೊಡೆದಾಡಿದ್ದರೆ ನಾನು ಕಂಪ್ಲೆಂಟ್ ರಿಜಿಸ್ಟರ್ ಮಾಡಿಸುತ್ತಿದ್ದೆ. ನಮ್ಮ ಮಾರ್ಷಲ್‌ಗೆ ಹೇಳಿ ಏನೇನು ಮಾಡಿಸಬೇಕೋ ಅವೆಲ್ಲವನ್ನು ಮಾಡಿಸುತ್ತಾ ಇದ್ದೆ. ಈ ಎರಡು ಲಾಬಿಗಳಲ್ಲೂ ಜಗಳ ಮಾಡಿ ಕೊಂಡಿಲ್ಲಾ. ಇವರೆಲ್ಲಾ ಜಾಣರು, ನಾನು ಹಾಗೆ ಮಾಡುತ್ತೇನೆಂದು ಅನುಮಾನಪಟ್ಟು ಹೊರಗಡೆ ಮಾಡಿಕೊಂಡಿದ್ದು.

ಶ್ರೀ ಕೆ.ಎಸ್. ಈಶ್ವರಪ್ಪ :— ಸಾರ್, ರಾಷ್ಟ್ರಧ್ವಜವನ್ನು ತೆಗೆದು ಅವರ ಪಕ್ಷದ ಧ್ವಜವನ್ನು ಹಾರಿಸುವುದಕ್ಕೆ ಹೋಗಿದ್ದರು. ಅದನ್ನು ಬಿಡಿ. ಆ ಘಟನೆ ಈ ರಾಜ್ಯದ ಇತಿಹಾಸಕ್ಕೆ ಒಂದು ಕಳಂಕ ಸಾರ್. ಎಲ್ಲಿಯತನಕ ಜನತಾದಳ ಸರ್ಕಾರ ಇರುತ್ತದೋ ಅದು ಇರುತ್ತದೆ.

MR. SPEAKER :— That is a fact.

ಶ್ರೀ ಬಿ.ಎನ್. ಬಚ್ಚೇಗೌಡ :— ಮಾನ್ಯ ಅಧ್ಯಕ್ಷರೆ, ಈಶ್ವರಪ್ಪನವರಿಗೆ ಇದು ಹೊಸದು ಎಂದು ಕಾಣುತ್ತದೆ. ಮೊದಲು ಅವರ ಪಕ್ಷದಲ್ಲಿದ್ದಂತಹ ನಾಯಕರೇ ಇದನ್ನು ಹತ್ತಾರು ಬಾರಿ ಪ್ರಸ್ತಾಪ ಮಾಡಿದ್ದಾರೆ. ಇದಕ್ಕೆ ಉತ್ತರ ಕೊಟ್ಟಿದೆ.

ಶ್ರೀ ಕೆ.ಎಸ್. ಈಶ್ವರಪ್ಪ :— ಈ ಸರ್ಕಾರದ ಮೇಲೆ ಬಿಟ್ಟಿದ್ದು. ನಮ್ಮ ರಾಜ್ಯದ ಮುಖ್ಯಮಂತ್ರಿಗಳು ತಮಗೆ ಸಿಕ್ಕಂತಹ ಒಂದು ಅಧಿಕಾರವನ್ನು ಕೋದಂಡರಾಮಯ್ಯನವರ ವರದಿಯನ್ನು ಅವರು ತಿರಸ್ಕಾರ ಮಾಡಿದ್ದರೂ ನಾನು ಇದನ್ನು ಬಿಡುವುದಿಲ್ಲ. ನಾನು ಇದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆಂದು ತೀರ್ಮಾನ ಇನ್ನೂ ಮಾಡುವುದಾದರೆ ಒಳ್ಳೆಯದು.

ಅಧ್ಯಕ್ಷರು :— ಅವರು ಯಾವಾಗಲೂ ಯಾವ ಕಡೆಗೂ ಇಲ್ಲ. ಅವರು ಇರುವ ಕಡೆಗೆ ಅವರೂ ಬರುತ್ತಾರೆ.

ಶ್ರೀ ಸಿ. ಚೆನ್ನಿಗಪ್ಪ :— ಮಾನ್ಯ ಮುಖ್ಯಮಂತ್ರಿಗಳು ಎಲ್ಲರಿಗೂ ಒಂದು ನ್ಯಾಯ ಮಾಡಬೇಕೆಂಬ ಇಚ್ಛೆ ಉಳ್ಳ ಒಬ್ಬ ಪ್ರಾಮಾಣಿಕ ಮುಖ್ಯಮಂತ್ರಿಗಳು. ನೀವು ಬೇಕು ಎಂದು ಹೇಳಬೇಡಿ.

ಶ್ರೀ ಕೆ.ಎಸ್. ಈಶ್ವರಪ್ಪ :— ನಾನು ಮೂರು ಘಟನೆ ಪ್ರಸ್ತಾಪ ಮಾಡಿದ್ದೇನೆ. ನಿಮಗೆ ಬಿಟ್ಟಿದ್ದು. ನಾಲ್ಕನೆಯ ಘಟನೆ.

ಶ್ರೀ ವಾಟಾಳ್ ನಾಗರಾಜ್ :— ಮಾನ್ಯ ಚೆನ್ನಿಗಪ್ಪನವರು ಮಾನ್ಯ ಮುಖ್ಯಮಂತ್ರಿಗಳ ಬಗ್ಗೆ ಎಷ್ಟು ಅಭಿಮಾನ ತೋರಿಸಿಬಿಟ್ಟರು ಎಂದು ನನಗೆ ಆಶ್ಚರ್ಯ ಆಗುತ್ತದೆ.

ಶ್ರೀ ಸಿ. ಚೆನ್ನಿಗಪ್ಪ :— ದಯಮಾಡಿ ತಾವು ಕಂಡಿದ್ದೀರಿ. ಮಾನ್ಯ ಅಧ್ಯಕ್ಷರ ಮೂಲಕ ತಮಗೆ ತಿಳಿಸುತ್ತೇನೆ. ನಾವು ಯಾವತ್ತೂ ರಿವೇಂಜ್ ಪಾಲಿಟಿಕ್ಸ್ ಮಾಡಿಲ್ಲ. ನಮ್ಮ ಸರ್ಕಾರವೂ ಈಗ ಮಾಡಿಲ್ಲ, ನಮ್ಮ ಪಕ್ಷವೂ ಮಾಡಿಲ್ಲ. ನಮ್ಮ ಮಾನ್ಯ ಮುಖ್ಯಮಂತ್ರಿಗಳು ಮಾಡಿಲ್ಲ. ಮಾನ್ಯ ಅಧ್ಯಕ್ಷರ ಮೂಲಕ ಅದನ್ನು ಸ್ಪಷ್ಟಪಡಿಸುತ್ತೇನೆ.

ಅಧ್ಯಕ್ಷರು :— ಅವರು ಹೇಳಿದ್ದು ಸತ್ಯ ಸತ್ಯ ಸತ್ಯ.

ಶ್ರೀ ಕೆ.ಎಸ್. ಈಶ್ವರಪ್ಪ :— ಈ ಮೂರು ಘಟನೆ ಆಯಿತು. ಇದೊಂದು ಕಳಂಕ ಎಂಬ ಅಂಶ ನನಗಂತೂ ಅನಿಸುತ್ತಿದೆ. ತೀರ್ಮಾನ ನಿಮಗೆ ಬಿಡುತ್ತೇನೆ. ನಾಲ್ಕನೆಯ ಘಟನೆ ಬಗ್ಗೆ ಹೇಳುತ್ತೇನೆ. ಇಲ್ಲೆಲ್ಲಾ ಸಿಂಧ್ಯಾರವರಿಗೆ ರಾಮಕೃಷ್ಣ ಹೆಗಡೆ ಅವರಿಗೆ ಚಪ್ಪಲಿ ಬಿದ್ದರೆ ಅಲ್ಲಿ ಬಸವೇಶ್ವರ ಪ್ರತಿಮೆಗೆ ಚಪ್ಪಲಿ ಬಿತ್ತು. ನಾನು ಇದನ್ನು ತುಂಬಾ ನೊಂದು ಹೇಳುತ್ತಿದ್ದೇನೆ. ಇದು ಯಾವುದೋ ಒಬ್ಬ ವ್ಯಕ್ತಿಯ ಪಕ್ಷದ ಪ್ರಶ್ನೆ

ಅಲ್ಲ. ನಾನು ಅವರ ಗುಂಪುಗಾರಿಕೆಯ ಪ್ರಶ್ನೆಗೂ ಬರುತ್ತಿಲ್ಲ. ಇಡೀ ದೇಶ ಕ್ರಾಂತಿಕಾರಿ ಬಸವಣ್ಣನವರ ಬಗ್ಗೆ ಒಂದು ಕಲ್ಪನೆ ಇಟ್ಟುಕೊಂಡು ಹೋಗುತ್ತಿರುವ ಸಂದರ್ಭದಲ್ಲಿ ಈ ಘಟನೆ ನಡೆದಿದೆ. ಸನ್ಮಾನ್ಯ ಮುಖ್ಯಮಂತ್ರಿಗಳು ಈ ಘಟನೆ ಬಗ್ಗೆ ಕ್ರಮ ತೆಗೆದುಕೊಂಡಿದ್ದೀರಿ., ಯಾರಾಯರನ್ನು ಬಂಧಿಸಿದ್ದೀರಿ ಗೊತ್ತಿದೆ. ಯಾರೋ ಕೆಲವರನ್ನು ಬಂಧಿಸಿದ್ದೀರಿ, ನಾನು ಇಲ್ಲ ಎಂದು ಹೇಳುವುದಿಲ್ಲ. ಏಕೆಂದರೆ ಯಾವುದೇ ಪಕ್ಷದಲ್ಲಿ ಗುಂಪುಗಾರಿಕೆ ಎನ್ನುವಂತಹ ಪ್ರಶ್ನೆ ಬಂದರೂ ಸಹ ಯಾವ ಮಟ್ಟಕ್ಕೆ ಪಕ್ಷಗಳು ಹೋಗುತ್ತಿವೆ ಎಂದು ಈ ಘಟನೆಯಿಂದ ಕಾಣುತ್ತಿದೆ.

(ಮಾನ್ಯ ಉಪಾಧ್ಯಕ್ಷರು (ಶ್ರೀ ಚಂದ್ರಶೇಖರರೆಡ್ಡಿ ದೇಶಮುಖ್ ಮದನಾ) ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಅದಕೋಸ್ಕರ ತಾವು ಗಮನಿಸಿ ಈ ಒಂದು ಘಟನೆ, ಬಸವೇಶ್ವರರಂತಹ ಒಬ್ಬ ಮಹಾನ್ ಪುರುಷನಿಗೆ ಆಗಿರುವಂತಹ ಒಂದು ದೊಡ್ಡ ಅವಮಾನ. ಇದು ಕೇವಲ ಅವರಿಗಷ್ಟೇ ಆಗಿರುವ ಅವಮಾನವಲ್ಲ, ಇದು ಇಡೀ ರಾಜ್ಯಕ್ಕೆ ಆಗಿರುವ ಅವಮಾನ, ದೇಶಕ್ಕೆ ಆಗಿರುವ ಅವಮಾನವಾಗಿದೆ. ಕಾಂಗ್ರೆಸ್ ಪಕ್ಷದಲ್ಲಿ ನಡೆದಿರುವಂತಹ ಗುಂಪುಗಾರಿಕೆಯಿಂದಾಗಿ ಈ ರೀತಿಯ ಪ್ರಯತ್ನ ನಡೆದಿದೆ. ಇದು ತುಂಬಾ ನೋವನ್ನು ನನಗೆ ತಂದಿದೆ. ದಯವಿಟ್ಟು ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂಬ ಅಂಶವನ್ನು ಕೂಡ ತಿಳಿಸಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಕೇವಲ ಚರ್ಚೆಗೋಸ್ಕರ ನಾನು ಇಲ್ಲಿ ಮಾತನಾಡುವುದಕ್ಕೆ ನಿಂತಿಲ್ಲ. ರಾಜ್ಯದಲ್ಲಿ ಐಎಸ್ಐ ಚಟುವಟಿಕೆಗಳು ನಡೆಯುತ್ತಿರುವ ಬಗ್ಗೆ ಮಾನ್ಯ ಗೃಹ ಸಚಿವರಾದ ಸಿಂಧ್ಯಾರವರೇ ಶಂಕೆ ವ್ಯಕ್ತಪಡಿಸಿದ್ದಾರೆ. ತಾವು ಮಂಗಳೂರಿಗೆ ಹೋಗಿದ್ದಾಗ ಇದನ್ನೆಲ್ಲ ಗಮನಿಸಿ ತುಂಬಾ ಸ್ಪಷ್ಟವಾದ ಹೇಳಿಕೆ ಕೊಟ್ಟಿದ್ದೀರಿಯ ಇದು ಇವತ್ತು ನಿನ್ನೆಯದಲ್ಲ. ಭಟ್ಕಳದಲ್ಲಿ ಡಾಕ್ಟರ್ ಚಿತ್ತರಂಜನ್‌ರವರ ಕೊಲೆಯಾಯಿತು. ಅದಕ್ಕೆ ಮುಂದೆ ಭಟ್ಕಳದಲ್ಲೂ ಕೂಡ ಗಲಾಟೆ ಆಗಿತ್ತು. ಆದರಿಂದಾಗಿ ಅನೇಕ ವ್ಯಕ್ತಿಗಳು ಕೂಡ ಸತ್ತರು. ಆ ಸಂದರ್ಭದಲ್ಲಿ ಆಗಿನ ಮುಖ್ಯಮಂತ್ರಿಗಳಾಗಿದ್ದ ಶ್ರೀ ವೀರಪ್ಪ ಮೊಯ್ಲಿಯವರು ಅಲ್ಲಿನ ಗಲಾಟೆಗಳ ಬಗ್ಗೆ ತನಿಖೆ ನಡೆಸಲು ನ್ಯಾಯಮೂರ್ತಿ ಜಗನ್ನಾಥ ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಒಂದು ಆಯೋಗವನ್ನು ನೇಮಕ ಮಾಡಿದ್ದರು. ಅದರ ವರದಿಯನ್ನು ಸರ್ಕಾರಕ್ಕೆ ನೀಡಿದ್ದಾರೆಯೇ? ಅದರಲ್ಲಿ ಏನಾದರೂ ರಾಜ್ಯದಲ್ಲಿ ಐಎಸ್ಐ ಚಟುವಟಿಕೆಗಳು ನಡೆಯುತ್ತಿರುವ ಬಗ್ಗೆ ಇದೆಯೇ?ಏಕೆಂದರೆ ಮಾನ್ಯ ಸಿಂಧ್ಯಾರವರು ಈ ಬಗ್ಗೆ ಹೇಳಿದ್ದಾರೆ, ನಾವು ಕೂಡಾ ಹೇಳಿದ್ದೀರಿ. ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತಿದ್ದೀರಿ ಎನ್ನುವುದು ಬಹಳ ಮುಖ್ಯ.ಇಲ್ಲದಿದ್ದರೆ ಯಾರು ಬೇಕಾದರೂ ಏನು ಬೇಕಾದರೂ ಮಾಡಬಹುದು, ವಿದೇಶಗಳಿಂದ ಬರಬಹುದು ಎನ್ನುವಂತಹ ಪ್ರಯತ್ನಗಳು ಇವತ್ತು ಈ ದೇಶದಲ್ಲಿ ನಡೆಯುತ್ತಿವೆ. ಕರ್ನಾಟಕ

ರಾಜ್ಯದಲ್ಲಿ, ಬೆಂಗಳೂರು ವಿಶೇಷವಾಗಿ ಕರಾವಳಿ ಪ್ರದೇಶವನ್ನು ತಮ್ಮ ಕೇಂದ್ರವನ್ನಾಗಿ ಮಾಡಿಕೊಂಡು ಚಟುವಟಿಕೆಗಳನ್ನು ನಡೆಸುತ್ತಿದ್ದಾರೆ. ಸರ್ಕಾರ ಈ ಬಗ್ಗೆ ಬಿಗಿ ಧೋರಣೆಯನ್ನು ತಳೆಯಬೇಕೆಂದು ನಾನು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ. ಕರ್ನಾಟಕ ರಾಜ್ಯದಲ್ಲಿ ಹಣಕಾಸಿನ ಕೊರತೆ ಏನೂ ಇಲ್ಲ. ಸಾಕಷ್ಟು ಹಣವನ್ನು ನಾವು ಬಿಡುಗಡೆ ಮಾಡುತ್ತಿದ್ದೇವೆ ಎನ್ನುವಂತಹ ಮಾತುಗಳನ್ನು ಇವರು ಪದೇ ಪದೆ ಹೇಳುತ್ತಿರುವುದನ್ನು ನಾವು ಕಂಡಿದೇವೆ. ಕೊಳಚೆ ಪ್ರದೇಶಗಳ ಅಭಿವೃದ್ಧಿಗೆ ಮತ್ತು ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದವರ ಜನತೆಗಾಗಿ ಕೇಂದ್ರ ಸರ್ಕಾರ ರಾಜ್ಯ ಸರ್ಕಾರಕ್ಕೆ ಹಣವನ್ನು ಬಿಡುಗಡೆ ಮಾಡುತ್ತಿದೆ. ಮಾನ್ಯ ಅಧ್ಯಕ್ಷರೆ, ತಮಗೆ ಗೊತ್ತಿರುವಂತೆ ಬಹಳ ಬಡತನದಲ್ಲಿರತಕ್ಕಂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನಾಂಗದವರು ಈ ಕೊಳಚೆ ಪ್ರದೇಶಗಳಲ್ಲಿ ವಾಸ ಮಾಡುತ್ತಿರುತ್ತಾರೆ. ನಾನು ಇಲ್ಲಿ ಜಾತಿ ತರಲಿಕ್ಕೆ ಇಷ್ಟ ಪಡುವುದಿಲ್ಲ. ಇವರಿಗಾಗಿ ಈ ರಾಜ್ಯ ಸರ್ಕಾರ ಎಷ್ಟು ಹಣವನ್ನು ಖರ್ಚು ಮಾಡಬೇಕಾಗಿತ್ತು? ಎಷ್ಟು ಹಣ ಖರ್ಚು ಮಾಡಿದೆ ಎಂಬ ವಿಷಯವನ್ನು ನಂತರ ಚರ್ಚಿಸೋಣ. 1997-98 ಮತ್ತು 1998-99 ಈ ಎರಡು ವರ್ಷಗಳಲ್ಲಿ ಕೇಂದ್ರ ಸರ್ಕಾರ ಕೊಳಚೆ ಪ್ರದೇಶಗಳ ನಿವಾಸಿಗಳ ಅಭಿವೃದ್ಧಿಗಾಗಿ ಅಂದರೆ ಅಲ್ಲಿ ರಸ್ತೆ, ಚರಂಡಿ, ದೀಪ ಮುಂತಾದ ನಾಗರೀಕ ಸೌಲಭ್ಯಗಳನ್ನು ಕಲ್ಪಿಸಿಕೊಂಡು ಸಲುವಾಗಿ ರಾಜ್ಯ ಸರ್ಕಾರಕ್ಕೆ ಹಣವನ್ನು ಬಿಡುಗಡೆ ಮಾಡಿದೆ. ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಬಿಡುಗಡೆ ಮಾಡಿದಂತಹ ಹಣದ ಪೂರ್ಣ ವಿವರಗಳು ನನ್ನ ಬಳಿ ಇವೆ. ಜುಲೈ ಮತ್ತು ಆಗಸ್ಟ್ 1997ರಲ್ಲಿ 270 ಲಕ್ಷ ರೂ.ಗಳನ್ನು ಕೇಂದ್ರ ರಾಜ್ಯಕ್ಕೆ ಬಿಡುಗಡೆ ಮಾಡಿದೆ. ಪ್ರತಿ ಮೂರು ತಿಂಗಳಿಗೊಮ್ಮೆ ರಾಜ್ಯ ಸರ್ಕಾರಕ್ಕೆ ಕೇಂದ್ರ ಹಣವನ್ನು ಬಿಡುಗಡೆ ಮಾಡಿದೆ. ನನ್ನ ಬಳಿ ಇರುವ ಮಾಹಿತಿ ಪ್ರಕಾರ ನವೆಂಬರ್ 1998ರ ವರೆಗೆ ಕೇಂದ್ರ ಸರ್ಕಾರ ಇದ್ದಕಾಗಿ ರಾಜ್ಯಕ್ಕೆ 25 ಕೋಟಿ ರೂ.ಗಳನ್ನು ಬಿಡುಗಡೆ ಮಾಡಿದೆ. ನವೆಂಬರ್ ತಿಂಗಳಿನಿಂದೀಚೆಗೆ ಎಷ್ಟು ಹಣ ಬಿಡುಗಡೆ ಆಗಿದೆಯೋ ನನಗೆ ಗೊತ್ತಿಲ್ಲ. ಆ ಹಣವನ್ನು ಸರ್ಕಾರ ಬಿಡುಗಡೆ ಮಾಡಿಲ್ಲ. ನಾನು ಇದನ್ನು ತುಂಬಾ ನೋವಿನಿಂದ ಹೇಳುತ್ತಿದ್ದೇನೆ. ಆ ಕೊಳಚೆ ಪ್ರದೇಶಗಳ ನಿವಾಸಿಗಳ ಜನರ ಶಾಪ ಈ ಸರ್ಕಾರಕ್ಕೆ ತಟ್ಟುತ್ತದೆ. ಕೇಂದ್ರ ಸರ್ಕಾರದ ಹಣದ ಜೊತೆಗೆ ರಾಜ್ಯ ಸರ್ಕಾರವು ತನ್ನ ಹಣವನ್ನೂ ಸೇರಿಸಿ ಖರ್ಚು ಮಾಡಬೇಕಾಗಿತ್ತು. ಆದರೆ ಕಳೆದ ಎರಡು ವರ್ಷಗಳಿಂದ ಒಂದು ಪೈಸೆಯನ್ನೂ ಕೂಡ ಸರ್ಕಾರ ಬಿಡುಗಡೆ ಮಾಡಿಲ್ಲ. ನಾನು ಇದನ್ನು ತುಂಬಾ ನೋವಿನಿಂದ ಹೇಳುತ್ತಿದ್ದೇನೆ. ಆ ಕೊಳಚೆ ಪ್ರದೇಶಗಳ ನಿವಾಸಿಗಳ ಜನರ ಶಾಪ ಈ ಸರ್ಕಾರಕ್ಕೆ ತಟ್ಟುತ್ತದೆ. ಕೇಂದ್ರ ಸರ್ಕಾರದ ಹಣದ ಜೊತೆಗೆ ರಾಜ್ಯ ಸರ್ಕಾರವು ತನ್ನ ಹಣವನ್ನೂ ಸೇರಿಸಿ ಖರ್ಚು ಮಾಡಬೇಕಾಗಿತ್ತು. ಆದರೆ ಕಳೆದ ಎರಡು ವರ್ಷಗಳಿಂದ ಒಂದು ಪೈಸೆಯನ್ನೂ ಕೂಡ ಸರ್ಕಾರ ಬಿಡುಗಡೆ ಮಾಡಿಲ್ಲ. ತಾವು ಮಂತ್ರಿ

ಮಂಡಲದ ಸದಸ್ಯರ ಸಂಖ್ಯೆಯನ್ನು 51ಕ್ಕೆ ಹೆಚ್ಚಿಸಿಕೊಂಡಿರಿ, ಅವರಿಗೆ ಬೇಕಾದ ಬಂಗಲೆ, ಕಾರು, ಪೆಟ್ರೋಲ್ ಕೊಟ್ಟಿದ್ದೀರಿ. ಈ ರೀತಿ ದುಂದು ವೆಚ್ಚ ಮಾಡುವುದಕ್ಕೆ ನಿಮಗೆ ಈ ರಾಜ್ಯದ ಜನ ಓಟು ಕೊಟ್ಟಿದ್ದಾರೆಯೇ? ಬಡವರ ಅಭಿವೃದ್ಧಿ ಮಾಡಲಿಕ್ಕೆ ನಿಮ್ಮ ಕೈಯ್ಯಲ್ಲಿ ಶಕ್ತಿ ಇಲ್ಲದಿದ್ದರೆ ಕೊನೆಯ ಪಕ್ಷ ಕೇಂದ್ರದಿಂದ ಬಂದಂತಹ ಹಣವನ್ನಾದರೂ ನೀವು ಖರ್ಚು ಮಾಡಬೇಕಾಗಿತ್ತು. ಆದರೆ ನೀವು ಈ ಹಣವನ್ನು ಮಂತ್ರಿಗಳ ಉದ್ಧಾರಕ್ಕೆ, ಅವರ. ಐಷಾರಾಮಿ ಜೀವನಕ್ಕೆ ಬಳಸುತ್ತಿದ್ದೀರಿ. ಇದು ನ್ಯಾಯವೇ? ಈ ಬಗ್ಗೆ ನಾವು ಯಾರನ್ನು ಕೇಳಬೇಕು? ರಾಜ್ಯಪಾಲರ ಮುಖಾಂತರ ಹಿಂದುಳಿದ ವರ್ಗಗಳು, ಅಲ್ಪಸಂಖ್ಯಾತರು, ಕೊಳಚೆ ನಿವಾಸಿಗಳು ಮತ್ತು ಪರಿಶಿಷ್ಟ ಜನಾಂಗದ ಹಿಂದುಳಿದ ವರ್ಗಗಳು, ಅಲ್ಪಸಂಖ್ಯಾತರು, ಕೊಳಚೆ ನಿವಾಸಿಗಳು ಮತ್ತು ಪರಿಶಿಷ್ಟ ಜನಾಂಗದ ಜನರ ಅಭಿವೃದ್ಧಿ ಮಾಡುವುದು ನಮ್ಮ ಗುರಿ ಎಂದು ನೀವು ಹೇಳಿಸಿದ್ದೀರಿ. ಇದಕ್ಕೇನು ಉತ್ತರ ಕೊಡುತ್ತೀರಿ? ದಯವಿಟ್ಟು ಮಾನ್ಯ ಮುಖ್ಯಮಂತ್ರಿಗಳು ತಾವು ಉತ್ತರ ಕೊಡುವ ಸಂದರ್ಭದಲ್ಲಿ ಕೇಂದ್ರದಿಂದ ರಾಜ್ಯಕ್ಕೆ ಬಂದಂತಹ ಈ 25 ಕೋಟಿ ರೂ.ಗಳನ್ನು ತಕ್ಷಣ ಬಿಡುಗಡೆ ಮಾಡುತ್ತೇವೆ ಎಂದು ಹೇಳಿದಲ್ಲಿ ನಾನು ಇಲ್ಲಿ ಇಷ್ಟು ಹೊತ್ತು ಗಂಟಲು ಕಿರುಚಿಕೊಂಡು ಮಾತನಾಡಿದ್ದಕ್ಕೂ ಸಾರ್ಥಕವಾಗುತ್ತದೆ ಮತ್ತು ಸರ್ಕಾರಕ್ಕೂ ಕೂಡ ಬಡವರ ಬಗ್ಗೆ ಕಳಕಳಿ ಇದೆ ಎಂಬುದು ಗೊತ್ತಾಗುತ್ತದೆ. ಇದೇ ಸರ್ಕಾರ ಕೊಟ್ಟಿರುವ ಅಂಕಿ ಅಂಶಗಳ ಪ್ರಕಾರ ಪರಿಶಿಷ್ಟ ಜಾತಿಗೆ ಇರುವಂತಹ ವಿಶೇಷ ಘಟಕ ಯೋಜನೆಯಡಿಯಲ್ಲಿ 1994-95 ರಿಂದ 1998-99ರವರೆಗಿನ ಕಳೆದ ಐದು ವರ್ಷಗಳ ಅವಧಿಯಲ್ಲಿ ಕೇಂದ್ರದಿಂದ ರಾಜ್ಯಕ್ಕೆ ಬಂದಂತಹ ಹಣವೆಲ್ಲವನ್ನೂ ಕೂಡ ಪೂರ್ಣಕ್ಕೆ ಇವರು ಖರ್ಚು ಮಾಡಿದ್ದಾರೆ. ಅದಕ್ಕಾಗಿ ನಾನು ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ 1994-95 ರಲ್ಲಿ ಬಂದಂತಹ 187.38 ಲಕ್ಷ ರೂ.ಗಳು, 1995-96ರಲ್ಲಿ ಬಂದ 222 ಲಕ್ಷ ರೂ.ಗಳು, 1996-97 ರಲ್ಲಿ ಬಂದ 196.88 ಲಕ್ಷ ರೂ.ಗಳು ಮತ್ತು 1997-98 ರಲ್ಲಿ ಬಂದಂತಹ 143.46 ಲಕ್ಷ ರೂ.ಗಳನ್ನು ಈ ಸರ್ಕಾರ ಪೂರ್ಣವಾಗಿ ಖರ್ಚು ಮಾಡಿದೆ. ಹಾಲಿ ನಡೆಯುತ್ತಿರುವಂತಹ 1998-99ನೇ ವರ್ಷದಲ್ಲಿ 291.12 ಲಕ್ಷ ರೂ.ಗಳು ಕೇಂದ್ರದಿಂದ ರಾಜ್ಯಕ್ಕೆ ಬಂದಿದೆ. ಆ ಹಣ ವೆಚ್ಚವಾಗಿರುವ ಬಗ್ಗೆ ನನ್ನ ಬಳಿ ಅಂಕಿ ಅಂಶಗಳು ಇಲ್ಲ. ಆ ಹಣವನ್ನು ರಾಜ್ಯ ಸರ್ಕಾರ ಇನ್ನೂ ಬಿಡುಗಡೆ ಮಾಡಿಲ್ಲದಿದ್ದಲ್ಲಿ ಅದನ್ನು ಬೇಗನೇ ಪೂರ್ಣ ಬಿಡುಗಡೆ ಮಾಡಲಿ. ಆದರೆ ರಾಜ್ಯ ಸರ್ಕಾರದ ಸ್ಥಿತಿಯೇನು? ರಾಜ್ಯ ಸರ್ಕಾರ 1994-95 ರಲ್ಲಿ ತನ್ನ ಪಾಲಿನ 38.10 ಕೋಟಿ ರೂ.ಗಳನ್ನು, 1995-96ರಲ್ಲಿ 19.40 ಕೋಟಿ ರೂ.ಗಳನ್ನು 1996-97 ರಲ್ಲಿ 70.70 ಕೋಟಿ ರೂ.ಗಳನ್ನು 1997-98ರಲ್ಲಿ 60.81 ಕೋಟಿ ರೂ. ಗಳನ್ನು ಖರ್ಚು ಮಾಡಿಲ್ಲ. ಇದಕ್ಕೆ ನಾವು ಏನು ಹೇಳಬೇಕು? ಹಿಂದಿನ ವರ್ಷಗಳಲ್ಲಿ ಖರ್ಚಾಗದೇ ಉಳಿದ ಹಣ

ಲ್ಯಾಪ್ಸ್ ಆಗುತ್ತದೋ ಇಲ್ಲವೋ ನನಗೆ ಗೊತ್ತಿಲ್ಲ. ಮಾನ್ಯ ಹಾಲಿ ಅಥವಾ ಮಾಜಿ ಮುಖ್ಯಮಂತ್ರಿಗಳು ನನಗೆ ಇದರ ಬಗ್ಗೆ ತಿಳುವಳಿಕೆ ಕೊಡಬೇಕು. ಅದು ಲ್ಯಾಪ್ಸ್ ಆಗುವುದಿಲ್ಲ ಎನ್ನುವುದಾದರೆ ಬಹಳ ಸಂತೋಷ. ಈಗಲಾದರೂ ರಾಜ್ಯ ಸರ್ಕಾರ ಆ ಎಸ್‌ಸಿಪಿ ಹಣವನ್ನು ಬಿಡುಗಡೆ ಮಾಡಲಿ. ಇಲ್ಲದಿದ್ದಲ್ಲಿ ಇನ್ನು ಮುಂದೆ ಯಾವತ್ತಿಗೂ ಬಡವರು, ಅಲ್ಪಸಂಖ್ಯಾತರು, ಹಿಂದುಳಿದ ವರ್ಗದವರು, ದಲಿತರು ಇವರುಗಳ ಬಗ್ಗೆ ಮಾತನಾಡಲಿಕ್ಕೆ ಈ ಸರ್ಕಾರಕ್ಕೆ ಹಕ್ಕಿಲ್ಲ, ಸರ್ಕಾರ . ಈ ಪದಗಳನ್ನು ಬಳಸಲೇಕೂಡದು. ಮೀಸಲಿಟ್ಟಿಂತಹ ಹಣವನ್ನು ಖರ್ಚು ಮಾಡುವುದಕ್ಕೆ ಸರ್ಕಾರಕ್ಕೆ ಆಗಿದಿದ್ದ ಮೇಲೆ ಅಧಿಕಾರದಲ್ಲಿ ಏಕೆ ಇರಬೇಕು? ಇದು ನಾಟಕವಲ್ಲವೇ? ಬಾಕಿ ಹಣ ಏನಿದೆಯೋ ಅದನ್ನು ತಕ್ಷಣ ಬಿಡುಗಡೆ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಗಿರಿಜನ ಉಪಯೋಜನೆ ಅಡಿಯಲ್ಲಿ ವೆಚ್ಚ ಮಾಡಬೇಕಾದಂತಹ ಹಣ ಮತ್ತು ಎಸ್‌ಸಿಪಿ ಯೋಜನೆಯಡಿಯ ಹಣವನ್ನು ಪೂರ್ಣ ಬಿಡುಗಡೆ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇವೆ. ನಾನು ಈಗ ಹೇಳಲಿರುವ ವಿಷಯ ಸತ್ಯವೋ ಸುಳ್ಳೋ ನನಗೆ ಗೊತ್ತಿಲ್ಲ. ಸನ್ಮಾನ್ಯ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಸಚಿವರಾದ ವೆಂಕಟೇಶ್‌ರವರು ಒಂದು ಹೇಳಿಕೆ ಕೊಟ್ಟಿದ್ದಾರೆ. ಅದರಲ್ಲಿ ಅವರು ರಾಜಕಾರಣದ ಬಗ್ಗೆ ಹೇಳಿರುವುದನ್ನು ಹೇಳಲಿಕ್ಕೆ ನಾನು ಇಲ್ಲಿ ಇಚ್ಛಿಪಡುವುದಿಲ್ಲ. ಅವರು ತನಮ್ಮ ಹೇಳಿಕೆಯಲ್ಲಿ ಮಲೆನಾಡು ಅಭಿವೃದ್ಧಿ ಮಂಡಳಿಗೆ ನಿಗದಿಪಡಿಸಿರುವ ಮೊತ್ತವನ್ನು 30 ಕೋಟಿ ರೂ.ಗಳಿಂದ 25 ಕೋಟಿ ರೂ.ಗಳಿಗೆ ಇಳಿಸಲಾಗಿದೆ, ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿಗೆ ನಿಗದಿಪಡಿಸಿದ ಮೊತ್ತವನ್ನು 60 ಕೋಟಿ ರೂ.ಗಳಿಂದ 40 ಕೋಟಿ ರೂ.ಗಳಿಗೆ ಇಳಿಸಲಾಗಿದೆ ಹಾಗೂ ಬಯಲು ಸೀಮೆ ಅಭಿವೃದ್ಧಿ ಮಂಡಳಿಗೆ ನಿಗದಿಪಡಿಸಿದ 10 ಕೋಟಿ ರೂ.ಗಳನ್ನು 6 ಕೋಟಿ ರೂ.ಗಳಿಗೆ ಇಳಿಸಲಾಗಿದೆ ಎಂದು ಹೇಳಿದ್ದಾರೆ. ಈ ರೀತಿ ಆಗಿರುವುದು ನಿಜವಾಗಿದ್ದಲ್ಲಿ, ದಯವಿಟ್ಟು ಮಾನ್ಯ ಮುಖ್ಯಮಂತ್ರಿಗಳು ಅದನ್ನು ಬದಲಾಯಿಸಿ ಮೊದಲು ಏನು ಹಣವನ್ನು ಈ ಮಂಡಳಿಗಳಿಗೆ ನೀಡಲು ನಿಶ್ಚಯಿಸಲಾಗಿತ್ತೋ ಅಷ್ಟೇ ಹಣವನ್ನು ಬಿಡುಗಡೆ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ನಿನ್ನೆ ಮಲೆನಾಡು ಅಭಿವೃದ್ಧಿ ಮಂಡಳಿ ಬಗ್ಗೆ ಸ್ಪಷ್ಟವಾಗಿ ನಾವು ಹೇಳಿದ್ದೆವು. ಆ ಮಂಡಳಿಗೆ 381/2 ಕೋಟಿ ರೂ.ಗಳನ್ನು ಏನು ನಿಗದಿ ಮಾಡಿದ್ದರೋ ಅದರಲ್ಲಿ ಕೇವಲ 121/2ಕೋಟಿ ರೂ.ಗಳನ್ನು ಮಾತ್ರ ಬಿಡುಗಡೆ ಮಾಡಲಾಗಿದೆ. ಬಾಕಿ ಉಳಿದಿರುವ 26 ಕೋಟಿ ರೂ.ಗಳನ್ನು ತಕ್ಷಣ ಬಿಡುಗಡೆ ಮಾಡಬೇಕು ಮತ್ತು ಬರುವ ವರ್ಷದಲ್ಲಿ ಕಾರ್ಯಗತಗೊಳಿಸಬೇಕಾದ ಕಾರ್ಯಕ್ರಮಗಳ ಬಗ್ಗೆ ಗಮನ ಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ. ಹಣಕಾಸಿನ ಪರಿಸ್ಥಿತಿ ಚೆನ್ನಾಗಿದೆ, ನಮ್ಮ ಹತ್ತಿರ ಹಣ ಇದೆ ಎಂದು ಸರ್ಕಾರ ಹೇಳುತ್ತಿದ್ದರೂ ಕೂಡ ಬಾಕಿ ಹಣವನ್ನು ಬಿಡುಗಡೆ ಮಾಡುತ್ತಿಲ್ಲ. ನೈವೇಲಿ ಲಿಗ್ನೈಟ್

ಕಾರ್ಪೊರೇಷನ್‌ಗೆ ಕೇವಲ 300 ಕೋಟಿ ರೂ.ಗಳನ್ನು ಕೊಡಬೇಕಾಗಿದೆ. ಇದರ ಬಗ್ಗೆ ಮಾತುಕತೆಗಳು ನಡೆಯುತ್ತಿವೆ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಬಹಳ

1.40 ಪಿ.ಎಂ.

ಸ್ಪಷ್ಟವಾಗಿ ಹೇಳಿದ್ದಾರೆ. ಏಕೆ ಹಣ ಇಲ್ಲವಾ? ಅದಕ್ಕೋಸ್ಕರ ಹಣಕಾಸಿನ ಸ್ಥಿತಿಯನ್ನು ಕೂಡ ನಾನು ತುಂಬ ಸ್ಪಷ್ಟವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಒಂದು ವೈಟ್ ಪೇಪರ್ ಅವರು ಬಹಿರಂಗಪಡಿಸಲಿ. ಸಿದ್ಧರಾಮಯ್ಯನವರು ನಮ್ಮ ಖಜಾನೆ ಭರ್ತಿ ಇದೆ ಎಂದು ಹೇಳೇ ಹೇಳುತ್ತಾರೆ. ಅದಕ್ಕೋಸ್ಕರ ನಾನು ಹೇಳುತ್ತಿರುವುದು, ನಮ್ಮ ಖಜಾನೆ ಯಾವ ಸ್ಥಿತಿಯಲ್ಲಿದೆ ಎಂದು ವೈಟ್ ಪೇಪರ್ ಬಿಡುಗಡೆ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ. ಜೊತೆಗೆ ಸನ್ಮಾನ್ಯ ಹೊಸ ಮಂತ್ರಿಗಳಾದ ಉಮೇಶ್ ಕತ್ತಿಯವರು ಒಂದು ಹೇಳಿಕೆ ಕೊಟ್ಟಿದ್ದಾರೆ. ಪ್ರತಿ ವಿಧಾನ ಸಭಾ ಕ್ಷೇತ್ರದ ಅಭಿವೃದ್ಧಿಗೆ 45 ಲಕ್ಷ ರೂಪಾಯಿ ಬಿಡುಗಡೆ ಮಾಡುತ್ತೇವೆ ಎಂದು. ಹೇಳಿಕೆ ಮಾತ್ರ ಕೊಟ್ಟಿದ್ದಾರೆ, ಮುಖ್ಯಮಂತ್ರಿಯವರ ಹತ್ತಿರ ಮಾತನಾಡಿದ್ದಾರೊ ಇಲ್ಲವೋ ಗೊತ್ತಿಲ್ಲ. ಇದು ಹೇಳಿಕೆ ಮಾತ್ರ ಆಗಬಾರದು. ನಮ್ಮ ಕ್ಷೇತ್ರಕ್ಕೆ ಹೋದಾಗ ಜನ ನಮ್ಮನ್ನು ಕೇಳುತ್ತಾರೆ. 45 ಲಕ್ಷ ರೂಪಾಯಿ ಬಿಡುಗಡೆ ಮಾಡುತ್ತಿದ್ದಾರೆ, ನೀವು ಯಾವಾಗ ನಮ್ಮ ರಸ್ತೆ ಮಾಡಿಸುತ್ತಿದ್ದೀರಿ, ಅವರು ಅಭಿವೃದ್ಧಿ ಕಾರ್ಯ ಮಾಡುವುದಕ್ಕೋಸ್ಕರ ಬಿಡುಗಡೆ ಮಾಡಿದ್ದಾರೆಂದು ಹೇಳಿದ್ದಾರೆ. ದಯವಿಟ್ಟು ಈ ದಿಕ್ಕಿನಲ್ಲಿ ಪ್ರಯತ್ನ ಮಾಡಬೇಕೆಂದು ತಮ್ಮ ಮುಖಾಂತರ ಒತ್ತಾಯ ಮಾಡುತ್ತೇನೆ. ಏಕೆಂದರೆ ಇವರು ಹಣ ಇದೆ ಎಂದು ಹೇಳುತ್ತಿದ್ದಾರೆ. ಪಿಡಬ್ಲ್ಯುಡಿ ಎಲ್‌ಓಸಿಗಳು ಹಾಗೆ ಬಾಕಿ ಇದೆ. ಇಂಜನಿಯರ್ ಹತ್ತಿರ ಹೋದರೆ ಟಾರ್ ತರುವುದಕ್ಕೆ ದುಡ್ಡು ಇಲ್ಲ, ಟಾರ್ ಬಂದಿಲ್ಲ, ಎಂದು ಹೇಳುತ್ತಾರೆ. ಅದಕ್ಕೋಸ್ಕರ ಈ ಎಲ್ಲಾ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಪ್ರಯತ್ನ ಮಾಡಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದರ ಜೊತೆಗೆ ಆಡಳಿತ ಪಕ್ಷ ವಿಫಲವಾಯಿತು. ಆದರೆ ಕರ್ನಾಟಕ ರಾಜ್ಯದಲ್ಲಿ ವಿರೋಧ ಪಕ್ಷವಾದ ನಾವು ನಮ್ಮನ್ನೂ ಕೂಡ ಇವರು ನಿರ್ಲಕ್ಷ್ಯದಿಂದ ಕಾಣುತ್ತಿದ್ದಾರೆಂದು ತುಂಬ ನೊಂದು ಹೇಳುತ್ತಿದ್ದೇನೆ. ಏಕೆಂದರೆ ಸಂಬಂಧಪಟ್ಟವರು ಮಾತನಾಡತಕ್ಕಂತಹ ಸಂದರ್ಭದಲ್ಲಿ ಹೇಳಿದರು, ಯಾವುದಾದರೂ ಸ್ಪೆಸಿಫಿಕ್ ಘಟನೆ ಇದ್ದರೆ ಹೇಳಿ ನಾವು ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದರು. ತುಂಬ ಸ್ಪಷ್ಟವಾಗಿ ಹೇಳುತ್ತೇನೆ, ಇಲ್ಲಿ ಒಂದೊಂದು ಹಗರಣವನ್ನೂ ಬಯಲಿಗೆ ತರುವುದಕ್ಕೆ ಪ್ರಸ್ತಾಪ ಮಾಡುವಾಗ ಅಡ್ಡ ಬರುತ್ತಾರೆ. ಕೊನೆಗೆ ಹೋರಾಟ ಮಾಡಿ ಜಗಳ ಮಾಡಿ ಸದನ ಸಮಿತಿಗೆ ಇಲ್ಲ ಸಿಓಡಿಗೆ ಹಾಕುವುದಕ್ಕೆ ಪ್ರಯತ್ನ ಮಾಡುತ್ತೇವೆ. ಈ ಸದನ ಸಮಿತಿ ವರದಿ ಕೊಡುತ್ತದೆ. ಇಂತಹ ಅಧಿಕಾರಿಗಳು ಭ್ರಷ್ಟರು, ಇಂತಹ ಮಂತ್ರಿಗಳು ಭ್ರಷ್ಟರು, ಇಂತಿಂಥ ಕಾರಣಗಳಿಂದ ಹಣ ಲೂಟಿಯಾಗುತ್ತಿದೆ, ಇಂತಿಂಥ

ಕ್ರಮ ಕೈಗೊಳ್ಳಿ ಎಂದು ಹೇಳುತ್ತಾರೆ. ಇವತ್ತಿನವರೆಗೂ ಏನೂ ಕ್ರಮ ತೆಗೆದುಕೊಳ್ಳುತ್ತಿಲ್ಲ. ಅವರಂತೂ ವಿಫಲರಾದರು, ನಮ್ಮನ್ನೂ ಕೂಡ ಜನತೆಯ ಮಧ್ಯೆ ವಿಫಲರಾಗುವಂತೆ ಮಾಡುತ್ತಿದ್ದಾರೆ. ಇದು ಯಾವ ನ್ಯಾಯ? ಪಶು ಔಷಧಿ ಖರೀದಿಯಲ್ಲಿ ಆಗಿರುವಂತಹ ಅವ್ಯವಹಾರದ ಬಗ್ಗೆ ನಮ್ಮ ಉಪನಾಯಕರಾದ ಶ್ರೀ ಸುರೇಶ್ ಕುಮಾರ್‌ರವರು ಪ್ರಸ್ತಾಪ ಮಾಡಿದರು. ಪಿಎಸಿಯವರೆಗೂ ಕಳುಹಿಸುವುದಕ್ಕೆ ಇಲ್ಲಿ ಸಾಕಾಗಿ ಹೋಯಿತು. ಪಿಎಸಿಯಲ್ಲಿ ಎಲ್ಲಾ ಪಕ್ಷಗಳ ಸದಸ್ಯರೂ ಇರುತ್ತಾರೆ. ಚರ್ಚೆಯಾಗಿ ಅವ್ಯವಹಾರ ನಡೆದಿರುವುದು ಸಾಬೀತಾಗಿ ವರದಿ ಕೊಟ್ಟಿದ್ದಾರೆ. ಯಾವ ಅಧಿಕಾರಿ ಬಗ್ಗೆಯೂ ನೀವು ಕ್ರಮ ತೆಗೆದುಕೊಂಡಿಲ್ಲ. ಮೈಸೂರು ಪೇಪರ್ ಮಿಲ್ಸ್‌ಬಗ್ಗೆ ನಮ್ಮ ರಾಜ್ಯದ ಮುಖ್ಯಮಂತ್ರಿಗಳು ತುಂಬ ಸ್ಪಷ್ಟವಾಗಿ ಹೇಳಿದರು, ಮೈಸೂರು ಪೇಪರ್ ಮಿಲ್ ವಿಚಾರ, ಇದರ ಸಾಧನೆ, ಇದರ ತಪ್ಪಿತಸ್ಥರು ಯಾರು ಎಂದು ತೀರ್ಮಾನವಾದರೆ ಯಾರಾದರೂ ಇದರಲ್ಲಿ ಭ್ರಷ್ಟಾಚಾರ ನಡೆಸಿದ್ದಾರೆಂದು ಆದರೆ ಅವರ ಬಗ್ಗೆ ಕಠಿಣವಾದ ಕ್ರಮ ತೆಗೆದುಕೊಳ್ಳುತ್ತೇವೆ ಎಂಬ ಮಾತನ್ನು ಹೇಳಿದ್ದರು. ನಾನು ಏಕೆ ಹೇಳುತ್ತಿದ್ದೇನೆಂದರೆ, ಮೈಸೂರು ಪೇಪರ್ ಮಿಲ್ ಬಗ್ಗೆ ಬಹಳ ಚರ್ಚೆಯಾಗಿ ಕೊನೆಗೆ ಸದನ ಸಮಿತಿಗೆ ತಾವು ಕೊಟ್ಟಿರಿ. ಸದನ ಸಮಿತಿ ವರದಿ ಕೊಟ್ಟಿತು. ಆ ವರದಿಯಲ್ಲಿ ಶ್ರೀ ಸೋಮ್ಲಾನಾಯಕರ ಅಧ್ಯಕ್ಷತೆಯಲ್ಲಿ ಸಮಿತಿ ತುಂಬ ಸ್ಪಷ್ಟವಾಗಿ ಹೇಳಿದೆ. ಇದರಲ್ಲಿ ಎಷ್ಟೆಷ್ಟು ಮಟ್ಟಿಗೆ ಯಾವ ಯಾವ ವ್ಯಕ್ತಿಗಳು ಹಣ ಲೂಟಿ ಮಾಡಿದ್ದಾರೆ, ಹೇಗೆ ಹೇಗೆ ನಡೆಯುತ್ತಿದೆ, ಅವರ ಬಗ್ಗೆ ಏನೇನು ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿದರೂ ಕೂಡ ಇವತ್ತಿನವರೆಗೆ ಅವರ ಬಗ್ಗೆ ಕ್ರಮ ಇಲ್ಲ. ಅಷ್ಟೇ ಅಲ್ಲ, ನಾನು ಏಕೆ ನಿಮ್ಮ ಗಮನ ಸೆಳೆದೆ ಎಂದರೆ, ಹಿಂದೆ ಅವರು ಹೇಳುತ್ತಿದ್ದರು, ಬರೀ ಪ್ರಕಾಶ್ ಎಂಬ ವ್ಯಕ್ತಿ ಎಮ್‌ಡಿ ಆದ ಸಂದರ್ಭದಲ್ಲಿ 56 ಕೋಟಿ ರೂಪಾಯಿ ಲಾಭವಾಯಿತು. ಇವತ್ತಿಗೆ 31.12.98 ಕ್ಕೆ ಒಂದು ಕೋಟಿ 76 ಲಕ್ಷ ನಷ್ಟವಾಗಿದೆ. ಎರಡನೇ ವರ್ಷಕ್ಕೆ ಯಾವಾಗ ಪ್ರಕಾಶ್‌ರವರನ್ನು ತೆಗೆದು ಗಂಗಾಧರಪ್ಪ ಎಂಬ ಎಮ್‌ಡಿಯವರಿಗೆ ಹಾಕಿದರೋ ಇಮ್ಮಿಡಿಯಟ್ ಆಗಿ ಎರಡು ಕೋಟಿ ಲಾಭ ಬಂದಿತು. ಆದರ ಮುಂದಿನ ವರ್ಷ 31 ಲಕ್ಷ ಲಾಭ ಬಂದಿತು. ಈಗ ಡಿಸೆಂಬರ್ ತಿಂಗಳಿನಲ್ಲಿ 176 ಲಕ್ಷ ನಷ್ಟವಾಗಿದೆ. ಅವರು ನನ್ನದು ಒಂದೇ ನಷ್ಟ ಅಲ್ಲ, ಕೇಂದ್ರ ಸರ್ಕಾರದ ಪಾಲಿಸಿ ಹಾಗೆ ಇದೆ ನಾನು ಏನೂ ಮಾಡುವುದಕ್ಕಾಗುವುದಿಲ್ಲ ಎಂದು ಹೇಳುತ್ತಾರೆ. ಇದೇ ಸಂದರ್ಭದಲ್ಲಿ ಹಿಂದೂಸ್ತಾನ್ ನ್ಯೂಸ್ ಪ್ರಿಂಟ್ ಅವರ ವರದಿ ಕೂಡ ಇದೆ. ಇದೇ ಡಿಸೆಂಬರ್ ಒಳಗೆ 12 ಕೋಟಿ ಲಾಭ. ಅದೇ ರೀತಿ ತಮಿಳುನಾಡು ನ್ಯೂಸ್ ಪ್ರಿಂಟ್ ಅಂಡ್ ಪೇಪರ್ ಲಿಮಿಟೆಡ್ ಅವರ ನೆಟ್ ಪ್ರಾಫಿಟ್ 10 ಕೋಟಿ ಲಾಭ. ಇಲ್ಲಿ ನಾವು ಪ್ರಸ್ತಾಪ ಮಾಡುವುದು ಯಾರನ್ನೋ ಬ್ಲಾಕ್‌ಮೇಲ್ ಮಾಡುವ ಪ್ರಯತ್ನ ನಡೆಯುತ್ತಿದೆ. ಇಲ್ಲಿ ನಾವು ಪ್ರಯತ್ನ ಮಾಡಿ ನಿಮ್ಮ ಗಮನಕ್ಕೆ ತಂದು, ಈ ರೀತಿ ಸಮಿತಿಗಳು ವರದಿಕೊಟ್ಟು ಅವರ ಬಗ್ಗೆ ನೀವು ತುರ್ತು ಕ್ರಮ

ತೆಗೆದುಕೊಳ್ಳಲಿಲ್ಲ ಎಂದರೆ, ನಮ್ಮನ್ನೂ ಭ್ರಷ್ಟರನ್ನಾಗಿ ಮಾಡುತ್ತೀರಿ. ನಾನು ನಿಮಗೆ ಕೈ ಮುಗಿದು ಕೇಳುತ್ತೇನೆ, ಈ ರೀತಿ ವರದಿ ಎರಡು ಮೂರು ಸಾರಿ ನಿಮ್ಮ ಸಂದರ್ಭದಲ್ಲಿ ಬಂದಿದೆ. ಪಶು ಔಷಧಿ ಖರೀದಿಯಲ್ಲಿ, ಮೈಸೂರು ಪೇಪರ್ ಮಿಲ್ ವಿಚಾರದಲ್ಲಿ ನೀವು ವರದಿ ತರಿಸಿ ಓದಿ ಭ್ರಷ್ಟಾಚಾರ ನಡೆದಿದ್ದು ತೀರ್ಮಾನವಾದರೆ ಅದರ ಬಗ್ಗೆ ನೀವು ಕ್ರಮ ತೆಗೆದುಕೊಂಡರೆ, ನಮಗೂ ಹೋರಾಟ ಮಾಡಿದ್ದಕ್ಕೆ ಸಮಾಧಾನವಾಗುತ್ತದೆ. ಇಲ್ಲದಿದ್ದರೆ ನಾವು ಏಕೆ ಹೋರಾಟ ಮಾಡಬೇಕು? ಚಟಕ್ಕೋಸ್ಕರ ಮಾಹಿತಿ ತೆಗೆದುಕೊಂಡು ಬಂದು ಇಲ್ಲಿ ಪ್ರಸ್ತಾಪ ಮಾಡುವುದು, ಸದನ ಸಮಿತಿ ಮಾಡುವುದು ವರದಿ ತೆಗೆದುಕೊಳ್ಳುವುದು. ಇಷ್ಟೇ ಆಗುತ್ತದೆ. ಇಷ್ಟು ಆದರೆ ವಿರೋಧ ಪಕ್ಷಗಳು ಮಾಡುವ ಕೆಲಸವೇನು, ನಾವು ಹೋರಾಟ ಮಾಡುವ ಉತ್ಸಾಹ ಬರುತ್ತದೆಯೇ?

ಶ್ರೀ ಜೆ.ಹೆಚ್. ಪಟೇಲ್:— ವರದಿಯಲ್ಲಿ ಏನು ರೆಕಮಂಡ್ ಮಾಡಿದ್ದಾರೆ?

ಶ್ರೀ ಕೆ.ಎಸ್. ಈಶ್ವರಪ್ಪ:— ಆ ವರದಿಯಲ್ಲಿ ಪಲ್ಪ್ ಖರೀದಿಯಲ್ಲಿ ಆಗುತ್ತಿರತಕ್ಕಂಹ ಭ್ರಷ್ಟಾಚಾರ ಏನೇನು, ಆಡಳಿತದಲ್ಲಿ ಇರತಕ್ಕಂತಹ ಅವ್ಯವಹಾರ ಏನು? ಎಂಬುದು ಇದೆ. ಆ ವರದಿಯ ಪ್ರತಿ ನನ್ನ ಹತ್ತಿರ ಇದೆ. ಕರ್ನಾಟಕ ಸಾರ್ವಜನಿಕ ಉದ್ಯಮ ಮೈಸೂರು ಕಾಗದ ಕಾರ್ಖಾನೆ ರಾಜ್ಯದ ಪ್ರತಿಷ್ಠಿತ ಉದ್ಯಮಗಳಲ್ಲಿ ಒಂದು ಆಗಿದ್ದು, ಹಿಂದಿನ ವರ್ಷಗಳಲ್ಲಿ ಕೋಟ್ಯಾಂತರ ರೂಪಾಯಿ ಲಾಭ ಗಳಿಸುತ್ತಿದ್ದ ಸಂಸ್ಥೆ. ಈ ಸಂಸ್ಥೆ ಇತ್ತೀಚಿನ ವರ್ಷಗಳಲ್ಲಿ ನಷ್ಟಕ್ಕೆ ಉಂಟಾಗುತ್ತಿರುವುದು ತುಂಬಾ ವಿಷಾದನೀಯ. 1995-96ರಲ್ಲಿ ಎಮ್.ಬಿ. ಪ್ರಕಾಶ್ ಐ.ಎ.ಎಸ್.ರವರು ಸಿಎಮ್‌ಡಿ ಆಗಿದ್ದಾಗ 59.20 ಕೋಟಿ ರೂ. ಗಳಿಸಿತ್ತು. 1996-97ರಲ್ಲಿ ಎಸ್.ಎಮ್. ಗಂಗಾಧರಪ್ಪನವರು ಸಿಎಮ್‌ಡಿ ಆಗಿ ಬಂದ ನಂತರ 2.30 ಕೋಟಿಗೆ ಇಳಿಯಿತು. 1997-98 ರಲ್ಲಿ 30 ಲಕ್ಷ ಲಾಭವಾಗಿತ್ತು, ನಂತರ 1998-99ರ ಮೊದಲ ಮೂರು ತಿಂಗಳಲ್ಲಿ 174 ಲಕ್ಷ ರೂ. ನಷ್ಟ ಉಂಟಾಗಿರುತ್ತದೆ. ಜೊತೆಗೆ ತನಿಖಾ ವರದಿ ಆಡಳಿತ ಮಂಡಳಿಯ ಮೇಲೆ ಕ್ರಮ ತೆಗೆದುಕೊಳ್ಳಲು ತಿಳಿಸಿದ್ದರೂ ಕೂಡ ಸರ್ಕಾರ ತಕ್ಷಣ ಕ್ರಮ ತೆಗೆದುಕೊಳ್ಳದೆ ಇದ್ದುದರಿಂದ ಅವ್ಯವಹಾರಗಳು ಮುಂದುವರೆದಿವೆ. ಯಾವ ಅಂಬಿಕಾ ಟ್ರೇಡಿಂಗ್ ಕಂಪನಿ ಎಂದು ಪೇಪರ್ ಮಾರಾಟ ಸಂಸ್ಥೆ ಇತ್ತು, ಹಿಂದೆ ಮೈಸೂರು ಪೇಪರ್ ಮಿಲ್ ಏನು ಮಾರಾಟ ಮಾಡುತ್ತಿದ್ದಾರೆ ಅದೇ ರೇಟ್‌ಗೆ ಕೊಡುತ್ತಿದ್ದುದರಿಂದ ತಪ್ಪು ಇದೆ, ಯಾವುದೇ ಕಾರಣಕ್ಕೂ ಅಂಬಿಕಾ ಟ್ರೇಡಿಂಗ್ ಕಂಪನಿಗೆ ಕೊಡಬಾರದು ಎಂದು ವರದಿ ಕೊಟ್ಟರೂ ಕೂಡ ಮುಂದುವರಿಸುತ್ತಿದ್ದಾರೆ. ವಿದೇಶದಲ್ಲಿ ಹೋಗಿ ಒಂದು ಮೆಷಿನ್ ಖರೀದಿ ಮಾಡಬೇಕೆಂದು ವಿದೇಶಕ್ಕೆ ಹೋದರು. ವಿದೇಶಕ್ಕೆ ಹೋಗಿ ಯಾವುದೋ ಹಳೆಯ ಮೆಷಿನ್ ಎಂದು ವಾಪಸ್ ಬಂದರು. ಲಕ್ಷಾಂತರ ರೂಪಾಯಿ ರಾಜ್ಯ ಸರ್ಕಾರಕ್ಕೆ ಖರ್ಚಾಗಿದೆ. ಈ ರೀತಿ ವರದಿ ಕೊಟ್ಟರೂ ಸರ್ಕಾರ ಏನೂ

ಗಮನ ಕೊಡಲಿಲ್ಲವೆಂದರೆ ನಾವು ಏನು ಪ್ರಯತ್ನ ಮಾಡಬೇಕು?

ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) :— ಹಿಂದೆ ಈ ಸದನದಲ್ಲಿ ಚರ್ಚೆಯಾಗಿ ಅತ್ಯಂತ ಗೌರವಾನ್ವಿತವಾದ ಸಾರ್ವಜನಿಕ ಉದ್ದಿಮೆ, ಅದು ಲಾಭ ಮಾಡಬೇಕಾಗಿತ್ತು. ನಮ್ಮ ಕರ್ನಾಟಕ ರಾಜ್ಯಕ್ಕೆ ಅತ್ಯಂತ ದೊಡ್ಡ ಕೊಡುಗೆ ಕೊಡಬೇಕು ಕೊಡುತ್ತಿದೆ. ಒಬ್ಬ ಸಿಎಮ್‌ಡಿ ಯನ್ನು ನೀವು ಅಲ್ಲಿಯೇ ಇಟ್ಟುಕೊಳ್ಳಬೇಕು, ಅವರು ಎಷ್ಟೇ ಅವ್ಯವಹಾರ ಮಾಡಿದರೂ ಕೂಡ ಅವರು ಅಷ್ಟುನಷ್ಟ ಮಾಡಿದರೂ ಅವರನ್ನು ಇಟ್ಟುಕೊಳ್ಳಬೇಕೆಂಬ ಛಲ ಏಕೆ ಎಂಬುದು ನಮಗೆ ಗೊತ್ತಾಗುತ್ತಿಲ್ಲ. ನಾವು ಸಾಕಷ್ಟು ದಾಖಲಾತಿಗಳನ್ನು ಕೊಟ್ಟಿದ್ದೇವೆ. ಸದನ ಸಮಿತಿ ಕೊಟ್ಟಂತಹ ವರದಿ ಇದೆ. ವಿದೇಶಕ್ಕೆ ಹೋಗಿ ಕಚ್ಚಾ ಪಲ್ಪ್‌ನ್ನು ಕೊಂಡುಕೊಂಡು ಬಂದಿದ್ದಾರೆ. ಅದು ಲೋ ಕ್ವಾಲಿಟಿ ಬಂದಿದೆ. ಅಲ್ಲಿದ್ದಂತಹ ಅಧಿಕಾರಿಗಳು ಕೊಟ್ಟರೂ ಕೂಡ ಅದಕ್ಕೆ ಹಣವನ್ನು ಪಾವತಿ ಮಾಡಿದ್ದಾರೆ. ಇಷ್ಟು ಸ್ಪಷ್ಟವಾಗಿದ್ದರೂ ಕೂಡ ತಂದು ಅಲ್ಲಿಟ್ಟಿದ್ದಾರೆ. ನನ್ನಗನ್ನಿಸುತ್ತದೆ, ಗಂಗಾಧರಪ್ಪರವರಿಂದ ಆದಷ್ಟು ಬೇಗ ಆ ಉದ್ದಿಮೆಯನ್ನೂ ಮುಚ್ಚಿಸಿ ಬೀಗ ಹಾಕಿ ನೀನು ಹೊರಗೆ ಬಾ ಎಂದು ನೀವು ಕಳುಹಿಸಿಕೊಟ್ಟಿದ್ದರೆ ನಮ್ಮದು ಏನು ಅಬ್ಜೆಕ್ಷನ್ ಇಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ :— ಯಾವುದೋ ವ್ಯಕ್ತಿಯನ್ನು ರಕ್ಷಣೆ ಮಾಡುವುದಕ್ಕೆ ನೀವು ಹೋಗುತ್ತಿಲ್ಲ ನಮಗೆ ಗೊತ್ತಿದೆ. ಆದರೆ ವರದಿ ತರಿಸಿಕೊಂಡು ವರದಿ ಓದಿ ಯಾವುದೋ ಒಂದು ಶ್ರೀರಂಗ ಮಾರ್ಕೆಂಟೈಲ್ ಕಂಪನಿ ಎಂದು ವಿದೇಶದಲ್ಲಿರುವ ಒಂದು ಸಂಸ್ಥೆಗೆ ಅವರ ಹತ್ತಿರನೇ ಖರೀದಿ ಮಾಡಬೇಕು, ಕಡಿಮೆ ಕೊಟೇಷನ್ ಇರುವವರ ಹತ್ತಿರ ತೆಗೆದುಕೊಳ್ಳುವುದಿಲ್ಲ, ಜಾಸ್ತಿ ಕೊಟೇಷನ್‌ಗೆ ಅವರ ಹತ್ತಿರ ಪಲ್ಪ್ ಖರೀದಿ, ಕೆಟ್ಟ ಕ್ವಾಲಿಟಿ ಎಂದು ರಿಪೋರ್ಟ್ ಇದೆ. ಅವರೇ ಮತ್ತೇ ಕಂಟಿನ್ಯೂ ಮಾಡಿದ್ದಾರೆ. ಇವೆಲ್ಲಾ ಪ್ರಸ್ತಾಪ ಮಾಡುವಾಗ ತಾವು ಒಂದು ಮಾತು ಹೇಳಿದಿರಿ. ನನಗೆ ನೆನಪು ಇದೆ. ನಿಮ್ಮ ಕಳಕಳಿ ಏನು ನನಗೆ ಗೊತ್ತಾಗುತ್ತಿದೆ. ಅದನ್ನು ವಿಚಾರ ಮಾಡೋಣ. ಯಾವನು ತಪ್ಪು ಮಾಡಿದ್ದಾನೆ, ಅವನು ಉಪ್ಪು ತಿಂದವನು ನೀರು ಕುಡಿಯುತ್ತಾನೆ ಎಂದು ಹೇಳಿದ್ದೀರಿ. ಆದ್ದರಿಂದ ದಯವಿಟ್ಟು ವರದಿ ತರಿಸಿಕೊಳ್ಳಿ. ಆದರೆ ಇವತ್ತು ಉಪ್ಪು ತಿಂದು ನೀರು ಕುಡಿಯುತ್ತಿಲ್ಲ ಅವರು. ಏನೇನೋ ಕುಡಿಯುತ್ತಿದ್ದಾರೆ. ಅದಕ್ಕೆ ನಾನು ವಿವರವಾಗಿ ಹೋಗುವುದಿಲ್ಲ. ದಯವಿಟ್ಟು ನೀವು ಆ ವರದಿಯನ್ನು ತರಿಸಿಕೊಳ್ಳಿ. ಏಕೆಂದರೆ ನಾವು ವಿರೋಧ ಪಕ್ಷದವರು. ನಾವು ಹೇಳುವುದು ಸತ್ಯವೋ ಸುಳ್ಳೋ ಬೇಡ. ಸೋಮ್ಲನಾಯಕರನ್ನು ಕರೆಸಿಕೊಳ್ಳಿ. ನಿಮ್ಮ ಪಕ್ಷದವರೇ ಸದಸ್ಯರು ಅಲೆಲ್ಲಾ ಇದ್ದರು. ಅದು ಸತ್ಯ ಎಂದು ನಿಮಗೆ ಅನಿಸಿದರೆ ದಯವಿಟ್ಟು ಉತ್ತರ ಕೊಡುವಂತಹ ಸಂದರ್ಭದಲ್ಲಿ ಕ್ರಮ ಏನು ತೆಗೆದುಕೊಳ್ಳುತ್ತೇವೆ ಎಂದು ಹೇಳಿದರೆ ನಾವು ಇಲ್ಲಿ ಪ್ರಸ್ತಾಪ ಮಾಡಿದ್ದಕ್ಕೂ ಹೋರಾಟ ಮಾಡಿದ್ದಕ್ಕೇ

ನಮಗೂ ಸಮಾಧಾನವಾಗುತ್ತದೆ. ಇಲ್ಲದಿದ್ದರೆ ಈ ಮುಖ್ಯಮಂತ್ರಿಗಳೂ ಕೂಡ ಎಲ್ಲರ ಹಾಗೆ ಎಂದು ನಾವು ಅಂದುಕೊಂಡು ಇರಬೇಕಾಗುತ್ತದೆ. ದಯವಿಟ್ಟು ಆ ದಿಕ್ಕಿನಲ್ಲಿ ತಾವು ಗಮನಹರಿಸಬೇಕು ಎಂದು ಒತ್ತಾಯ ಮಾಡುತ್ತೇನೆ. ಇನ್ನೊಂದು ವಿಚಾರ ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ನಾನು ಹೇಳುವುದೇನೆಂದರೆ ನೀವು ಶಾಸಕಾಂಗ ಪಕ್ಷದ ಸಭೆ ಕರೆದುಕೊಳ್ಳಿ. ನೀವು ಏನೂ ಬೇಕಾದರೂ ಮಾತನಾಡಿಕೊಳ್ಳಿ. ಆದರೆ ಬಾಯಿಗೆ ಬಂದ ಹಾಗೆ. ಪತ್ರಿಕೆ ಹೇಳಿಕೆ ಕೊಡಬೇಡಿ. ಇದು ನಮ್ಮ ರಾಜ್ಯ ಗೌರವ. 'ಪಟೇಲರಿಗೆ ಅರಳು ಮರಳು', ಇದನ್ನು ಯಾರಾದರೂ ಬಳಸುವಂತಹ ಪದಗಳೇ? ಖಂಡಿತ ಗೌರವ ತರುವುದಿಲ್ಲ. ಸನ್ಮಾನ್ಯ ಜೆ.ಹೆಚ್. ಪಟೇಲರು ಕೇವಲ ಜನತಾ ದಳದ ನಾಯಕರಲ್ಲ. ಅವರು ಇಡೀ ರಾಜ್ಯಕ್ಕೆ ಮುಖ್ಯಮಂತ್ರಿಗಳು. ನೀವ್ಯಾರೋ ನಿಮ್ಮ ರಾಜಕಾರಣಕ್ಕೆ ಒಂದು ಅವಕಾಶವಾಗಲಿಲ್ಲವೆಂದು ನೀವು ನಿಮ್ಮ ಚಟವನ್ನು ತೀರಿಸಿಕೊಳ್ಳುವುದಕ್ಕೆ ಇಂತಹ ಪದ ಬಳಸಿ ಇಡೀ ಕರ್ನಾಟಕದ ಜನತೆಗೆ ಬಗೆದ ದ್ರೋಹ ಆಗುತ್ತದೆ. ನೀವು ಒಳಗಡೆ ಸೇರಿಕೊಂಡು ಬೇಕಾದ್ದು ಮಾತನಾಡಿ. ಒಬ್ಬರಿಗಿಂತ ಒಬ್ಬರು ಏನು ಬೇಕಾದರೂ ಹೇಳಬಹುದು. ಯಾಡಿಯೂರಪ್ಪನವರು ವಾಟಾಳ್ ನಾಗರಾಜ್‌ರವರು ಹೇಳಿದಂತೆ ಈ ಸರ್ಕಾರ ಕೇಳುತ್ತಿದೆ ಎಂದೆಲ್ಲಾ ಹೇಳಿದ್ದಾರೆ ಯಾರು ಸ್ವಾಮಿ ಮುಖ್ಯಮಂತ್ರಿಗಳು, ಬಿ.ಜೆ.ಪಿ.ಯವರೋ ಕನ್ನಡ ಚಳವಳಿ ನಾಯಕರೋ? ಹೋರಾಟ ಮಾಡುತ್ತಿರುವಂತಹ ನಾಯಕರು ಇವರಿಬ್ಬರೂ ಕೂಡ. ಕಾಂಗ್ರೆಸ್ ಸರ್ಕಾರ ಮಾಡಿದಂತಹ ಭ್ರಷ್ಟಾಚಾರದ ವಿರುದ್ಧ ಸಾಕಷ್ಟು ಹೋರಾಟ ಮಾಡಿ ಬಂದೆವು. ನಾಲ್ಕು ಸ್ಥಾನದಲ್ಲಿ ಇದ್ದವರು 40 ಸ್ಥಾನಕ್ಕೆ ಬಂದೆವು. 184 ಸ್ಥಾನದಲ್ಲಿ ಇದ್ದವರನ್ನು 34 ಸ್ಥಾನಕ್ಕೆ ತಂದು ನಿಲ್ಲಿಸಿದಂತಹ ಕೀರ್ತಿ ನಮ್ಮದು. ಬಾಯಿಗೆ ಬಂದಹಾಗೆ ಮಾತನಾಡಿದರೆ ಏನಾದರೂ ಅರ್ಥ ಉಂಟಾ?

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಕಾಂಗ್ರೆಸ್‌ನವರು ಮಾಡಿದಂತಹ ಭ್ರಷ್ಟಾಚಾರವನ್ನು ಹೊರಗೆಹಾಕಿ ಅವರು ಅಧಿಕಾರಕ್ಕೆ ಬಂದರು ಎಂದು ಹೇಳಿಕೊಂಡರು. ಹಾಗಾದರೆ ತಾವು ಯಾವ್ಯಾವುದು ಸಾಬೀತು ಮಾಡಿ ಯಾರನ್ನು ಜೈಲಿಗೆ ಕಳುಹಿಸಿದಿರಿ ಎಂದು ಹೇಳಿ ನೋಡೋಣ. ಸುಮ್ಮನೆ ಹೇಳುವುದು, ಅಲಿಗೇಷನ್ ಮಾಡುವುದು. ಎಲ್ಲಿ ಯಾರಿಗಾದರೂ ನಾಲ್ಕು ಮಂದಿಯನ್ನು ಜೈಲಿಗೆ ಹಾಕಿದ್ದೀರಾ? ಸುಮ್ಮನೆ ಎಲ್ಲರಿಗೂ ಮಾತನಾಡುವುದಕ್ಕೆ ಬರುತ್ತದೆ. ಲಘುವಾಗಿ ಮಾತನಾಡುವುದಕ್ಕೆ ಹೋಗಬೇಡಿ. ನೀವು ಮೊದಲು 18 ಮಂದಿ ಇದ್ದವರು ನಾಲ್ಕಕ್ಕೆ ಬಂದಿದ್ದೀರಿ. ಎಂದರೆ ನೀವು ಭ್ರಷ್ಟಾಚಾರ ಮಾಡಿ ಬಂದಿದ್ದೀರಾ? ನೀವು 83 ರಲ್ಲಿ 18 ಮಂದಿ ಇದ್ದವರು 85 ರಲ್ಲಿ ಬರಿ ನಾಲ್ಕು ಮಂದಿ ಆದಿರಿ. ಅದನ್ನು ಹೇಳುವುದಕ್ಕೆ ಆಗುತ್ತದೇನು? ಪದ ಬಳಸುವುದು ನೀವು ಬಳಸಿ. ನಾನು ಬೇಡ ಎಂದು ಹೇಳುವುದಿಲ್ಲ. ಟೀಕೆ ಮಾಡಿ.

ಶ್ರೀ ಕೆ.ಎಸ್. ಈಶ್ವರಪ್ಪ :— ನಾನು ಏಕೆ ಈ ಅಂಶವನ್ನು ಪ್ರಸ್ತಾಪ ಮಾಡಿದೆ ಎಂದರೆ.....

ಡಾ : ಎಂ.ಪಿ. ಕರ್ಕಿ :— ಭ್ರಷ್ಟಾಚಾರ ಮಾಡಿದ ಮೂರು ಮಂತ್ರಿಗಳನ್ನು ಮನೆಗೆ ಕಳುಹಿಸಿದ್ದೇವೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಕೊನೇಪಕ್ಷ ಆ ಮೊರಾಲಿಟಿ ಯಾರಾದರೂ ಒಬ್ಬರು ರೈಸ್ ಮಾಡಿದರೆ ಸಸ್ಪೆಕ್ಟ್ ಇದ್ದರೂ ಕೂಡ ನಾವು ಮಾಡಿದ್ದೇವೆ. ನಿಮ್ಮಲ್ಲಿ ತಿಂದು ತೇಗಿ ಪ್ರೂವ್ ಆದರೂ ಕೂಡ ಮನೆಗೆ ಕಳುಹಿಸುವುದಿಲ್ಲ. ನೀವು ಡಿಫೆಂಡ್ ಮಾಡಿಕೊಳ್ಳುತ್ತೀರಿ. ಅಂತಹ ಸರ್ಕಾರಕ್ಕೆ ಡಿಫೆಂಡ್ ಮಾಡುತ್ತೀರಿ.

ಶ್ರೀ ಕೆ.ಎಸ್. ಈಶ್ವರಪ್ಪ :— ನಾನು ಏಕೆ ಹೇಳುತ್ತಿದ್ದೇನೆ ಎಂದರೆ 1989ರಿಂದ 94 ರವರೆಗೆ ನಾಲ್ಕು ಜನ ಎಂ.ಎಲ್.ಎ. ಇದ್ದೆವು, 40 ಕ್ಕೆ ಬಂದೆವು. ಎಂ.ಪಿ.ಗಳು ಒಬ್ಬರೂ ಇರಲಿಲ್ಲ. ಇಬ್ಬರು ಬಂದರು. ನಾಲ್ಕು ಬಂದರು. ಆರು ಆಯಿತು. ಇವತ್ತು 13 ಹಾಗೂ ಲೋಕಶಕ್ತಿ ಮೂರು ಒಟ್ಟು 16 ಮಂದಿ ಇದ್ದೇವೆ. ಇದು ಹುಡುಗಾಟಿಕೆ ಅಲ್ಲ. ಹೋರಾಟ ಮಾಡಿಕೊಂಡು ಬಂದಿದ್ದೇವೆ. ನಾನು ಏಕೆ ಇದನ್ನು ಪ್ರಸ್ತಾಪ ಮಾಡಿದೆ ಎಂದರೆ ಕಾಂಗ್ರೆಸ್ ನವರನ್ನೂ ಟೀಕೆ ಮಾಡಬೇಕು ಎನ್ನುವುದಕ್ಕಿಂತ ಜಾಸ್ತಿ ಹೋರಾಟಕ್ಕೆ ಈ ರೀತಿ ಪ್ರಯತ್ನ ಮಾಡಿದಾಗಲೂ ಕೂಡ ರಾಜ್ಯಸರ್ಕಾರ ನಮ್ಮ ಕಡೆ ಗಮನ ಕೊಡಲಿಲ್ಲವೆಂದರೆ, ಇದು ಯಾವ ನ್ಯಾಯ? ಆಗಲೇ ನಾವು ಹೋರಾಟ ಮಾಡಿದೆವು. ಗ್ರಾನೇಟ್ ಲೈಸೆನ್ಸ್ ಕೊಡಬೇಡಿ ಎಂದು ಹೇಳಿದಾಗ ರಾತ್ರೋರಾತ್ರಿ 174 ಲೈಸೆನ್ಸ್ ಕೊಟ್ಟರು. ಅವತ್ತು ಹೋರಾಟ ಮಾಡಿದೆವು. ರೈತನ ಸಾಲ ಮನ್ನಾ ಮಾಡಬೇಕೆಂದು ಪ್ರಯತ್ನ ನಡೆದಾಗ ಬರೀ 17 ಜನ ಹೆಂಡದ ದೊರೆಗಳಿಗೆ 84 ಕೋಟಿ ರೂಪಾಯಿ ಮನ್ನಾ ಮಾಡಿದ್ದಕ್ಕೆ ಹೋರಾಟ ಮಾಡಿದೆವು. ಕ್ಲಾಸಿಕ್ ಕಂಪ್ಯೂಟರ್ ವಿರುದ್ಧ ಹೋರಾಟ ಮಾಡಿದೆವು. ಆಗ ನೀವು ಮಂತ್ರಿಮಂಡಲ ಇದ್ದೀರಿ. ಇಲ್ಲವೇ? ಇವರು ಮಾಡಿದಂತಹ ತಪ್ಪು, ಇವರ ಮುಖ್ಯಮಂತ್ರಿಗಳ ವಿರುದ್ಧ ಇವರೇ ಧರಣಿ ಕುಳಿತಿದ್ದರು. ಒಂದು ವಿರೋಧ ಪಕ್ಷವಾಗಿ ನಮ್ಮ ಪ್ರಯತ್ನ ಕಾಂಗ್ರೆಸ್ ಸರ್ಕಾರದ ವಿರೋಧ ಮಾಡಿಕೊಂಡು ಬಂದಿದ್ದೇವೆ. ಇವತ್ತೂ ಕೂಡ ಈ ಸರ್ಕಾರದ ವಿರುದ್ಧ ಮಾಡುತ್ತಿದ್ದೇವೆ. ಇವರು ಏನು ಮಾಡುತ್ತಿದ್ದಾರೆ ನಮ್ಮ ಹೋರಾಟಕ್ಕೆ ಸದನ ಸಮಿತಿ ತನಕ ಅವಕಾಶ ಮಾಡಿಕೊಟ್ಟು ವರದಿ ಕೊಟ್ಟನಂತರ ಇವರು ದ್ರೋಹ ಮಾಡುತ್ತಿದ್ದಾರಲ್ಲಾ, ಇದು ಯಾವ ನ್ಯಾಯ? ಇವರು ಕಾಂಗ್ರೆಸ್‌ನವರ ಬಗ್ಗೆ ಹೇಳಿಕೊಂಡು ಬಂದರು. ಇವರು ಚುನಾವಣಾ ಪ್ರಣಾಳಿಕೆಯಲ್ಲಿ ಹೇಳಿದ್ದಾರೆ. ಜನತಾ ದಳದವರು ಹೇಳಿದರು. 1984-94 ರಲ್ಲಿ ಕಾಂಗ್ರೆಸ್‌ರವರ ಬಗ್ಗೆ 'ಹಳಿ ತಪ್ಪಿದ ಆಡಳಿತ' ಮಂತ್ರಿಮಂಡಲದಲ್ಲಿ ಭಿನ್ನಮತ ಅವರಲ್ಲಿ ಭಿನ್ನಮತ ಇತ್ತು ಹೇಳಿದರು. ಸ್ವೇಚ್ಛಾಚಾರಿಗಳು ಆದ ಅಧಿಕಾರ

ಶಾಹಿಗಳು. ನಿಂತುಹೋದ ಅಭಿವೃದ್ಧಿ ಕಾರ್ಯಗಳು ಲಂಚ ತಿನ್ನುವ ಕೈಗಳಿಗೆ ವಿಶ್ವ, ಅಕ್ಷಯ ಆರಾಧನಾ ಕಾರ್ಯಕ್ರಮಗಳು ನೀರು, ರಸ್ತೆ ಕಾಣದಂತಹ ಗ್ರಾಮಗಳು ಏರಿದ ಬೆಲೆಗಳು, ತತ್ತರಿಸಿದ ಜನರು. ಹಬ್ಬಿದ ಕೋಮು ದಳ್ಳುರಿ. ಬಿತ್ತಿದ ಜಾತೀಯತೆ ಒಂದೇ ಎರಡೇ, ಈ ಮಾತನ್ನು ಕಾಂಗ್ರೆಸ್ ನವರ ಬಗ್ಗೆ ಇವರು ಚುನಾವಣಾ ಪ್ರಣಾಳಿಕೆಯಲ್ಲಿ ಹೇಳಿಕೊಂಡು ಬಂದಿದ್ದಾರೆ, ಅಲ್ಲ, ಕಾಂಗ್ರೆಸ್ ಬಗ್ಗೆ ಲಿಸ್ಟ್ ಮಾಡಿದರಲ್ಲಾ, ಇದರಲ್ಲಿ ಯಾವುದಾದರೂ ಒಂದರಲ್ಲಿ ಅವರಿಗಿಂತ ಭಿನ್ನ ಎಂದು ತೋರಿಸಿ ಕೊಟ್ಟಿದ್ದೀರಾ? ಇವರು ಯಾವುದೂ ಮಾಡಲಿಲ್ಲವೆಂದು ಹೇಳಿದರು. ಇವರು ಅಷ್ಟೂ ಮಾಡಿದ್ದಾರೆ. ಇವತ್ತು ನೀವು ಏನು ವ್ಯತ್ಯಾಸ ಮಾಡಿದಿರಿ? ನಿಮಗೂ ಕಾಂಗ್ರೆಸ್‌ನವರಿಗೂ ಏನಾದರೂ ವ್ಯತ್ಯಾಸ ಇದೆಯಾ? ನಾನು ನಿಮಗೆ ಎಚ್ಚರಿಗೆ ಕೊಡುತ್ತಿರುವುದು, ಅವರು 184 ಇದ್ದವರು 36 ಕ್ಕೆ ಬಂದರು. ನೀವು 110ಕ್ಕೆ ಇದ್ದವರು ಎರಡು ಅಂಕಿ ಮುಟ್ಟುತ್ತೀರೋ ಇಲ್ಲವೋ ನನಗೆ ಅನುಮಾನ. ಮಾನ್ಯ ಶಿವರಾಮೇಗೌಡರಂತಹ ವ್ಯಕ್ತಿ ಮುಖಾಂತರ ತಾವು ರಾಜ್ಯಪಾಲರ ಭಾಷಣಕ್ಕೆ ಬೆಂಬಲ ವ್ಯಕ್ತಪಡಿಸಿದ್ದೀರಿ. ಸಂತೋಷ. ಅನೇಕ ಸಾಧನೆಗಳನ್ನು ಮಾಡಿದ್ದಾರೆ, ವಿಶೇಷವಾಗಿ ನಾಗೇಗೌಡರು ಬಗ್ಗೆ ಬಹಳ ಹೆಮ್ಮೆಯಿಂದ ಹೇಳುತ್ತೇನೆ. ನನ್ನ ಕ್ಷೇತ್ರಕ್ಕೂ ಕೂಡ ಕೋಟ್ಯಾಂತರ ರೂಪಾಯಿ ಹಣವನ್ನು ನೀರಾವರಿಗೆ ಕೊಟ್ಟಿದ್ದಾರೆ. ಇವರು ನೀರಾವರಿ ಸಚಿವರು ಆಗಿರತಕ್ಕಂಥ ಸಂದರ್ಭದಲ್ಲಿ ಕಾವೇರಿ ವಿಚಾರವನ್ನು ಬಗೆಹರಿಸಿದಂತಹ ಕೀರ್ತಿ ಇತಿಹಾಸದ ಪುಟಗಳಲ್ಲಿ ಬರೆದಿರುತ್ತದೆ. ಜೆ.ಹೆಚ್. ಪಟೇಲ್, ಅಟಲ್ ಬಿಹಾರಿ ವಾಜಪೇಯಿ ಅವರ ಜೊತೆ ನಾಗೇಗೌಡರ ಹೆಸರು ಸೇರುತ್ತದೆ. ಒಳ್ಳೆಯ ಕೆಲಸ ಮಾಡಿದ್ದನ್ನು, ಹಿಂದೆಮುಂದೆ ನೋಡದೆ ಹೇಳುತ್ತಿದ್ದೇವೆ. ಆದರೆ ಅವರಿಗೆ ಟೀಕೆ ಮಾಡುವುದಕ್ಕೆ ಮಾತ್ರ ಕಾಂಗ್ರೆಸ್‌ನವರು ಮಾಡಿದಂತಹ ಭ್ರಷ್ಟಾಚಾರದ ಬಗ್ಗೆ ಹಗರಣಗಳ ಬಗ್ಗೆ ಲಂಚ ತಿಂದಿದ್ದಾರೆ, ಅವರು ನೀರು ರಸ್ತೆ ಕೊಡಲಿಲ್ಲವೆಂದು ಹೇಳಿಕೊಂಡು ನೀವು ಏನು ಮಾಡಿದಿರಿ? ಕಳೆದ ನಾಲ್ಕೂವರೆ ವರ್ಷಗಳಲ್ಲಿ ಬಾಯಿಗೆ ಬಂದಹಾಗೆ ಮಾತನಾಡುತ್ತಿದ್ದೀರಿ. ಸಿದ್ದರಾಮಯ್ಯನವರು ಮುಂದಿನ ಮುಖ್ಯಮಂತ್ರಿ ಎಂದು ದೇವೇಗೌಡರು. ದೇವೇಗೌಡರೇ ಮುಂದಿನ ಪ್ರಧಾನಮಂತ್ರಿ ಎಂದು ಸಿದ್ದರಾಮಯ್ಯ. ಇವರೇ ತೀರ್ಮಾನ ಮಾಡಿಕೊಂಡು ಬಿಡುವುದು. ಪ್ರಧಾನಿಗಳ ಸ್ಥಾನ, ಮುಖ್ಯಮಂತ್ರಿಗಳ ಸ್ಥಾನ. ಜನ ಬೇಡವೇ ಬೇಡ. ಇವರಿಬ್ಬರು ತೀರ್ಮಾನ ಮಾಡುತ್ತಾರೆ. ಜನ ಏನೆಲ್ಲಾ ಕಣ್ಣುಮುಚ್ಚಿಕೊಂಡು ಕೊಡಪ್ಪ ನಿನ್ನ ಬ್ಯಾಲೆಟ್ ಪೇಪರ್ ನಾನು ಒತ್ತುತ್ತೇನೆ ಎಂದು ಕಾದುಕೊಂಡಿದ್ದಾರೆ.

ಶ್ರೀ ಡಿ. ಮಂಜುನಾಥ್ :— ಮಾನ್ಯ ಈಶ್ವರಪ್ಪನವರು ಚೆನ್ನಾಗಿ ಮಾತನಾಡುತ್ತಿದ್ದಾರೆ. ಆದರೆ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ಮಾಡಬೇಕೆಂದು ಇರುವುದು. ಹಿಂದಿನದೆಲ್ಲಾ ಏಕೆ ಮಾತನಾಡುತ್ತಾರೆ?

ಶ್ರೀ ಕೆ.ಎಸ್. ಈಶ್ವರಪ್ಪ :— ಇದು ಅಲ್ಲ ಎಂದು ಹೇಳಿ. ಹೋಗಲಿ. ನಾನು ಎಲ್ಲಾ ಹೇಳುತ್ತಿರುವುದು ಇತ್ತೀಚೆಗೆ ನಡೆದದ್ದು. ಹೇಳುವುದು ಬೇಡವೆಂದರೆ ಬೇಡ.

ಶ್ರೀ ವಾಟಾಳ್ ನಾಗರಾಜ್ :— ಏಕೆ ಬೇಡ ಹೇಳಿ? ನೀವು ಮುಖ್ಯಮಂತ್ರಿಗಳು ಆಗುವುದಿಲ್ಲ ಎಂದು ಹೇಳದೆ ಇರುವುದಕ್ಕೆ ಬೇಜಾರು ಆಗಿದೆಯಾ? ಅದು ಇದ್ದರೆ ಹೇಳಿಬಿಡಿ. ಮಂಜುನಾಥ್‌ರವರು ಮುಂದಿನ ಮುಖ್ಯಮಂತ್ರಿಗಳು ಎಂದು ಹೇಳಿಬಿಡಪ್ಪ.

ಶ್ರೀ ಕೆ.ಎಸ್. ಈಶ್ವರಪ್ಪ :— ಪಟೇಲರ ಮಂತ್ರಿಮಂಡಲದಲ್ಲಿ ಭ್ರಷ್ಟರಿಗೆ ಕಾಲ. ಅವರಿಗೆ ಒಳ್ಳೆಯ ಖಾತೆಗಳನ್ನು ಕೊಡಲಾಗಿದೆ. ಆತ್ಮಗೌರವ ಇದ್ದವರು ಯಾರೂ ಪಟೇಲರ ಮಂತ್ರಿಮಂಡಲದಲ್ಲಿ ಇರುವುದಿಲ್ಲ. ಇದನ್ನು ವರದೇಗೌಡರು ಹೇಳಿರುವುದು. ಹಿಂದೆ 4-5 ಜನರನ್ನು ಮಂತ್ರಿಮಂಡಲಕ್ಕೆ ತೆಗೆದುಕೊಂಡಾಗ ಇದೇ ಮಾತನ್ನು ಸನ್ಮಾನ್ಯ ಉಪ ಮುಖ್ಯಮಂತ್ರಿ ಸಿದ್ಧರಾಮಯ್ಯನವರು ಹೇಳಿದ್ದರು. ಇಂತಹ ಮಂತ್ರಿಮಂಡಲದಲ್ಲಿ ಕೆಲಸ ಮಾಡುವವರಿಗೆ ಆತ್ಮಗೌರವ ಇರುವುದಿಲ್ಲ. ಇವರು ಈಗ ಹೇಳಿದ್ದಾರೆ. ಯಾವಾಗ ಅವರವರಲ್ಲಿ ಸಮಸ್ಯೆ ಬರುತ್ತದೆ, ಆಗ ಈ ಸಮಸ್ಯೆ. ನಾನು ಅದಕ್ಕೆ ಹೇಳುವುದು, ರಾಜ್ಯದ ಜನತೆ ನಿಮ್ಮನ್ನು ಗೆಲ್ಲಿಸಿರುವುದು ಈ ರೀತಿ ಹೇಳಿಕೊಳ್ಳುವುದಕ್ಕೆ ಅಲ್ಲ. ನೀವು ಪ್ರಯತ್ನ ಮಾಡಿ ಮುಂದಾಗಬೇಕು. ಮುಂದಿನ ಚುನಾವಣೆ ಘೋಷಣೆ ಹಾಗಾದರೆ ಏನು? ಏಕೆಂದರೆ ಸಾಕಷ್ಟು ಗೂಂಡಾಗಾರಿಕೆ ಈ ರಾಜ್ಯದಲ್ಲಿ ನಡೆಯಿತು.

(ಸನ್ಮಾನ್ಯ ಅಧ್ಯಕ್ಷರು ಮಾನ್ಯ ಶ್ರೀ ರಮೇಶ್ ಕುಮಾರ್‌ರವರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಕರ್ನಾಟಕ ರಾಜ್ಯದಲ್ಲಿ ಒಂದು ರೀತಿಯಲ್ಲಿ ಗೂಂಡಾಗಿರಿ ಎನ್ನುವಂತಹ ಪದಗಳು ಬಂದು ಹೋಯಿತು. ಅದಾದನಂತರ ವಿಶ್ವಾಸ ದ್ರೋಹವನ್ನು ಒಬ್ಬರಿಗೊಬ್ಬರು ಸಾಕಷ್ಟು ಮಾಡಿಕೊಂಡಿದ್ದಾರೆ. ಘೋರ ವಂಚನೆ, ವಚನ ಭ್ರಷ್ಟತೆ, ಜಾತಿಯತೆ, ಈ ಜಾತಿಯತೆಯ ವಿಚಾರವನ್ನು ಜ್ಞಾಪಕ ಮಾಡಿಕೊಂಡರೆ ಈ ರಾಜಕಾರಣವನ್ನು ಬಿಟ್ಟು ಬಿಡಬೇಕೆನಿಸುತ್ತದೆ. ಯಾರೋ ಮೂರು ಜನರನ್ನು ಮಂತ್ರಿಗಳನ್ನಾಗಿ ಮಾಡದೇ ಇರುವುದಕ್ಕೆ ಇಂತಹ ಜಾತಿಯ ಮಂತ್ರಿಗಳು, ಇಂತಹ ಜಾತಿಯವರಿಗೆ ಆ ಸ್ಥಾನ ಸಿಗಲಿಲ್ಲ? ಇಂತಹ ಜಾತಿಯವರ ಮನೆಯ ಊಟ, ತಿಂಡಿ ಎಂದು ಆಗಿದೆ. ಈ ರಾಜ್ಯದಲ್ಲಿ, ಸರ್ಕಾರದಲ್ಲಿ ನಡೆದಷ್ಟು ಇಡೀ ದೇಶದಲ್ಲಿ ಎಲ್ಲೂ ಜಾತಿಯತೆ ನಡೆಯಲಿಲ್ಲ. ಇದನ್ನು ನೀವು ನಿಮ್ಮ ನಾಳೆಯ ಚುನಾವಣೆಯ ಪ್ರಣಾಳಿಕೆಯಲ್ಲಿ ಹಾಕಿ. ಮುಂದಿನ ನಿಮ್ಮ ಚುನಾವಣೆಗೆ ಏನೆಂದರೆ ಗೂಂಡಾಗಿರಿ, ವಿಶ್ವಾಸದ್ರೋಹ, ಘೋರ ವಂಚನೆ, ವಚನ ಭ್ರಷ್ಟತೆ, ಜಾತಿಯತೆ, ಮತ್ತೆ ಜನತಾ ದಳ ಎಂದು ಹಾಕಿ. ನೀವು ಕಳೆದ ಬಾರಿ ಏನು ಹೇಳಿದ್ದೀರಿ ಅದು ಬೇರೆ.

ಅಧ್ಯಕ್ಷರು :— ಅವರನ್ನು ಮುಗಿಸೇ ಬಿಡುತ್ತೀರಲ್ಲಾ...

ಶ್ರೀ ಕೆ.ಎಸ್. ಈಶ್ವರಪ್ಪ :— ಮಾನ್ಯ ಅಧ್ಯಕ್ಷರೆ, ನಾನಲ್ಲ. ಅವರೇ ಹೇಳಿಕೊಳ್ಳಬೇಕು. ಮಾನ್ಯ ಮುಖ್ಯಮಂತ್ರಿಯವರ ಬಗ್ಗೆ ಇವರು ಇಂತಹ ಜಾತಿಯಿಂದ ಮಾಡಿದಂಥವರು ಇಲ್ಲ, ಇಂಥವರು ಮಂತ್ರಿಮಂಡಲದಲ್ಲಿ ಇದ್ದರೆ ಆತ್ಮಗೌರವವಿರುವುದಿಲ್ಲವೆಂದು ಯಾವತ್ತು ಮಂತ್ರಿಮಂಡಲದಿಂದ ಸ್ವಲ್ಪ ನೋವಾದಾಗ ಜನತೆಯ ವಿಚಾರವಾಗಿ ಹೋರಾಟ ಮಾಡುತ್ತೇವೆಂದಾಗ ಮಾನ್ಯ ಎಂ.ಪಿ. ಪ್ರಕಾಶ್‌ರವರು ರಾಜೀನಾಮೆಯನ್ನು ಕೊಟ್ಟರು ಮತ್ತೆ ಅವರು ವಾಪಸ್ಸು ತೆಗೆದುಕೊಂಡರು. ಮಾನ್ಯ ಡಿಟಿಜಯಕುಮಾರ್‌ರವರು ಏನು ಹೇಳಿದ್ದಾರೆಂದರೆ ರಾಜ್ಯ ಮಂತ್ರಿಯಿಂದ ಕ್ಯಾಬಿನೆಟ್ ಮಂತ್ರಿಯನ್ನಾಗಿ ಮಾಡಲಿಲ್ಲವೆಂದು ಹೇಳಿದರು. ಅವರನ್ನು ಕ್ಯಾಬಿನೆಟ್ ಮಂತ್ರಿಗಳನ್ನಾಗಿ ಮಾಡಿದ್ದರೆ ಪ್ರಶ್ನೆ ಬರುತ್ತಾ ಇರಲಿಲ್ಲ. ಆಗ ಮುಂದುವರೆದ ಜನಾಂಗದವರಿಗೆ ಮೃಷ್ಟಾನ್ನ, ಹಿಂದುಳಿದವರಿಗೆ ಕಲಗಚ್ಚು ಎಂಬ ಪ್ರಶ್ನೆ ಬರುತ್ತಾ ಇರಲಿಲ್ಲ. ಏಕೆಂದರೆ ಅವರನ್ನು ರಾಜ್ಯ ಸಚಿವರನ್ನಾಗಿ ಅಲ್ಲೇ ಬಿಟ್ಟರು. ಮುಂದುವರೆದ ಜನಾಂಗದವರಿಗೆ ಮೃಷ್ಟಾನ್ನವೆಂದು ಹಿಂದುಳಿದವರಿಗೆ ಕಲಗಚ್ಚು ಎಂದು ಆಯಿತು. ಅದೇ ನಿಮ್ಮಲ್ಲಿ ಕ್ಯಾಬಿನೆಟ್ ಮಂತ್ರಿ ಸ್ಥಾನ ಕೊಟ್ಟಿದ್ದರೆ ಮೃಷ್ಟಾನ್ನ ಮುಂದುವರೆದಂತವರಿಗೆ ಕಲಗಚ್ಚು ಎಂದು ಹೇಳುತ್ತಿದ್ದರಾ? ಜನರು ನಿಮ್ಮನ್ನು ಏನೆಂದು ಹೇಳುತ್ತಾರೆ.

ಅಧ್ಯಕ್ಷರು :— ಮಾನ್ಯ ನಾಗೇಗೌಡರಿಗೆ ಮೃಷ್ಟಾನ್ನನಾ? ಕಲಗಚ್ಚಾ?

ಶ್ರೀ ಕೆ.ಎನ್. ನಾಗೇಗೌಡ :— ಬಿರಿಯಾನಿ....

ಅಧ್ಯಕ್ಷರು :— ಬಿರಿಯಾನಿ.... ಬರೀ ಪೀಸ್‌ಗಳ ದಮ್ಮಿ ಬಿರಿಯಾನಿ...

ಶ್ರೀ ಕೆ.ಎಸ್. ಈಶ್ವರಪ್ಪ :— ಮಾನ್ಯ ನಾಗೇಗೌಡರೇ, ತಾವು ಏನಾದರೂ ಹೇಳುತ್ತೀರಾ....

ಶ್ರೀ ಕೆ.ಎನ್. ನಾಗೇಗೌಡ :— ಇಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ :— ಹೇಳುವ ಸ್ಥಿತಿಯಲ್ಲಿ ತಾವು ಇಲ್ಲ, ಮತ್ತೆ ಜನರ ಹತ್ತಿರ ಹೇಗೆ ಹೋಗುತ್ತೀರಾ?

ಶ್ರೀ ಕೆ.ಎನ್. ನಾಗೇಗೌಡ :— ಪ್ರತಿಕ್ರಿಯೆ ಇಲ್ಲವೆಂದು ಅಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ :— ಮಾನ್ಯ ಬಚ್ಚೇಗೌಡರು ನನಗೆ ಬಹಳ ಚೆನ್ನಾಗಿ ಮಾತನಾಡುತ್ತಿದ್ದೀರಿ ಎಂದು ಹೇಳಿದರು. ನನಗೆ ಮಾತನಾಡುವುದಕ್ಕೆ ಬರುವುದಿಲ್ಲ.

ನನಗೆ ನನ್ನ ಮನಸ್ಸಿನ ಭಾವನೆಗಳನ್ನು ತಡೆದುಕೊಳ್ಳುವುದಕ್ಕೆ ಆಗುತ್ತಿಲ್ಲ, ಆದಕ್ಕೆ ನಾನು ಹೇಳುತ್ತಿರುವಂಥಾದ್ದು.

ಅಧ್ಯಕ್ಷರು :— ಮಾನ್ಯ ಈಶ್ವರಪ್ಪನವರೇ, ತಾವು ಇವತ್ತು ಬಹಳ ಚೆನ್ನಾಗಿ ಮಾತನಾಡುತ್ತಿದ್ದೀರಿ. ಈ ಮಾತನ್ನು ತಮಾಷೆಯಾಗಿ ಹೇಳುತ್ತಿಲ್ಲ. ಇವತ್ತು ನೀವು ಚೆನ್ನಾಗಿ ಮಾತನಾಡುತ್ತಿದ್ದೀರಿ.

ಶ್ರೀ ಕೆ.ಎಸ್. ಈಶ್ವರಪ್ಪ :— ನನಗೆ ಹೊಟ್ಟೆ ಉರಿಯುತ್ತಿದೆ.

ಅಧ್ಯಕ್ಷರು :— ನಾನು ಹೇಳುವಂಥಾದ್ದು ಅದೇ, ಹೊಟ್ಟೆ ಉರಿಯುವಾಗ ಭಾವುಕರಾಗಿ ಹೃದಯಾಂತರಾಳದಿಂದ ಮಾತನಾಡಿದಾಗಲೇ ನಿಜವಾದ ಮಾತುಗಳು ಬರುವಂಥಾದ್ದು ಇವತ್ತು ನೀವು ನಿಜವಾಗಲೂ ಚೆನ್ನಾಗಿ ಮಾತನಾಡುತ್ತಿದ್ದೀರಿ.

ಶ್ರೀ ಕೆ.ಎನ್. ನಾಗೇಗೌಡ :— ಮಾನ್ಯ ಅಧ್ಯಕ್ಷರೆ, ತಾವು ಹೇಳಿದ ಹಾಗೆ ಅವರು ಸತ್ಯಾಂಶ ಹೇಳಿದ್ದಾರೆಂದು ತಾವೇ ಹೇಳಿದ್ದೀರಿ. ಆದರೆ ನಮ್ಮ ರಾಜಕೀಯ ವ್ಯವಸ್ಥೆಯನ್ನು ನೋಡಬೇಕು.

ಅಧ್ಯಕ್ಷರು :— ಅವರು ಸತ್ಯಾಂಶವನ್ನು ಹೇಳಿದ್ದಾರೆಂದು ಅಲ್ಲ. ಅವರು ವಿಚಾರ ಮಾತನಾಡಿದ್ದಾರೆಂದು ಹೇಳಿದೆ.

ಶ್ರೀ ಕೆ.ಎನ್. ನಾಗೇಗೌಡ :— ಅವರು ವಿಚಾರ ಮಾತನಾಡಿದ್ದಾರೆಂದು ಹೇಳಿದರೆ ಅದು ಎಲ್ಲಾ ಸರಿ ಇದೆ ಎಂದು, ಒಳಗಡೆ ಸತ್ಯ ಇದೆ ಎಂದೇ ತಾವು ಹೇಳಿದಂತೆ ಪಲಾವ್ ಒಳಗಡೆ ಮಟನ್ ಪೀಸ್ ಇದೆ ಎಂದೇ ಅರ್ಥ. ನಾನು ಹೇಳುವಂಥಾದ್ದು ರಾಜಕೀಯದೊಳಗೆ ಮಾನ್ಯ ಕೆ.ಎಸ್. ಈಶ್ವರಪ್ಪನವರು ಬಿಜೆಪಿಯವರು ಲೆಜಿಸ್ಲೇಚರ್ ಪಾರ್ಟಿ ನಾಯಕರನ್ನಾಗಿ ಮಾಡಿದ್ದಾರೆ. ಅವರನ್ನು ಹಿಂದುಳಿದ ವರ್ಗದವರೆಂದೇ ಮಾಡಿರುವಂಥಾದ್ದು.

ಶ್ರೀಮತಿ ಪ್ರಮೀಳಾ ನೇಸರ್ಗಿ :— ಅಲ್ಲ, ಅವರನ್ನು ನಾಯಕತ್ವಕ್ಕೆ ಶ್ರೇಷ್ಠರು ಎಂದು ಮಾಡಿರುವಂಥಾದ್ದು, ಅವರಿಗೆ ನಾಯಕತ್ವಕ್ಕೆ ಬೇಕಾದಂತಹ ಎಲ್ಲಾ ಗುಣಗಳು ಇದೆ ಎಂದು ನಾಯಕರನ್ನಾಗಿ ಮಾಡಿರುವುದು.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ :— ನೀವು ಬಿ.ಜೆ.ಪಿಯವರನ್ನು ಆ ತಕ್ಕಡಿಯಲ್ಲಿ ತೂಗಬೇಡಿ.

ಶ್ರೀ ಕೆ.ಎನ್. ನಾಗೇಗೌಡ :— ಮಾನ್ಯ ಈಶ್ವರಪ್ಪನವರೇ, ನೀವು ಎಲ್ಲಾ ಜಾತಿ ಮೀಟಿಂಗ್ ಮಾಡುತ್ತೀರಿ, ಊಟ ಮಾಡುತ್ತೀರಿ, ಆ ಮಂತ್ರಿಗೆ ಮೃಷ್ಟಾನ್ನ ಎನ್ನುವಂತಹ ಪದಗಳನ್ನು ಹೇಳಿದ್ದೀರಿ. ಅದು ಪತ್ರಿಕೆಗಳಲ್ಲಿ ಬಂದಿದೆ, ಅದನ್ನು ನೀವು ಹೇಳಿದ್ದೀರಿ. ನಾನು ಆ ರೀತಿ ಹೇಳಿದ್ದು ಸರಿ ಎಂದು ಹೇಳುವುದಿಲ್ಲ. ಈ ಜಾತಿ ವ್ಯವಸ್ಥೆ ಬಗ್ಗೆ ತೀವ್ರವಾದಂತಹ ವಿರೋಧವಿದೆ. ಆದರೆ ಇವತ್ತು ರಾಜಕೀಯ ವ್ಯವಸ್ಥೆಯೊಳಗೆ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರನ್ನು ವಿರೋಧ ಪಕ್ಷದ ನಾಯಕರನ್ನಾಗಿ ಮತ್ತು ಪಾರ್ಟಿಯಲ್ಲಿ ಕಾಂಗ್ರೆಸ್ ಅಧ್ಯಕ್ಷರನ್ನಾಗಿ ಶ್ರೀ ಎಸ್.ಎಂ. ಕೃಷ್ಣರವರನ್ನು ಒಕ್ಕಲಿಗರೆಂದು ಮಾಡಿದ್ದಾರೆ. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರ ಕೆಪಾಸಿಟಿಯನ್ನು ಸುಮಾರು 25-30 ವರ್ಷಗಳಿಂದಲೂ ನೋಡಿದ್ದೇನೆ. ಇವರನ್ನು ಮಾಡಿರುವಂಥಾದ್ದು ಪಕ್ಷದಲ್ಲಿ ಪ್ರಮುಖವಾಗಿದ್ದರೆ ಎಸ್.ಸಿ.ಓಟು ಬರುತ್ತದೆಂದು ಮಾಡಿದ್ದಾರೆ. ನಾನು ಇಲ್ಲಿ ರಾಜಕೀಯ ವ್ಯವಸ್ಥೆ ಸರಿಯೆಂದು ಹೇಳುವುದಿಲ್ಲ, ಆದರೆ ಇದು ಹಾಗೆ ನಡೆದುಕೊಂಡು ಬಂದಿದೆ.

ಅಧ್ಯಕ್ಷರು :— ಇದಕ್ಕೆ ನಾನು ಹೇಳುವುದನೆಂದರೆ ಇಲ್ಲಿ ಎಸ್.ಸಿ. ಎಂದು ಪ್ರಶ್ನೆಯಲ್ಲ. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರಾಗಲಿ, ಮಾನ್ಯ ಸಿದ್ಧರಾಮಯ್ಯನವರಾಗಲಿ, ಮಾನ್ಯ ಕೆ.ಎಸ್. ಈಶ್ವರಪ್ಪನವರಾಗಲಿ, ಅವರಿಗೆ ಇಂತಹ ಸರ್ಟಿಫಿಕೇಟ್‌ಗಳನ್ನು ಕೊಟ್ಟು ನಮ್ಮ ಸ್ನೇಹಿತರು ದಿವಸ ಅದನ್ನು ಬರೆದು ಅವರಿಗೆ ಅಕ್ಸೆಪ್ಟಬಿಲಿಟಿ ಇದ್ದರೂ ಕೂಡ ಬೇರೆ ಕಮ್ಯುನಿಟಿ ಲೀಡರ್ ಆಗುವ ಹಾಗೆ ಇಲ್ಲ. ಅವರು ಇಲ್ಲೇ ಇದ್ದು ಬಿಡಬೇಕು. ಅವರನ್ನು ಒಂದು ರೀತಿಯಲ್ಲಿ ಸೆಲ್‌ಗೆ ಹಾಕಿದ ಹಾಗೆ ಆಗುತ್ತದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಮಾನ್ಯ ಅಧ್ಯಕ್ಷರೇ, ಇವರು ನೋಡುವಂತಹ ದೃಷ್ಟಿನೇ ಹೀಗೆ, ವಿಚಾರ ಮಾಡುವಂಥಾ ದೃಷ್ಟಿಯೂ ಹಾಗೆ, ಮತ್ತೆ ಯಾವ ಮನುಷ್ಯ ಯಾವ ವಿಚಾರಧಾರೆಯಲ್ಲಿ ನಡೆದುಕೊಳ್ಳುತ್ತಾನೋ ಅದೇ ಅವರ ಬಾಯಲ್ಲಿ ಬರುತ್ತದೆ. ಇಲ್ಲಿ ಉದ್ದೇಶ ಇಷ್ಟೆ, ಯಾವ್ಯಾವ ಸರ್ಕಮ್‌ಸ್ಟಮ್‌ನಲ್ಲಿ ಯಾರನ್ನು ಮುಖಂಡರನ್ನಾಗಿ ಮಾಡಬೇಕೆಂದು ಎಷ್ಟೇ ಇದ್ದರೂ ಕೂಡ ಇವತ್ತು ತಾವು ಏನು ಹೇಳುತ್ತೀರಲ್ಲಾ ಒಕ್ಕಲಿಗರನ್ನು ಮಾಡಿದ್ದಾರೆ, ಎಸ್.ಸಿ.ಎಂದು ಮಾಡಿದ್ದಾರೆಂದು ತಾವು ಏನು ಹೇಳುತ್ತಿದ್ದೀರಿ, 1994 ರಲ್ಲಿ ಚುನಾವಣೆಯಾಗಿದ್ದು ಈಐದು ವರ್ಷಗಳಿಂದಲೂ ಎಸ್.ಸಿಯಿಂದಲೇ ಓಟು ಬೇಕಾಗಿತ್ತೇನು? ನನ್ನನ್ನು ವಿರೋಧಪಕ್ಷದ ನಾಯಕನನ್ನಾಗಿ ಮಾಡಿದರೆ ಓಟು ಬರುತ್ತದೆಂದು ಮಾಡಿದ್ದೇನು? ಆ ರೀತಿಯ ಸನ್ನಿವೇಶ ಅಲ್ಲಿ ಬಂತು. ಎಲ್ಲಾ ಶಾಸಕರು ಸೇರಿದರು. ನಮ್ಮಲ್ಲೇ ಒಬ್ಬರನ್ನು ಆರಿಸಬೇಕೆಂದು ಹೇಳಿದರು. ಆದರಂತೆ ಆರಿಸಿದರು. ಇಲ್ಲಿ ದುರ್ದೈವವಾಗಿದೆ ಎಂದರೆ ಈ ಸಮಾಜದಲ್ಲಿ ನಾವು ಹುಟ್ಟಿರುವುದಕ್ಕಾಗಿ ಇವರು ನಮ್ಮನ್ನು ಕೇಳುವುದು ಹೇಗೆಂದರೆ ಮಾತನಾಡುವಾಗಲೇ ದಲಿತ ಮುಖಂಡರು ಎಂದು ಪ್ರಾರಂಭ ಮಾಡುತ್ತಾರೆ, ನಿಮ್ಮನ್ನು ಯಾರಾದರೂ ಒಕ್ಕಲಿಗ ಮುಖಂಡರೆಂದು ಕರೆಯುತ್ತಾರಾ?

ಶ್ರೀ ಕೆ.ಎನ್. ನಾಗೇಗೌಡ :— ಒಕ್ಕಲಿಗ ಮಂತ್ರಿಯೆಂದು ಸಾವಿರಾರು ಜನರು ಕರೆದರು, ನಾವು ಪತ್ರಿಕೆಗಳಲ್ಲಿ ಕಟುವಾಗಿ ಟೀಕೆ ಮಾಡಿದೆವು.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಅದನ್ನು ನೀವು ಸೃಷ್ಟಿ ಮಾಡಿಕೊಂಡಿದ್ದು, ನಾನು ಇದನ್ನು ಅನೇಕ ಸಾರಿ ನೋಡಿದ್ದೇನೆ. ನಾವು ಎಲ್ಲಾದರೂ ನಿಮ್ಮ ಜೊತೆಗೆ ಬಂದಾಗ ನೀವು ಹೇಳುವಂಥಾದ್ದು ದಲಿತ ಮುಖಂಡರು, ನಾಯಕರು ಎಂದು ಅಲ್ಲಿ ಪಟ್ಟಿ ಹಚ್ಚಿ ಮುಂದಕ್ಕೆ ಹೋಗುತ್ತೀರಿ. ಆಗ ಏನಾಗುತ್ತದೆಂದರೆ ಇಂತಹ ಮುಖಂಡರು ಯಾವುದೇ ಪಕ್ಷದಲ್ಲಿ ಇರಲಿ ಅವರಿಗೆ ಬೆಳೆಯುವಂತಹ ಅವಕಾಶವಾಗಲಿ ಅಥವಾ ಅವರು ನಮ್ಮ ಮುಖಂಡರು ಎಂದು ಅವರ ಬಾಯಲ್ಲಿ ಬರುವುದಿಲ್ಲ. ಅವರ ಪಕ್ಷದಲ್ಲೆ ಯಾರಾದರೂ ಒಬ್ಬರು ಬೆಳೆಯುವಂಥ ವ್ಯಕ್ತಿ ಇದ್ದರೂ ಕೂಡ ಇವರು ನಮ್ಮ ಜನತಾ ದಳದ ಮುಖಂಡರು ಅಥವಾ ನಮ್ಮ ಭಾರತೀಯ ಜನತಾದಳದ ಮುಖಂಡರು ನಮ್ಮ ಪಾರ್ಟಿಯ ಮುಖಂಡರು ಎಂದು ಅವರ ಬಾಯಲ್ಲಿ ಎಂದೂ ಬರುವುದಿಲ್ಲ. ಈ ಸಮಾಜದಲ್ಲಿ ಇಷ್ಟೊಂದು ಪ್ರಿಜ್ಯುಡಿಸ್ ಬೆಳೆದುಕೊಂಡು ಬಂದಿದೆ. ಈ ಪ್ರಿಜ್ಯುಡಿಸ್ ಅನ್ನು ತೆಗೆದುಹಾಕುವಂತಹ ಶಕ್ತಿ ಎಂತಹ ವಿದ್ಯಾವಂತನಿಗೂ ಕೂಡ ಇಲ್ಲ. ಇದನ್ನು ನಾನು ಸಾಕಷ್ಟು ನೋಡಿದ್ದೇನೆ. ಈ ಸಮಾಜದಲ್ಲಿ ಇಷ್ಟು ಜನರು ವಿದ್ಯಾವಂತರು ಆಗುತ್ತಿದ್ದಾರೆ, ಎಷ್ಟು ಜನರು ಪ್ರಜ್ಞಾವಂತರು ಆಗುತ್ತಿದ್ದಾರೆ. ಸಾಕ್ಷರತೆಯ ಪ್ರಮಾಣ ಶೇಕಡವಾರು ಹೆಚ್ಚಾಗಿದೆ, ಅಷ್ಟು ಜಾತೀಯತೆ ಬೆಳೆಯುತ್ತಿದೆ, ಅದಕ್ಕೆ ಇತಿಮಿತಿ ಎಂಬುದು ಇಲ್ಲ. ಒಂದು ಕಾಲದಲ್ಲಿ ಲಿಟ್ರಸಿ ಪರ್ಸೆಂಟೇಜ್ ಕಡಿಮೆ ಇದ್ದು ವಿದ್ಯಾವಂತರು ಕಡಿಮೆ ಇದ್ದಾಗ ಅನುಕಂಪ ದಿಂದ ಒಗ್ಗಟ್ಟಿನಿಂದ ಹೋಗಬೇಕೆಂದು ಇತ್ತು. ದೇಶದ ಸಮಾಜದ ದೃಷ್ಟಿಯಿಂದ ಯೋಚನೆ ಮಾಡಬೇಕು, ಧರ್ಮದ ದೃಷ್ಟಿಯಿಂದ ಯೋಚನೆ ಮಾಡಬೇಕೆಂದು ಒಗ್ಗಟ್ಟಿಗೋಸ್ಕರ ಈ ಭೇದ, ಭಾವವನ್ನು ತೆಗೆದುಹಾಕುವುದಕ್ಕೋಸ್ಕರ ಜನರು ಹೋರಾಟ ಮಾಡುತ್ತಿದ್ದರು. ಆದರೆ ಇವತ್ತು ಏನಾಗಿದೆ ಎಂದರೆ ಅದೆಲ್ಲಾ ಉಲ್ಟಾ ಆಗಿದೆ 10 ಜನರಲ್ಲಿ ಹೋರಾಟ ಮಾಡುತ್ತಿದ್ದರು. ಆದರೆ ಇವತ್ತು ಏನಾಗಿದೆ ಎಂದರೆ ಅದೆಲ್ಲಾ ಉಲ್ಟಾ ಆಗಿದೆ 10 ಜನರಲ್ಲಿ ಒಬ್ಬರೋ, ಇಬ್ಬರೋ ಮುಂದೆ ಬಂದಂತಹವರು ಈ ಜಾತಿಯಲ್ಲಿ ಬಂದರುಬಿಡಿ, ಎಂದು ಪ್ರಿಜ್ಯುಡಿಸ್ ಬೆಳೆಯಿತು. ಅದನ್ನೇ ಪ್ರಚಾರ ಮಾಡಿಕೊಂಡು ಹೋಗುವುದು, ಆದುದರಿಂದ ದಯಮಾಡಿ ನಮಗೆ ಆ ಬಣ್ಣಕಟ್ಟುವುದಕ್ಕೆ ಹೋಗಬೇಡಿ. ನೀವು ಬೇಕಾದರೆ ಒಕ್ಕಲಿಗ ಮುಖಂಡರೆಂದು ತೆಗೆದುಕೊಳ್ಳಿ, ನಾನು 28 ವರ್ಷಗಳು ಶಾಸಕನಾಗಿ ಇದ್ದೆ, ಅಷ್ಟೇ ಸಾಕು ಮುಂದೆ ಅವಕಾಶ ಸಿಗುತ್ತದೆಂದರೆ ನಮ್ಮ ಶಕ್ತಿಯ ಮೇಲೆ, ನಮ್ಮ ಕಾಲಿನ ಮೇಲೆ, ನಮ್ಮ ಪ್ರಾಮಾಣಿಕತೆಯ ಮೇಲೆ ಏನಾದರೂ ಅವಕಾಶ ಸಿಕ್ಕರೆ ಮತ್ತೆ ಇಲ್ಲಿಗೆ ಬರೋಣ. ಆದರೆ ನೀವು ಇಲ್ಲಿ ಜಾತಿಯ ಪಟ್ಟಿಯನ್ನು ಹಚ್ಚಿ ಇದನ್ನು ಹೇಳುವುದಕ್ಕೆ ಹೋಗಬೇಡಿ. ದಯಮಾಡಿ ಆ ಫಿಲಾಸಫಿಯನ್ನು ನೀವು ಮಾತ್ರ ಇಟ್ಟುಕೊಳ್ಳಿ.

ಶ್ರೀ ಕೆ.ಎನ್. ನಾಗೇಗೌಡ :— ಮಾನ್ಯ ಅಧ್ಯಕ್ಷರೆ, ಅವರ ಫಿಲಾಸಫಿ ಚೆನ್ನಾಗಿದೆ, ನೀವು ಬೇಕಾದರೆ ಆ ಪಟ್ಟ ಇಟ್ಟುಕೊಳ್ಳಿ, ನೀವು ಬೇಕಾದರೆ ಕರೆಸಿಕೊಳ್ಳಿ, ನಾವು ಹಾಗೆ ಕರೆಸಿಕೊಳ್ಳುವುದಿಲ್ಲವೆಂದು ಹೇಳುತ್ತಾರೆ. ಆದರೆ ಎಲ್ಲಾ ಪತ್ರಿಕೆಗಳಲ್ಲೂ ಏನು ಬಂತು? ಕಾಂಗ್ರೆಸ್ ಪಕ್ಷದಲ್ಲಿ ಮಾನ್ಯ ಎಸ್.ಎಂ. ಕೃಷ್ಣರವರು ಮತ್ತು ಮಾನ್ಯ ರಾಜಶೇಖರ-ಮೂರ್ತಿಯವರು ಜಾತಿಯ ಬಗ್ಗೆ ಬಂತಲ್ಲ ಆಗ ನೀವು ಅದನ್ನು ಖಂಡಿಸಿದ್ದೀರಿ? ನೀವು ಪಕ್ಷದ ನಾಯಕರಾಗಿ ಖಂಡಿಸಬೇಕಾಗಿತ್ತು, ಇದು ಪತ್ರಿಕೆಗಳಲ್ಲಿ ಬಂದಿದೆ. ಮಾನ್ಯ ಎಸ್.ಎಂ. ಕೃಷ್ಣರವರು ಒಕ್ಕಲಿಗರು ಆಗಬೇಕು, ಮಾನ್ಯ ರಾಜಶೇಖರ ಮೂರ್ತಿಯವರು ಲಿಂಗಾಯಿತರು ಪಕ್ಷದ ಅಧ್ಯಕ್ಷರು ಆಗಬೇಕೆಂದು ಬಂದಾಗ ನೀವೆಲ್ಲಾ ಕಣ್ಣುಮುಚ್ಚಿಕೊಂಡು ಕುಳಿತ್ತಿದ್ದಿರಲ್ಲಾ, ಆಗ ನೀವು ಹೇಳಿದಂತಹ ಸಿದ್ಧಾಂತ ಬರಲಿಲ್ಲವೇ?

2.10 ಪಿ.ಎಂ.

ಅಧ್ಯಕ್ಷರು :— ಬರೆಯುವವರಲ್ಲೂ ಲಿಂಗಾಯಿತರು ಇರುತ್ತಾರಲ್ಲಾ.

ಶ್ರೀ ಕೆ.ಎನ್. ನಾಗೇಗೌಡ :— ಯಾರೇ ಬರೆಯಲಿ, ಅವರಲ್ಲ. ಈ ಸಮಾಜ ಕೆಟ್ಟಿದೆ, ರಾಜಕೀಯ ವ್ಯವಸ್ಥೆ ಕೆಟ್ಟಿದೆ.

ಅಧ್ಯಕ್ಷರು :— ಪೆನ್ನು ಒಂದಕ್ಕೆ ಮಾತ್ರ ಜಾತಿ ಇಲ್ಲ. ಪೆನ್ನು ಹಿಡಿದುಕೊಂಡು ಬರೆಯುವವರಲ್ಲಿ ಒಕ್ಕಲಿಗರು, ಲಿಂಗಾಯಿತರು, ಬ್ರಾಹ್ಮಣರೂ ಎಲ್ಲರೂ ಇರುತ್ತಾರೆ.

ಶ್ರೀ ಎಸ್. ಸುರೇಶ್ ಕುಮಾರ್ :— ಮಾನ್ಯ ಅಧ್ಯಕ್ಷರೇ, ಮಲ್ಲಿಕಾರ್ಜುನ ಖರ್ಗೆಯವರ ಮಾತನ್ನು, ಅವರ ಕಳಕಳಿಯನ್ನು ಎಲ್ಲರೂ ಒಪ್ಪಿಕೊಳ್ಳುವಂಥ ಪರಿಸ್ಥಿತಿ ಇದೆ. ಸ್ವಾತಂತ್ರ್ಯ ಬಂದು 50 ವರ್ಷಗಳಾದ ಮೇಲೆ ನಮ್ಮ ರಾಜಕೀಯ ಸಾಧನೆ ಏನೆಂದು ನಾನು ಯೋಚಿಸುತ್ತಿದ್ದೆ. ಆಗ ನನಗನ್ನಿಸಿದ್ದನ್ನು ಒಂದು ವಾಕ್ಯದಲ್ಲಿ ಹೇಳಬೇಕೆಂದರೆ, ಸ್ವಾತಂತ್ರ್ಯ ಬಂದ 50 ವರ್ಷಗಳ ನಂತರವೂ ನಮ್ಮ ಚುನಾವಣೆಗಳಲ್ಲಿ, the slogan in India is, `not cast you vote. it is, vote your caste. 'ಮೊದಲು ಕಾಸ್ಟ್ ಯುವರ್ ಓಟ್ ಎಂದಿತ್ತು, ಈಗ ಓಟ್ ಯುವರ್ ಕ್ಯಾಸ್ಟ್ ಎಂದಾಗಿದೆ. ಈ ಪರಿಸ್ಥಿತಿಗೆ ತಂದುಬಿಟ್ಟು ಎಲ್ಲರನ್ನೂ ಜಾತಿ ಲೇಬರ್ ಹಾಕಿ ನೋಡುತ್ತಿದ್ದೇವೆ.

ಶ್ರೀ ಡಿ. ಮಂಜುನಾಥ್ :— ನಾನು ಈಶ್ವರಪ್ಪನವರಿಗೆ ಮನವಿ ಮಾಡಿಕೊಳ್ಳುತ್ತೇನೆ, ಚರ್ಚೆ ಎಲ್ಲೆಲ್ಲಿಗೋ ಹೋಗುತ್ತಿದೆ. ಅವರು ಮೊದಲು ಎಂ.ಪಿ.ಎಂ. ಮುಂತಾದ ವಿಷಯಗಳ ಬಗ್ಗೆ ಬಹಳ ಚೆನ್ನಾಗಿ ಮಾತನಾಡಿದರು. ನಂತರ ಇದ್ದಕ್ಕಿದ್ದ ಹಾಗೆ ಬೇರೆ ಕಡೆ ಹೋದರು. ಜಾತ್ಯಾತೀತ ವಿಷಯ ಬಂತು, ಜಾತಿ ಬಂತು. ಅದಕ್ಕಾಗಿ ಹೇಳುತ್ತಿದ್ದೇನೆ, ಸರ್ಕಾರ ವೈಫಲ್ಯಗಳಿದ್ದರೆ ಅದರ ಬಗ್ಗೆ ಏನಾದರೂ ಮಾತನಾಡಿ.

ಅಧ್ಯಕ್ಷರು :— ಇರಲಿ, ಇದೆಲ್ಲಾ ಬೇಕು. ಅವರು ಹೇಳಲಿ.

ಶ್ರೀ ಕೆ.ಎಸ್. ಈಶ್ವರಪ್ಪ :— ನಾನು ಏನು ಹೇಳುವುದಕ್ಕೆ ಹೊರಟಿದ್ದೇನೆ ಎಂದರೆ, ಇದರಲ್ಲಿ ಯಾವುದೋ ಒಂದು ಜಾತಿ ಇದೆ ಎಂದು ನಾಗೇಗೌಡರು ಗುರುತಿಸಿದರು. ನಾನು ಈ ವಿಧಾನಸಭೆಯಲ್ಲಿ ಹೆಮ್ಮೆಯಿಂದ ಹೇಳುತ್ತೇನೆ, ನಾನು ರಾಷ್ಟ್ರೀಯ ಸ್ವಯಂ ಸೇವಕ ಸಂಘಕ್ಕೆ ಹೋಗದಿದ್ದರೆ, ಇವತ್ತು ನಾನು ಯಾವುದಾದರೂ ಒಂದು ಹೋಟೆಲ್ ಕಟ್ಟೆಯ ಮೇಲೋ ಅಥವಾ ಇನ್ನೆಲ್ಲೋ ಬೀಡಿ ಸೇದಿಕೊಂಡು ಬಿದ್ದಿರುತ್ತಿದ್ದೇನೋ ಗೊತ್ತಿಲ್ಲ. ಆ ರಾಷ್ಟ್ರೀಯ ವಿಚಾರ ಧಾರೆ ನನ್ನನ್ನು ಎಳೆಯಿತು. ತಾವೂ ನೋಡಿದ್ದೀರಿ, ಸ್ವಾತಂತ್ರ್ಯ ಬಂದಾಗಿನಿಂದ ಶಿವಮೊಗ್ಗ ನಗರದಲ್ಲಿ ಯಾರ್‍ಯಾರೋ ಗೆದ್ದು ಬಂದರು, ಆಕಸ್ಮಿಕವೆಂದರೆ ಬ್ರಾಹ್ಮಣರೇ ಗೆದ್ದುಕೊಂಡು ಬಂದರು. ನನ್ನ ವಿದ್ಯೆ ಮುಗಿಯುತ್ತಿದ್ದ ಹಾಗೆ ಭಾರತೀಯ ಜನತಾ ಪಕ್ಷ ನನಗೆ ಟಿಕೆಟ್ ಕೊಟ್ಟಿತು. ಜಾತಿ ವಿಚಾರ ಬಂದಿದ್ದಕ್ಕೆ ನಾನು ಹೇಳುತ್ತಿದ್ದೇನೆ, ನೀವು ಕಾಂಗ್ರೆಸ್, ಜನತಾ ದಳಕ್ಕೆ ಹೋಲಿಸಿಕೊಳ್ಳಬೇಡಿ.

ಶ್ರೀ ಕೆ.ಎನ್. ನಾಗೇಗೌಡ :— ಕಲ್ಯಾಣ್ ಸಿಂಗ್‌ದ್ದು ಯಾವ ವಾರ್, ಅಲ್ಲೂ ಜಾತಿ ವಾರೇ ನಡೆದದ್ದು.

ಅಧ್ಯಕ್ಷರು :— ಕಲ್ಯಾಣ ಸಿಂಗ್‌ದ್ದು ಏನಾಯಿತು, ಶಂಕರ್‌ಸಿಂಗ್ ವಘೇಲಾದ್ದು ಏನಾಯಿತು ಎನ್ನುವ ವಿಚಾರಗಳು ಬೇಡ.

ಶ್ರೀ ಕೆ.ಎಸ್. ಈಶ್ವರಪ್ಪ :— ಶಂಕರ್‌ಸಿಂಗ್ ವಘೇಲಾದ್ದು ಏನಾಯಿತು, ನಿಮ್ಮದೇನಾಯಿತು, ಜಯಕುಮಾರ್‌ದ್ದು ಏನಾಯಿತು ಎನ್ನುವುದನ್ನು ನಾನು ಆಮೇಲೆ ಹೇಳುತ್ತೇನೆ. ಇವರು ನನ್ನನ್ನು ಒಂದು ಜಾತಿಗೆ ಗುರುತಿಸುವಂಥ ಪ್ರಯತ್ನ ಮಾಡುತ್ತೇನೆ ಎಂದು ಹೇಳಿದರಲ್ಲಾ, ಅದಕ್ಕಾಗಿ ನಾನು ಹೇಳುತ್ತೇನೆ ಕೇಳಿ, ಶಿವಮೊಗ್ಗ ನಗರದಲ್ಲಿ ನನ್ನ ಕಮ್ಯುನಿಟಿಯ ಓಟುಗಳಿರುವುದು 6-7 ಸಾವಿರ. ಅದರಲ್ಲೂ ಕುರುಬರ ಜನಾಂಗದವರು ಹೆಚ್ಚಿಗೆ ಕಾಂಗ್ರೆಸ್‌ನಲ್ಲೇ ಇರುವುದು. ಹೆಚ್ಚಿನ ಸಂಖ್ಯೆಯ ಬ್ರಾಹ್ಮಣರು, ಲಿಂಗಾಯಿತರು, ಒಕ್ಕಲಿಗರು ಇರುವಂಥ ಕ್ಷೇತ್ರ ನನ್ನದು. ಆ ಜಾತಿಗಳಲ್ಲಿ ಪ್ರಭಾವೀ ವ್ಯಕ್ತಿಗಳು ಇಲ್ಲ ಎಂದಿಲ್ಲ. ಒಬ್ಬ ಹುಡುಗ ಹೋರಾಟ ಮಾಡುತ್ತಿದ್ದಾನೆ ಎಂದು ನನ್ನನ್ನು ಗುರುತಿಸಿ ಚುನಾವಣೆಗೆ ನಿಲ್ಲಿಸಿದರು. ನನ್ನನ್ನು ಚುನಾವಣೆಗೆ ನಿಲ್ಲಿಸಿದಾಗಲೂ ಕೂಡ ಯಾರೋ ಕುರುಬ ಹುಡುಗನನ್ನು ನಿಲ್ಲಿಸಿದ್ದಾರೆ, ಅವರದು 5-6 ಸಾವಿರ ಓಟುಗಳಿಲ್ಲ, ಬಿ.ಜೆಪಿ.ಯವರಿಗೆ ಬುದ್ಧಿಯಿಲ್ಲ ಎನ್ನುವಂಥ ಮಾತುಗಳನ್ನು ಹೇಳಿದರು. ನನ್ನ ಭಾವನೆಯನ್ನಷ್ಟೇ ಹೇಳುತ್ತಿದ್ದೇನೆ. ನನ್ನನ್ನು ಗುರುತಿಸಿ ಟಿಕೆಟ್ ಕೊಟ್ಟರು. ನಂತರ ಓಟಿಂಗ್ ಆಯಿತು. ತಮಗೇ ಗೊತ್ತಿದೆ, ನನ್ನ ವಿರುದ್ಧವಾಗಿ ಮಾಜಿ ಮಂತ್ರಿಗಳಾದಂಥ ಕೆ.ಹೆಚ್. ಶ್ರೀನಿವಾಸ್ ಎನ್ನುವವರು

ನಿಂತಿದ್ದರು. ಅವರ ಮುಂದೆ ನಾನು ಏನೇನೂ ಅಲ್ಲ. ಓಟಿಂಗ್ ಆಯಿತು. ಆಗ ಬೂತ್ ಮಟ್ಟಕ್ಕೆ ಬಾಕ್ಸ್ ಓಪನ್ ಮಾಡುತ್ತಿದ್ದುದು ತಮಗೇ ಗೊತ್ತಿದೆ. ಬ್ರಾಹ್ಮಣರ ಕೇರಿಯ ಬೂತ್ ಬಂತು. ಎಲ್ಲಾ ರಾಜಕಾರಣಿಗಳು ಅವರವರ ಬೂತ್ ಬಿಟ್ಟು ಈ ಬಾಕ್ಸ್ ಹತ್ತಿರ ಬಂದರು. ಇಲ್ಲಿ ಏನಾಗುತ್ತದೆ ಎಂದು ನೋಡೋಣ, ಚುನಾವಣೆಯ ರಿಸಲ್ಟ್ ಇದರ ಮೇಲೆಯೇ ನಿಂತಿದೆ ಎಂದು ಬಂದರು. ಎಲ್ಲಾ ಪಕ್ಷದವರು ಬಂದು ನಿಂತುಕೊಂಡರು. ಈಗ ಗೊತ್ತಾಗುತ್ತದೆ ನೋಡಿ ನಿಮ್ಮ ಹಣೆಬರಹ ಎನ್ನುವ ಮಾತನ್ನಾಡುತ್ತಿದ್ದರು. ಏಕೆ ಹೀಗೆ ಮಾತನಾಡುತ್ತಿದ್ದಾರೆ ಎಂದು ನನಗೇ ಆಶ್ಚರ್ಯವಾಯಿತು. ಆ ಬೂತ್‌ನಲ್ಲಿ ಪೋಲ್ ಆಗಿದ್ದಂಥ 543 ಓಟುಗಳಲ್ಲಿ ಬ್ರಾಹ್ಮಣರು 512 ಓಟುಗಳನ್ನು ನನಗೆ ಕೊಟ್ಟಿದ್ದರು. ಅವರು ಭಾರತೀಯ ಜನತಾ ಪಕ್ಷದ ವಿಚಾರವನ್ನು ನೋಡಿದರು, ಸಿದ್ಧಾಂತ ನೋಡಿದರು ಆದರೆ ಜಾತಿ ನೋಡಲಿಲ್ಲ. ನಾನು ಇವತ್ತು ಆ ಬ್ರಾಹ್ಮಣರನ್ನು ಮತ್ತು ಎಲ್ಲಾ ಜನಾಂಗದವರನ್ನು ಸ್ಮರಣೆ ಮಾಡಿಕೊಳ್ಳುತ್ತೇನೆ. ಅವರು ನನಗೆ ಇವತ್ತು ಈ ಸ್ಥಿತಿ ತಂದು ಕೊಟ್ಟಿದ್ದಾರೆ. ರಾಷ್ಟ್ರೀಯ ಸ್ವಯಂ ಸೇವಕ ಸಂಘ ಮತ್ತು ಬಿ.ಜೆ.ಪಿ.ಯ ಆದೇ ವಿಚಾರಗಳೇ ನನ್ನನ್ನು ಈ ಯೋಗ್ಯತೆಗೆ ತಂದಿರುವುದು. ನಮ್ಮನ್ನು ಅಲ್ಪಸಂಖ್ಯಾತರ ವಿರೋಧಿಗಳು ಎಂದು ಹೇಳುತ್ತಾರೆ. ಕಳೆದ ಬಾರಿ ಮಸೀದಿಗೆ ದುಡ್ಡು ಕೊಡಿ ಎಂದು ನಾನು ರೋಷನ್ ಬೇಗ್ ಹತ್ತಿರ ಜಗಳವಾಡಿದ್ದೇನೆ. ಹೇಳುತ್ತೇನೆ, ಇವರು ಯಾವ ಸರ್ಕಸ್ಸು ಮಾಡಿದರೂ ಏನೂ ಮಾಡುವುದಕ್ಕಾಗುವುದಿಲ್ಲ. ನನ್ನ ಕ್ಷೇತ್ರಕ್ಕೆ ಬನ್ನಿ. ನಾವು ಅಣ್ಣತಮ್ಮಂದಿರಂತೆ ಬದುಕುತ್ತಿದ್ದೇವೆ. ನಮ್ಮ ಮನೆಗೆ ಮುಸ್ಲಿಂ ಹೆಣ್ಣುಮಕ್ಕಳು ಬುರುಖಾ ಹಾಕಿಕೊಂಡು ಬಂದು ನಮ್ಮ ಸಹೋದರಿಯರ ಜೊತೆ ಕುಳಿತುಕೊಳ್ಳುತ್ತಾರೆ. ಈ ರೀತಿಯ ಭಾವನೆಗಳು ಏನಿವೆ ಅದನ್ನೇ ನಾನು ಕೊನೆಯ ವಿಚಾರವಾಗಿ ಹೇಳಿ ನನ್ನ ಮಾತನ್ನು ಮುಗಿಸಲು ಇಷ್ಟಪಡುತ್ತೇನೆ. ಇವತ್ತು ಬಿ.ಜೆ.ಪಿ. ಸಂಘ ಪರಿವಾರ ಎನ್ನುತ್ತಿದ್ದ ಹಾಗೆ ಇವರು ಮುಸಲ್ಮಾನರ ವಿರೋಧಿಗಳು, ಕ್ರಿಶ್ಚಿಯನ್ನರ ವಿರೋಧಿಗಳು ಎನ್ನುವ ಮಾತನ್ನು ಹೇಳುತ್ತಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಲಿ. ಇವರ ಆರ್.ಎಸ್.ಎಸ್. ಭಾಷಣ ಬೇಕಾಗಿಲ್ಲ. ನಾನು ಏಕೆ ಹೇಳುತ್ತಿದ್ದೇನೆ ಎಂದರೆ, ಅವರು ಆರ್.ಎಸ್.ಎಸ್. ಫಿಲಾಸಫಿ ಹೇಳುವುದು, ನಾವು ನಮ್ಮ ಗೋಳೋಲ್‌ಕರ್ ಗುರೂಜಿ ಫಿಲಾಸಫಿ ಏನಿತ್ತು, ಅವರ ವಿಚಾರಗಳು ಏನಿದ್ದವು, ಮುಸಲ್ಮಾನರ ಬಗ್ಗೆ ಅವರು ತಮ್ಮ ಪುಸ್ತಕದಲ್ಲಿ ಹೇಗೆ ಬರೆದಿದ್ದಾರೆ ಎನ್ನುವುದು ಅವರಿಗೆ ಗೊತ್ತಿರಬೇಕು. ಇವೆಲ್ಲವನ್ನೂ ನಾವು ಮಾತನಾಡಿಕೊಂಡು ಹೋದರೆ ಒಬ್ಬರಿಗೊಬ್ಬರಿಗೆ ಘರ್ಷಣೆ ಆಗುತ್ತದೆ. ಆದ್ದರಿಂದ ದಯವಿಟ್ಟು ರಾಜ್ಯಪಾಲರ ಭಾಷಣದ ಬಗ್ಗೆ ಮಾತ್ರ ಮಾತನಾಡಲಿ.

ಶ್ರೀ ಕೆ.ಎಸ್. ಈಶ್ವರಪ್ಪ :— ನೀವೆಲ್ಲಾ ಪೂರ್ತಿ ರಾಜ್ಯಪಾಲರ ಭಾಷಣದ ಮೇಲೆಯೇ ಮಾತನಾಡಿದಿರೇನು?

ಶ್ರೀ ಮಲ್ಲಿಕಾರ್ಜುನ ಖರ್ಗೆ :— ನೀವು ಹೇಳತಕ್ಕಂಥ ಭಾಷಣದಲ್ಲಿ ಆರ್.ಎಸ್.ಎಸ್.ನ್ನು ಪ್ರತಿಪಾದನೆ ಮಾಡುವುದನ್ನು ನೋಡಿದರೆ ಇದಕ್ಕೆ ನಾನು ಏನು ಹೇಳಬೇಕು ಎಂದು ತಿಳಿಯುತ್ತಿಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ :— ನಾನು ಎದೆತಟ್ಟಿ ಹೇಳುತ್ತೇನೆ, ಇಂಥ ಒಂದು ಸಂಸ್ಥೆಯಲ್ಲಿ ಇದ್ದೇನೆ ಎಂದು ನನಗೆ ಆನಂದವಾಗುತ್ತದೆ. ನಾನು ಏನು ಹೇಳುವುದಕ್ಕೆ ಹೊರಟಿದ್ದೇನೆ ಎಂದರೆ, ಇಡೀ ದೇಶವಲ್ಲಿ ಕೋಮು ಗಲಭೆಗಳಾದವು. ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುವಾಗ ಸುರತ್ಕಲ್ ಘಟನೆಯ ಬಗ್ಗೆ ಪ್ರಸ್ತಾಪ ಮಾಡುತ್ತಾ ಅನುಮಾನ ಪಟ್ಟರು, ಅವರು ನೇರವಾಗಿ ಇಂಥವರು ಮಾಡಿದ್ದಾರೆ ಎಂದು ಆಪಾದನೆ ಮಾಡಲಿಲ್ಲ, ಭಜರಂಗದಳ, ವಿಶ್ವಹಿಂದೂ ಪರಿಷತ್, ಹಿಂದೂ ಜಗರಣಾ ವೇದಿಕೆ ಇವರುಗಳು ಮಾಡಿರಬಹುದು ಎನ್ನುವ ಶಂಕೆ ಇದೆ ಎನ್ನುವ ಮಾತನ್ನು ಹೇಳಿದರು. ಅದನ್ನು ಇವರು ಇವತ್ತು ಹೊಸದಾಗಿ ಹೇಳುತ್ತಿಲ್ಲ. ಚಿತ್ತರಂಜನ್‌ರವರು ಸಾಯುವುದಕ್ಕೆ ಮುಂಚೆ ಭಟ್ಕಳದಲ್ಲಿ 1993ರಲ್ಲಿ ಗಲಭೆಯಾಯಿತು. ವೀರಪ್ಪ ಮೊಯ್ಲಿಯವರು ಮುಖ್ಯಮಂತ್ರಿಗಳಾಗಿದ್ದಾಗ ಭಟ್ಕಳದಲ್ಲಿ ಗಲಭೆಯಾಯಿತು. ಆಗ ಜನ ಸತ್ತರು. ಆಗ ನಾವು, ವಿದೇಶೀ ಶಕ್ತಿಗಳು ಬಂದಿದ್ದಾರೆ, ಅವರ ಶಕ್ತಿ ಇಲ್ಲಿ ಜಾಸ್ತಿಯಾಗುತ್ತಿದೆ, ತನಿಖೆ ಮಾಡಿ ಎಂದು ಹೇಳಿದೆವು. ಅವತ್ತೂ ಇವರು ಇದೇ ಆಪಾದನೆಯನ್ನೇ ಮಾಡಿದರು. ಈ ವಿ.ಹೆಚ್.ಪಿ., ಭಜರಂಗದಳ, ಆರ್.ಎಸ್.ಎಸ್. ಇವುಗಳೇ ಇದಕ್ಕೆ ಕಾರಣ ಎಂದು ಹೇಳಿದರು. ಮಾಡಿರುವುದು ನಾವಲ್ಲ, ರಾಷ್ಟ್ರದ್ರೋಹಿಗಳು ಯಾರು ಎಂದು ತನಿಖೆ ಮಾಡಿ ಎಂದು ಹೇಳಿದೆವು. ಸಂತೋಷವೆಂದರೆ, ನ್ಯಾಯಮೂರ್ತಿ ಜಗನ್ನಾಥ ಶೆಟ್ಟಿಯವರ ಆಯೋಗವನ್ನು ನೇಮಕ ಮಾಡಿದರು. ಈ ಆಯೋಗದ ವರದಿಯನ್ನು ಹೊರಗಡೆ ಕೊಡುವುದಕ್ಕೆ ಇವರಿಗೆ ಶಕ್ತಿ ಇಲ್ಲ. ಇಡೀ ದೇಶದಲ್ಲಿ ಆಗಿರುವಂಥ ಕೋಮು ಗಲಭೆಗಳ ಬಗ್ಗೆ ಅನೇಕ ನ್ಯಾಯಾಂಗ ತನಿಖೆಗಳಾಗಿವೆ. ಯಾವುದಾದರೂ ಒಂದು ಕೋಮು ಗಲಭೆಯಲ್ಲಿ ಸಂಘ ಪರಿವಾರದ ಒಬ್ಬ ವ್ಯಕ್ತಿ ಇದಕ್ಕೆ ಕಾರಣವೆಂದರೆ ನಾನು ರಾಜಕಾರಣವನ್ನು ಬಿಟ್ಟುಬಿಡುತ್ತೇನೆ. ರಾಜಕಾರಣ ಮಾಡುವುದಕ್ಕೋಸ್ಕರ ಇಲ್ಲಿ ರಾಜಕಾರಣ ಮಾಡುತ್ತಿದ್ದೇನು? ಇನ್ನೊಬ್ಬರ ಹೆಣದ ಮೇಲೆ ರಾಜಕೀಯ ಮಾಡುವುದಕ್ಕೆ ನಾವು ಇಷ್ಟಪಡುವುದಿಲ್ಲ. ನಾವು ಅಂಟಿಕೊಂಡಿರುವಂಥ ವಿಚಾರಗಳನ್ನು ಯಾರೂ ಬದಲಾವಣೆ ಮಾಡಲು ಸಾಧ್ಯವಿಲ್ಲ. ಅದಕ್ಕೋಸ್ಕರ ಹೇಳುತ್ತಿದ್ದೇನೆ, ಈ ಸದನದಿಂದ ಒಂದು ಸಂದೇಶ ಇಡೀ ರಾಜ್ಯಕ್ಕೆ ಹೋಗಬೇಕು. ಇವತ್ತಿನವರೆಗೆ ಆಗಿದ್ದು ಆಗಿಹೋಯಿತು. ತಮಗೆ ಕೈ ಮುಗಿಯುತ್ತೇನೆ, ಕನಿಷ್ಠ ಇನ್ನು ಮುಂದೆಯಾದರೂ ದಯವಿಟ್ಟು ಈ ಜಾತಿ ರಾಜಕಾರಣವನ್ನು ಬಿಟ್ಟುಬಿಡಿ. ನಿಮ್ಮ ಮಂತ್ರಿ ಮಂಡಲದ ಆತೃಪ್ತಿಯನ್ನು ಕೇಳಿ ಕೇಳಿ ನಮಗೆ ಸಾಕಾಗಿ ಹೋಗಿದೆ. ನಿಮ್ಮ ಕಚ್ಚಾಟದ ಬಗ್ಗೆ ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ. ಏಕೆಂದರೆ ದಿನ ಬೆಳಗಾದರೆ ಸಾಕು ಪೇಪರ್‌ನಲ್ಲಿ ಇವರ ಕಚ್ಚಾಟವೇ

ಇರುತ್ತದೆ. ಮತ್ತೆ ನೀವು ಏಕೆ ಅದನ್ನು ಹೇಳುವುದಕ್ಕೆ ಹೋಗುತ್ತೀರಿ ಎನ್ನುತ್ತಾರೆ. ನಮಗೆ ಸಾಕಾಗಿ ಹೋಗಿದೆ. ಬೆಳಗಿನಿಂದ ಸಂಜೆಯವರೆಗೆ ಆ ಜಾತಿಯ ಮಂತ್ರಿ ಈ ಜಾತಿಯ ಛೇರ್‌ಮನ್ ಎನ್ನುವುದೇ ಆಗಿದೆ. ಬಡಿದಾಟ ಮಾಡುವುದು ನಮ್ಮ ಹಕ್ಕು ಎಂದು ನೀವು ತೀರ್ಮಾನ ಮಾಡಿದರೆ ನಾವು ಏನೂ ಮಾಡುವುದಕ್ಕಾಗುವುದಿಲ್ಲ. ಇನ್ನು ಮುಂದಾದರೂ ಕೂಡ ಜಾತಿ ರಾಜಕಾರಣವನ್ನು ಬಿಟ್ಟುಬಿಡಿ.

ಶ್ರೀ ಕೆ.ಎನ್. ನಾಗೇಗೌಡ :— ಜಾತಿ ರಾಜಕಾರಣವನ್ನು ಬಿಟ್ಟುಬಿಡೋಣ ಎಂದು ಸದನದಲ್ಲಿ ಎಲ್ಲರೂ ಕೇವಲ ಭಾಷಣ ಮಾಡುತ್ತಾರೆ. ನಾವು ರಾಜಕೀಯ ಭಾಷಣಗಳನ್ನು ನೋಡಿದ್ದೇವೆ. ಆದರೆ ಎಷ್ಟೋ ದೊಡ್ಡದೊಡ್ಡ ನಾಯಕರುಗಳನ್ನು ನಾನು ನೋಡಿಕೊಂಡು ಬಂದಿದ್ದೇನೆ. ರಾಷ್ಟ್ರ ನಾಯಕರು, ಪ್ರಧಾನಮಂತ್ರಿಗಳು, ಕೇಂದ್ರ ಸಚಿವರುಗಳು ಎಲ್ಲರೂ, ಜಾತಿ ಬಿಡಿ, ಜಾತಿ ರಾಜಕಾರಣ ಬಿಡಿ ಎಂದು ಹೇಳುತ್ತಾರೆ. ಆದರೆ ಮನೆಗೆ ಹೋದ ತಕ್ಷಣ, ಅವರ ಅಧಿಕಾರದ ಆಸೆ ಬಂದಾಕ್ಷಣ, ಅವರ ಅಧಿಕಾರದ ಉಳುವಿಗೋಸ್ಕರವಾಗಿ ಎಲ್ಲರೂ ಜಾತಿಯನ್ನು ಎಳೆದೇ ಎಳೆಯುತ್ತಾರೆ. ಇದಕ್ಕೆ ಒಂದೆರಡು ಎಕ್ಸೆಪ್ಷನ್ಸ್ ಇರಬಹುದು.

ಶ್ರೀ ಕೆ.ಎಸ್. ಈಶ್ವರಪ್ಪ :— ಇವರ ಹೃದಯದಲ್ಲಿರುವಂಥ ಜಾತಿ ರಾಜಕಾರಣದ ಭೂತವನ್ನು ತೆಗೆದುಹಾಕಲು ನನ್ನ ಕೈಯ್ಯಲ್ಲಿ ಸಾಧ್ಯವಿಲ್ಲ. ನಿಮ್ಮ ಪಕ್ಷದ ಶಾಸಕರುಗಳಲ್ಲಿ, ಮಂತ್ರಿಗಳಲ್ಲಿ ಹೊಕ್ಕಿರುವಂಥ ಭೂತವನ್ನು ಹೋಗಲಾಡಿಸಲು ನನ್ನಿಂದ ಸಾಧ್ಯವಿಲ್ಲ.

ಶ್ರೀ ಕೆ.ಎನ್. ನಾಗೇಗೌಡ :— ಅದನ್ನು ನಿಮ್ಮ ಪಕ್ಷದಲ್ಲಿ ತೋರಿಸಲೇ? ಜಾತಿ ರಾಜಕಾರಣ ಬಿ.ಜೆ.ಪಿ.ಯಲ್ಲಿ ಇಲ್ಲವೇ? ಕಾಂಗ್ರೆಸ್‌ನಲ್ಲಿ ಇಲ್ಲವೇ?

ಶ್ರೀ ಕೆ.ಎಸ್. ಈಶ್ವರಪ್ಪ :— ತಾವು ಮುಂದುವರೆಸಿ, ನಾನು ಏನೂ ಹೇಳುವುದಕ್ಕೆ ಇಷ್ಟಪಡುವುದಿಲ್ಲ.

ಶ್ರೀ ಆರಗ ಜ್ಞಾನೇಂದ್ರ :— ಯಾವಾಗ ನಮಗೆ ಸಿದ್ಧಾಂತವಿರುವುದಿಲ್ಲ, ಆಗ ನಾವು ಜಾತಿಯ ಶೆಲ್ಟರನ್ನು ತೆಗೆದುಕೊಳ್ಳುತ್ತೇವೆ. ಸಿದ್ಧಾಂತವಿರುವಂಥ ರಾಜಕಾರಣಿ ಯಾವ ಜಾತಿಗೂ ಹೆದರುವುದಿಲ್ಲ. 200-300 ಜನ ಅವರ ವೋಟರ್ಸ್ ಇರಬಹುದು, ಆದರೂ ಅವರು ಗೆದ್ದು ಬರುತ್ತಿದ್ದಾರೆಂದು ಈಗತಾನೆ ತಮ್ಮ ಬಗ್ಗೆ ಹೇಳಿದರು. ಇಂಥ ರಾಜಕಾರಣವನ್ನೇ ನಾವು ಮಾಡಬೇಕೆಂದು ನಾನು ಹೇಳಿದ್ದುದು. ಮಾನ್ಯ ನಾಗೇಗೌಡರು ಹತಾಶರಾಗಿ- ಇಲ್ಲ, ನಾವು ವಾಪಸ್ಸು ಬಂದಕೂಡಲೇ ಮಾಡುತ್ತೇವೆಂದು ಹೇಳಿದರೆ, ಅದು ನೀರು ನಿಲ್ಲುವಂಥ ಒಂದು ಶಕ್ತಿ ನಮಗೆ ಬರಬೇಕಲ್ಲವೇ?

ಶ್ರೀ ಕೆ.ಎನ್. ನಾಗೇಗೌಡ :— ತೀರ್ಥಹಳ್ಳಿಯಲ್ಲಿ ನೀವು ಸೇರಿ ಬೇರೆ ಯಾರಿಗಾದರೂ ಸಣ್ಣ ಜನಾಂಗದವರಿಗೆ ಟಿಕೇಟ್ ಕೊಟ್ಟು ಜಾತಿ ರಾಜಕಾರಣ ಇಲ್ಲಿ ಇಲ್ಲ, ಮತದಲ್ಲಿ ಜಾತಿ ರಾಜಕಾರಣ ಇಲ್ಲ, ಎಂದು ತೋರಿಸಿಬಿಟ್ಟರೆ you can continue in the public life.

ಶ್ರೀ ಕೆ.ಎಸ್. ಈಶ್ವರಪ್ಪ :— ಮಾನ್ಯ ಅಧ್ಯಕ್ಷರೆ, ಅರಗ ಜ್ಞಾನೇಂದ್ರ ಚುನಾವಣೆಗೆ ನಿಲ್ಲುವಂಥ ಸಂದರ್ಭದಲ್ಲಿ ಆತ ಬಚ್ಚ, ಆ ಊರಿನ ಜನರಿಗೆ ಆತ ಯಾರು ಎಂದು ಗೊತ್ತಿರಲಿಲ್ಲ, ಅವರ ವಿರುದ್ಧ ನಿಂತವರು ಯಾರೆಂದರೆ, ಹಿಂದೆ ಜನತಾದಳದಲ್ಲಿದ್ದು ನಂತರ ಕಾಂಗ್ರೆಸ್ ಪಕ್ಷಕ್ಕೆ ಬಂದಂಥ ಶ್ರೀ ಚಂದ್ರೇಗೌಡರು. ಅವರ ಮುಂದೆ ಅರಗ ಜ್ಞಾನೇಂದ್ರರನ್ನು ಗುರುತಿಸುವವರು ಯಾರೂ ಇರಲಿಲ್ಲ. ಆದರೆ ನಮ್ಮ ಪಕ್ಷ, ಪಕ್ಷದ ವಿಚಾರವನ್ನು ಜನರು ಮೆಚ್ಚಿ ಮತ ಹಾಕಿದ್ದರಿಂದ ಗೆದ್ದುಬಂದರು... ನಮ್ಮ ಸುರೇಶ್ ಕುಮಾರ್‌ರವರನ್ನು ಸದನದಲ್ಲಿ ಬಿಜೆಪಿ ಪಕ್ಷದ ಉಪನಾಯಕರನ್ನಾಗಿ ಮಾಡಿದಾಗ-ಬ್ರಾಹ್ಮಣರನ್ನು ಏಕೆ ಉಪನಾಯಕರನ್ನಾಗಿ ಮಾಡಿದಿರಿ ಎಂದು ಇಲ್ಲಿ 100 ಜನ ಕೇಳಿರಬಹುದು. ಅವರನ್ನು ಏಕೆ ಉಪನಾಯಕರನ್ನಾಗಿ ಮಾಡಬಾರದು? ಅವರು ವಿದೇಶದವರೇ? ಈ ರೀತಿ ಕೇಳಿದವರ ಹೆಸರನ್ನು ಹೇಳಬೇಕೇ?

ಶ್ರೀ ಕೆ.ಎನ್. ನಾಗೇಗೌಡ :— ಮಾನ್ಯ ಈಶ್ವರಪ್ಪನವರೇ, ನಾವು ಪ್ರಾಮಾಣಿಕವಾಗಿ ಮುಂದಿನ ಚುನಾವಣೆಗೆ ಜಾತಿ ಆಧಾರವಾಗಿ ಟಿಕೇಟ್ ಕೊಡುವುದಿಲ್ಲ ಎಂದು ನಮ್ಮ ಆತ್ಮ ಮುಟ್ಟಿಕೊಂಡು ಹೇಳೋಣ. ಕಾಂಗ್ರೆಸ್ ಪಾರ್ಟಿ ಆಗಲಿ, ಜನತಾದಳ ಪಾರ್ಟಿಯಾಗಲಿ, ಅಥವಾ ಬೇರೆ ಯಾವುದೇ ಪಕ್ಷವಾಗಲಿ, ಪ್ರಾಮಾಣಿಕವಾಗಿ ನಾವು ಬೆಂಗಳೂರು ಸಿಟಿಯಲ್ಲೋ ನಮ್ಮ ಸ್ಪೀಕರ್ ಇರತಕ್ಕಂಥ ಕ್ಷೇತ್ರ, ಇದೆ,. ಅವರಂಥ ಪರ್ಸನಾಲಿಟಿಗಳೋ ಅಥವಾ ಅಪರೂಪದ ಕ್ಷೇತ್ರವಾದಂಥ ನಿಮ್ಮ ಶಿವಮೊಗ್ಗ ಕ್ಷೇತ್ರ ಟಿಕೇಟ್ ಹಂಚುವಾಗ ನಾವು ನೀವು ಅಭ್ಯರ್ಥಿಗಳ ಬಗ್ಗೆ ಏನೂ ನೋಡುವುದೇ ಇಲ್ಲವೇ? ಈ ಸದನದಲ್ಲಿ ನಿಂತು ಮಾತನಾಡುವಾಗ ನಾವು ಪ್ರಾಮಾಣಿಕವಾಗಿ ಮಾತನಾಡೋಣ.

ಶ್ರೀ ಕೆ.ಎಸ್. ಈಶ್ವರಪ್ಪ :— ಮಾನ್ಯ ಅಧ್ಯಕ್ಷರೆ, ಇವರ ಜಾತಿಯ ಕನ್ನಡಕವನ್ನು ತಿದ್ದುವುದಕ್ಕೆ ನನ್ನ ಕೈಯಲ್ಲಿ ಆಗುವುದಿಲ್ಲ. ಅವರು ಮುಂದುವರಿಯಲಿ. ಹತ್ತು ಹತ್ತು ಸಾರಿ ಜಾತಿ ಆಧಾರದ ಮೇಲೆ ಟಿಕೇಟ್ ಹಂಚುತ್ತಿದ್ದಾರೆಂದು ಹೇಳಿ ಹೇಳಿ ಅದು ಸತ್ಯ ಆಗಲಿಕ್ಕೆ ಸಾಧ್ಯವಿಲ್ಲ.

ಶ್ರೀ ವಾಟಾಳ್ ನಾಗರಾಜ್ :— ಶ್ರೀ ಕೆ.ಎಸ್. ಈಶ್ವರಪ್ಪನವರು ಕೆಲವೊಂದು ವಿಚಾರವನ್ನು ಮಾತನಾಡುತ್ತಿದ್ದಾರೆ. ಅದನ್ನು ನಾನು ಸ್ವಾಗತ ಮಾಡುತ್ತೇನೆ. ಆದರೆ ಟಿಕೇಟ್ ಹಂಚುವುದು ಮತ್ತು ಇನ್ನಿತರ ಕೆಲಸಗಳಲ್ಲಿ ಶೇಕಡ 100 ರಷ್ಟು ಜಾತೀಯ

ರಾಜಕೀಯ ಮಾಡುತ್ತಾರೆ. ಜಾತಿ ರಾಜಕೀಯ ಮಾಡಿ ನಮ್ಮ ಸಮಾಜ ಕುಲಗೆಟ್ಟು ಹೋಗಿದೆ. ಜಾತಿಬಿಟ್ಟು ಏನೂ ಮಾಡುವಹಾಗಿಲ್ಲ. ಈ ಸದನದಲ್ಲಿ ಜಾತಿ ವಿಶ್ಲೇಷಣೆ ಮಾಡುವುದಕ್ಕೆ ಹೋದರೆ ಇಲ್ಲಿ ದೊಡ್ಡ ಆಂಧೋಳನ ಆಗುತ್ತದೆ. ಅದೆಲ್ಲಾ ಇಲ್ಲಿ ಮಾತನಾಡುವುದು ಬೇಡ. ಅದನ್ನು ಬಿಟ್ಟುಬಿಡೋಣ.

ಶ್ರೀ ಕೆ.ಎಸ್. ಈಶ್ವರಪ್ಪ :— ಮಾನ್ಯ ಅಧ್ಯಕ್ಷರೆ, ಉದಾಹರಣೆಗೆ ಹೇಳುವುದಾದರೆ, ಡಾ: ತಂಗಾ ಇವರು ವಿಧಾನಪರಿಷತ್ತಿನಲ್ಲಿ ಬಿಜೆಪಿ ಪಕ್ಷದ ನಾಯಕರು, ಇವರು ಜೈನ ಸಮಾಜದವರು. ಹತ್ತು ಓಟು ಇಲ್ಲ. ಶ್ರೀ ಡಿ.ಹೆಚ್. ಶಂಕರಮೂರ್ತಿ ಇವರು ವಿಧಾನಪರಿಷತ್ತಿನಲ್ಲಿ ಬಿಜೆಪಿ ಪಕ್ಷದಿಂದ ಉಪನಾಯಕರು ವೈಶ್ಯರು. ಶ್ರೀ ಧನಂಜಯ ಕುಮಾರ್ ಇವರು ಮಂಗಳೂರು ಕ್ಷೇತ್ರದಿಂದ ಲೋಕಸಭೆ ಚುನಾವಣೆಯಲ್ಲಿ ಗೆದ್ದರು. ಜೈನ ಸಮಾಜದ್ದು 5 ಸಾವಿರ ಓಟುಗಳಿಲ್ಲ. ಕಾಂಗ್ರೆಸ್ ಮತ್ತು ಜನತಾದಳದವರ ಜಾತೀಯ ಕನ್ನಡಕವನ್ನು ತೆಗೆಯುವುದಕ್ಕೆ ನಮ್ಮ ಕೈಯಲ್ಲಿ ಆಗುವುದಿಲ್ಲ. ನಿಧಾನ ಆಗಬಹುದು. ಇದನ್ನು ನಾವು ಮಾಡುತ್ತೇವೆ. ಇವರ ಜಾತೀಯ ಕನ್ನಡಕವನ್ನು ತೆಗೆಯುತ್ತೇವೆ, ಅವರ ಜಾತಿ ರಾಜಕಾರಣದ ಕನ್ನಡಕವನ್ನು ತೆಗೆಯುತ್ತೇವೆ, ಎಲ್ಲಾ ಸಮಾಜವೂ ಒಂದೇ ಎಂದು ಖಂಡಿತಾ ನಾವು ಮಾಡುವುದೇ ಬಿಡುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್:— ಶ್ರೀ ಈಶ್ವರಪ್ಪನವರು ಸದನದ ನಾಯಕರು. ಇವರು ಬಹಳ ಉನ್ನತ ಮಟ್ಟಕ್ಕೆ ಹೋಗುತ್ತಾರೆಂದು ನಾನು ಆಸೆ ಇಟ್ಟುಕೊಂಡಿದ್ದೇನೆ. ನಿಮ್ಮ ಮಾತಿನ ಬಗ್ಗೆ ನನಗೆ ಬಹಳ ಸಂತೋಷವಿದೆ. ಆದರೆ ಪ್ರಾಮಾಣಿಕತನದಿಂದ ನೀವು ಇಲ್ಲಿ ಸ್ವಲ್ಪ ಬಿಚ್ಚುಮನಸ್ಸಿನಿಂದ ಮಾತನಾಡಬೇಕು. ಎಲ್ಲಾ ಕಡೆ ಹೆಚ್ಚೆ ಹೆಚ್ಚೆಗೂ ಜಾತಿ ರಾಜಕೀಯ ನಡೆಯುತ್ತಿದೆ. ಇಡೀ ಸದನವನ್ನೇ ತೆಗೆದುಕೊಂಡರೆ ಜಾತಿಯ ಆಧಾರದ ಮೇಲೆ ನಡೆಯುತ್ತಿದೆ. ನಿಮ್ಮ ತತ್ವ, ನೀತಿಯನ್ನು ನಾನು ಒಪ್ಪುತ್ತೇನೆ. ಅದು ಆಗಬೇಕು. ನಿಮ್ಮ ತತ್ವ, ನೀತಿಯ ಬಗ್ಗೆ ಪ್ರಾಮಾಣಿಕ ಚಿಂತನೆ ಆಗಬೇಕು. ಅದರ ಬಗ್ಗೆ ನನ್ನದೇನೂ ಎರಡನೇ ಅಭಿಪ್ರಾಯ ಇಲ್ಲ. ಆದರೆ...

ಶ್ರೀ ಮಲ್ಲಿಕಾರ್ಜುನ ಖರ್ಗೆ :— ವರ್ಣಾಶ್ರಮ ಧರ್ಮದ ಮೇಲೆ ನಂಬಿಕೆ ಇಟ್ಟುಕೊಂಡಂಥ ಜನ, ಈ ದೇಶದ ಕ್ರಿಶ್ಚಿಯನ್ನರು ಇರಬಾರದು, ಮುಸಲ್ಮಾನರು ಇರಬಾರದು ಎಂದು ಹೇಳಿ ಪ್ರತಿಪಾದನೆ ಮಾಡತಕ್ಕಂಥವರು.

(ಗೊಂದಲ)

ಶ್ರೀ ಎಸ್. ಸುರೇಶ್ ಕುಮಾರ್:— ಮಾನ್ಯ ಅಧ್ಯಕ್ಷರೆ, ಮತ್ತೊಂದು ಸಲ ಈ ಬೋಗಸ್ ಥಿಯರಿ ಇಲ್ಲಿ ಬೇಡ. ಆಗಿಲ್ಲದೇ ಇರುವುದನ್ನು 100 ಸಲ ಹೇಳಿ

ಹೇಳಿ ಆಗಿದೆ ಎನ್ನುವಂಥ ಪ್ರಯತ್ನ ಬೇಡ. ಹೊಸ ಪದ್ಧತಿಯನ್ನು ಮಾಡೋಣ, ಸಮಾಜದ, ನಾಡಿನ ಒಳಿತಿಗೋಸ್ಕರ ಈಗ ಏನು ಅನಿಷ್ಟ ವಿಚಾರತೆ ಇದೆ ಅದನ್ನು ಬಿಟ್ಟು ಒಳ್ಳೆಯ ವಿಚಾರವನ್ನು ಮಾನ್ಯ ಈಶ್ವರಪ್ಪನವರು ಈಗ ಹೇಳಿದ್ದಾರೆ. ಆ ವಿಚಾರ ಇಟ್ಟುಕೊಂಡು ಮುಂದೆ ಹೋಗುವುದಕ್ಕೆ ಆಗುವುದಿಲ್ಲವೇ? should we hang ourselves? ನಾವು ಯಾವುದೋ ಒಂದು ಹಗ್ಗ ಜೊತೆ ನೇಣು ಹಾಕಿಕೊಳ್ಳಬೇಕೇ? should we not tread in a new path? Why postmorterm?

ಶ್ರೀ ಎಂ.ಸಿ. ನಾಣಯ್ಯ :— ಮಾನ್ಯ ಅಧ್ಯಕ್ಷರೆ, ಶ್ರೀ ಸುರೇಶ್ ಕುಮಾರ್ ಅವರ ಚಿಂತನೆ, ಶ್ರೀ ಈಶ್ವರಪ್ಪನವರ ಚಿಂತನೆ, ಇದೆಲ್ಲಾ ವೈಯಕ್ತಿಕವಾಗಿರತಕ್ಕಂಥ ಚಿಂತನೆಗಳು, ಆದರೆ ವೈಯಕ್ತಿಕವಾಗಿರತಕ್ಕಂಥ ಚಿಂತನೆಗಳು ಅದು ಎಲ್ಲಾದರೂ ಪ್ರತಿಬಿಂಬವಾಗಬೇಕಾದರೆ, ಈ ರಾಷ್ಟ್ರದಲ್ಲಿ ಅದು ರಾಜಕೀಯ ವ್ಯವಸ್ಥೆಯ ಮುಖಾಂತರ ಆಗಬೇಕು. ನಮ್ಮ ನಿಮ್ಮ ವೈಯಕ್ತಿಕ ಚಿಂತನೆಗಳು ಎಲ್ಲಾದರೂ ಪ್ರತಿಬಿಂಬವಾಗಿ ಈ ರಾಷ್ಟ್ರದಲ್ಲಿ ಅದಕ್ಕೆ ಏನಾದರೂ ಒಂದು ಮಾನ್ಯತೆ ಮಾಡಬೇಕಾದರೆ ಇದನ್ನು ಯಾರ ಮುಖಾಂತರ ಮಾಡಬೇಕು? ನಮ್ಮ ಸಮಾಜದ ವ್ಯವಸ್ಥೆ ಹೇಗಿದೆಯೆಂದರೆ, ರಾಜಕೀಯ ವ್ಯವಸ್ಥೆಯ ಮುಖಾಂತರ ಸಮಾಜದಲ್ಲಿಯ ಜನ ಹೋಗುತ್ತಿರತಕ್ಕಂಥ ಪರಿಸ್ಥಿತಿ ಇದ್ದಂಥ ಸಂದರ್ಭದಲ್ಲಿ ನಿಮ್ಮ ವೈಯಕ್ತಿಕವಾಗಿರತಕ್ಕಂಥ ಚಿಂತನೆ, ನಿಮ್ಮ ರಾಜಕೀಯ ಚಿಂತನೆಯಲ್ಲಿ, ನಿಮ್ಮ ರಾಜಕೀಯ ಪಕ್ಷದ ಚಿಂತನೆಯಲ್ಲಿ ಪ್ರತಿಬಿಂಬ ಆಗದೇ ಹೋದರೆ ನೀವು ಅದನ್ನು ಸಮಾಜದಲ್ಲಿ ತರುವುದು ಹೇಗೆ? ಮೂಲಭೂತವಾಗಿರತಕ್ಕಂಥ ಚಿಂತನೆ ಮಾಡೋಣ. ಆದರೆ ಇವತ್ತು ನಿಮ್ಮ ರಾಜಕೀಯ ಪಕ್ಷದ ಚಿಂತನೆ ಏನಾಗಿದೆ ಎಂದರೆ, ನಮ್ಮ ಬಹು ಸಂಸ್ಕೃತಿಯ ವಿರುದ್ಧ ಇರತಕ್ಕಂಥ ಚಿಂತನೆ ಎಂದು ಪ್ರತಿಯೊಬ್ಬರೂ ಒಪ್ಪಿಕೊಳ್ಳಬೇಕು ಎನ್ನತಕ್ಕಂಥ ಪರಿಸ್ಥಿತಿಯನ್ನು ತಾವು ನಿರ್ಮಾಣ ಮಾಡಿದ್ದೀರಿ. ನಿಮ್ಮ ಪಕ್ಷದ ಚಿಂತನೆ ಬೇರೆ ಇದ್ದರೂ ಕೂಡ ನಿಮ್ಮ ನ್ಯಾಷನಲ್ ಅಜೆಂಡಾ ಎಂದು ಹೇಳತಕ್ಕಂಥದ್ದು ಬೇರೆ ಇದೆ. ನ್ಯಾಷನಲ್ ಅಜೆಂಡಾವನ್ನು ಏಕೆ ಇಟ್ಟುಕೊಂಡಿದ್ದೀರಿ ಎಂದರೆ ಬೇರೆ ಅಂಗಪಕ್ಷಗಳಲ್ಲಿ ಆಡಳಿತದಲ್ಲಿ ಇದ್ದು, ಅವು ನಿಮ್ಮ ಚಿಂತನೆಯನ್ನು ಒಪ್ಪದಿರುವುದರಿಂದ, ಅದನ್ನು ತಾವು ರಾಷ್ಟ್ರೀಯವಾಗಿರತಕ್ಕಂಥ ಕಾರ್ಯಕ್ರಮವೆಂದು ಹೇಳುತ್ತೀರಿ. ಆದರೆ ನಿಮ್ಮ ಮೂಲಭೂತವಾಗಿರತಕ್ಕಂಥ ಕಾರ್ಯಕ್ರಮ ಯಾವುದು ಇದೆ, ಆ ಮೂಲಭೂತ ಕಾರ್ಯಕ್ರಮ ಅದು ಶ್ರೀಮಾನ್ ಈಶ್ವರಪ್ಪನವರ ಚಿಂತನೆಗೆ ವಿರುದ್ಧವಾಗಿದೆ. ನಿಮ್ಮ ಹಿಂದೂತ್ವ ಕಾರ್ಯಕ್ರಮವಿದೆಯಲ್ಲಾ, ಅದು ಈ ರಾಷ್ಟ್ರದ ಬಹು ಸಂಸ್ಕೃತಿಯನ್ನು ನಾಶ ಮಾಡಲಿಕ್ಕೆ ಹೊರಟಂಥ ಚಿಂತನೆಯೇ ಹೊರತು ಇನ್ನು ಯಾವುದಕ್ಕೂ ಅಲ್ಲ. ಶ್ರೀಮಾನ್ ಖರ್ಗೆಯವರು ವರ್ಣಾಶ್ರಮ ಎಂದು ಹೇಳಿದರು. ವರ್ಣಾಶ್ರಮದಲ್ಲಿ ಇರತಕ್ಕಂಥ ಚಿಂತನೆ ಏನೆಂದರೆ, ಹಿಂದುಗಳನ್ನು ಭಾಗ ಮಾಡುವುದು. ಆದರೆ ಬಿ.ಜೆ.ಪಿ. ಪಕ್ಷದ ಚಿಂತನೆ ಯಾವುದು ಎಂದರೆ

-ಹಿಂದುಗಳನ್ನೆಲ್ಲಾ ಒಂದು ಮಾಡಿ ಬಾಕಿ ಬೇರೆ ಮತದವರನ್ನು ದೂರ ಮಾಡಲಿಕ್ಕೆ ಇರತಕ್ಕಂಥ ವ್ಯವಸ್ಥೆ ಮಾಡಿ ಬಹು ಸಂಸ್ಕೃತಿಯನ್ನು ಕಿತ್ತುಹಾಕಲಿಕ್ಕೆ ಚಿಂತನೆ ನಡೆದಿದೆ. ಇನ್ನು ಒಂದು ಹೊಸ ವ್ಯವಸ್ಥೆ ಬಗ್ಗೆ ಚಿಂತನೆ ಮಾಡೋಣವೆಂದು ಮಾನ್ಯ ಸುರೇಶ್ ಕುಮಾರ್ ಅವರು ಹೇಳಿದರು. ಬಹುಶಃ ವೈಯಕ್ತಿಕವಾಗಿ ಚಿಂತನೆಯನ್ನು ನಿಮ್ಮ ರಾಜಕೀಯ ಪಕ್ಷದ ಚಿಂತನೆಯ ಒಳಗಡೆ ಅಳವಡಿಸಿ.

ಶ್ರೀ ಎಸ್. ಸುರೇಶ್‌ಕುಮಾರ್ :— ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಒಂದು ಡಿಬೇಟ್ ನಡೆಯಬೇಕೆಂದು ಮಾನ್ಯ ಮುಖ್ಯಮಂತ್ರಿಗಳು ಪ್ರಧಾನಮಂತ್ರಿಯವರಿಗೆ ಒಂದು ಆಹ್ವಾನವನ್ನು ಕೊಟ್ಟಿದ್ದಾರೆ. ಹಾಗೆಯೇ 'ಇದರ ಬಗ್ಗೆ ಪದೇ ಪದೇ ಒಂದು ವಿಚಾರ ಆಗುತ್ತಿದೆಯಲ್ಲಾ, ಇದಕ್ಕೋಸ್ಕರ ಒಂದು ಸದನದ ಸಮಾವೇಶವನ್ನು ಕರೆಯಲಿ' ಎಂದು ನಾನು ಇವತ್ತು ಒಂದು ಆಹ್ವಾನವನ್ನು ಕೊಡುತ್ತಿದ್ದೇನೆ. Let there be a debate. ಈ ರೀತಿ ಪದೇ ಪದೇ ಆಗಿಲ್ಲದೆ ಇರುವಂಥ ಸಂಗತಿಯನ್ನು you are searching for a black cat in the dark room which is not there. That has been your practice. Let there be a debate. ಇನ್ನು ಮುಂದಕ್ಕಾದರೂ ಅದಕ್ಕೋಸ್ಕರ ಇತಿಶ್ರೀ ಹಾಡಿ. ಇದರ ಬಗ್ಗೆ ಸಮಾವೇಶ ಕರೆಯಿರಿ, ಚರ್ಚೆ ಮಾಡೋಣ.

ಅಧ್ಯಕ್ಷರು :— ಗಾಂಧೀಜಿಯವರಿಗೆ ನಮಗೆ ಸ್ವಾತಂತ್ರ್ಯಕೊಡುವ ಪೂರ್ವದಲ್ಲಿ 'ನಿಮ್ಮ ದೇಶದವರಿಗೆ ಅಕ್ಷರ ಜ್ಞಾನ ಇಲ್ಲ, ಪ್ರಜಾಪ್ರಭುತ್ವ ಹೇಗೆ ಸಕ್ಸಸ್ ಆಗುತ್ತದೆ?' ಎಂದು ಒಬ್ಬ ಇಂಗ್ಲೀಷ್ ಜರ್ನಲಿಸ್ಟ್ ನಮ್ಮ ಮಹಾತ್ಮಗಾಂಧೀಜಿಯವರಿಗೆ ಕೇಳುತ್ತಾನೆ. ಅದಕ್ಕೆ 'ಸಣ್ಣ ಮಗುವಿಗೆ ಚಾಕಲೇಟ್ ಕೊಟ್ಟರೆ ಸಿಹಿ ಎಂದು ಗೊತ್ತಾಗುತ್ತದೆ, ಒಂದು ವೇಳೆ ಕಹಿ ಚಾಕಲೇಟ್‌ಗೆ ಸ್ವೀಟ್ ಕೋಟ್ ಮಾಡಿ ಕೊಟ್ಟರೆ ಒಂದು ಸಲ ಮಾತ್ರ ಅದು ಮೋಸಹೋಗುತ್ತದೆ, 2ನೇ ಸಲ ಅದಕ್ಕೆ ಗೊತ್ತಾಗಿಬಿಡುತ್ತದೆ, ಇದು ಕಹಿ ಚಾಕಲೇಟ್ ಸಿಹಿಯದು ಅಲ್ಲವೆಂದು' ಎಂದು ಗಾಂಧೀಜಿಯವರು ರಿಪ್ಲೆಮಾಡುತ್ತಾರೆ. ಹೇಗೆ ಸಿಹಿ ಕಹಿಯನ್ನು ವ್ಯತ್ಯಾಸ ಮಾಡಿ ತಿಳಿದುಕೊಳ್ಳುವುದಕ್ಕೆ ಸಣ್ಣ ಮಗುವಿಗೂ ಗೊತ್ತಿರುತ್ತದೋ ಹಾಗೇ ಆಯ್ಕೆ ಮಾಡಿಕೊಳ್ಳುವಾಗ ಒಳ್ಳೆಯದನ್ನು ಕೆಟ್ಟದನ್ನು ಇತ್ಯರ್ಥ ಮಾಡಿ ಮಾಡಿಕೊಳ್ಳತಕ್ಕಂಥ ಚೈತನ್ಯ ನಮ್ಮ ಜನರಿಗೆ ಇದೆ. ಅದನ್ನು ಬೇಸಿಸ್‌ಆಗಿ ಇಟ್ಟುಕೊಳ್ಳೋಣ. ಉಳಿದುದ್ದೆಲ್ಲಾ ಸೆಕೆಂಡರಿ, ಅದಕ್ಕೆ ತಲೆ ಕೆಡಿಸಿಕೊಳ್ಳುವುದು ಬೇಡ.

ಶ್ರೀ ಕೆ.ಎಸ್. ಈಶ್ವರಪ್ಪ :— ನೀವು ಹೇಳಿದ್ದು ಸತ್ಯ.

ಅಧ್ಯಕ್ಷರು :— ನಾನು ಯಾವಾಗಲೂ ಸತ್ಯವನ್ನೇ ಹೇಳುವುದು.

ಶ್ರೀ ಕೆ.ಎಸ್. ಈಶ್ವರಪ್ಪ :— ನಾನು ಅನೇಕ ಸಾರ್ತಿ ನಿಮ್ಮ ಹತ್ತಿರ ಜಗಳ ಆಡಿದ್ದೇನೆ. ಈ ಪೀಠಕ್ಕೆ ಅಗೌರವ ತೋರುವುದಿಲ್ಲ ನಾನು. ನನ್ನ ವಿಚಾರದಲ್ಲಿ, ನಿಮ್ಮ

ವಿಚಾರದಲ್ಲಿ, ಕೆಲವು ವಿಚಾರಗಳಲ್ಲಿ ಈ ರೀತಿ ಚರ್ಚೆ ಮಾಡಿದ್ದೇವೆ. ತಪ್ಪಲ್ಲ. ಇವತ್ತು ಈ ದೇಶದಲ್ಲಿ ಈ ವಿಚಾರವನ್ನು ಬಹಳ ಜನರು ಮೊದಲನೇ ಸ್ಥಾನದಲ್ಲಿ ಒಪ್ಪಿದ್ದಾರೆ. ಇದು ಇವತ್ತು, ನಿನ್ನೆಯ ಪ್ರಯತ್ನವಲ್ಲ. 1925ನೇ ಇಸವಿಯಿಂದ ಪ್ರಾರಂಭವಾಗಿದೆ. ಇದಕ್ಕಾಗಿ ಒಬ್ಬಿಬ್ಬರಲ್ಲತಪಸ್ಸು ಮಾಡಿರುವುದು. ಅವರಾರೂ ಕೂಡ ಎಂಎಲ್ಎ, ಮುನಿಸಿಪಲ್ ಕೌನ್ಸಿಲರ್ ಆಗುತ್ತೇವೆಂಬ ಅಪೇಕ್ಷೆ ಪಟ್ಟವರಲ್ಲ. ಅವರ ತಪಸ್ಸಿನಿಂದ, ವೈಚಾರಿಕತೆಯ ಚಿಂತನೆಯಿಂದ ನಾವಿಲ್ಲಿ ಕುಳಿತಿದ್ದೇವೆ. ನಾವು ಇದನ್ನೇ ಹೇಳುವುದು.

ಅಧ್ಯಕ್ಷರು :— ಆಂಧ್ರಪ್ರದೇಶದಲ್ಲಿ ಪಿ. ಸುಂದರಯ್ಯನವರು, ಕಮ್ಯುನಿಸ್ಟ್ ಪಾರ್ಟಿ ಲೀಡರ್ ಆಗಿದ್ದರು. ಅವರ ಮೂಲ ಹೆಸರು ಸುಂದರರಾಮರೆಡ್ಡಿ. ರೆಡ್ಡಿ ಜನಾಂಗದವರು ದೊಡ್ಡ ಭೂ ಮಾಲೀಕರು, ಸಣ್ಣ ಪುಟ್ಟ ಜನರ ಮೇಲೆ ದೌರ್ಜನ್ಯ ಮಾಡುತ್ತಿದ್ದರು. ಆ ರೆಡ್ಡಿ ಎನ್ನುವ ಸೂಚ್ಯಂಕ ನನ್ನ ಹೆಸರಿನ ಜೊತೆಗಿದ್ದರೂ ಕೂಡ ಸಾಮಾನ್ಯ ಜನರ ಪ್ರೀತಿ, ವಿಶ್ವಾಸ ಗಳಿಸುವುದಕ್ಕಾಗುವುದಿಲ್ಲವೆಂದು, ರೆಡ್ಡಿ ಎನ್ನುವುದನ್ನು ತೆಗೆದು ಸುಂದರಯ್ಯ ಎಂದು ಇಟ್ಟುಕೊಂಡರು. ದೊಡ್ಡ ಜಮೀನ್ದಾರರ ಕುಟುಂಬದಲ್ಲಿ ಹುಟ್ಟಿ ಬಂದವರು, ಕೊನೆಗೆ ತಮ್ಮ ಜೀವನದುದ್ದಕ್ಕೂ ಒಂದು ಚಾಪೆ ಬಿಟ್ಟು ಬೇರೆ ಆಶ್ರಯ ಇಟ್ಟುಕೊಂಡಿರಲಿಲ್ಲ. ಚಾಪೆ ಮೇಲೆಯೇ ಸತ್ತರು. ಅಲ್ಲವೇ ರೆಡ್ಡಿಯವರೇ Am I right?

ಶ್ರೀಮತಿ ಪ್ರಮೀಳಾ ನೇಸರ್ಗಿ :— ಅಂದರೆ ಅವರು ಶ್ರೀ ರಾಮಯ್ಯನವರು ಆಗಬೇಕೇ?

ಅಧ್ಯಕ್ಷರು :— ಅವರು ಶ್ರೀರಾಮಯ್ಯನವರೂ ಆಗುವುದು ಬೇಡ, ನೀವು ಪ್ರಮೀಳಾಬಾಯಿ ಆಗುವುದೂ ಬೇಡ.

ಶ್ರೀ ಕೆ.ಎಸ್. ಈಶ್ವರಪ್ಪ :— ನಾನು ಕೊನೆಗೆ ಒಂದು ಮಾತನ್ನು ಹೇಳಬಯಸುತ್ತೇನೆ, ಇನ್ನು ಮುಂದೆ ರಾಜ್ಯದಲ್ಲಿ ಸುರತ್ಕಲ್ ಘಟನೆಗಳಂಥವು ನಡೆಯಬಾರದು. ಏಕೆಂದರೆ, ಭಟ್ಕಳದ ಬಗ್ಗೆ ಕಳೆದ ಬಾರಿ ಪ್ರಸ್ತಾನ ಮಾಡಿದ್ದೇನೆ. ನಿರಪರಾಧಿ ಸಂಘ-ಸಂಸ್ಥೆಗಳ ಮೇಲೆ ಆರೋಪ ಹೊರಿಸುವಂಥ ಚಟ, ರಾಜಕಾರಣ ಮಾಡಿಕೊಂಡು ಬಂದಿರುವುದರಿಂದಲೇ ಸಮಸ್ಯೆ ಉದ್ಭವವಾಗುತ್ತದೆ. ಇದರ ಬಗ್ಗೆ ನ್ಯಾಯಾಂಗ ತನಿಖೆ ನಡೆಯುತ್ತಿದೆ. ದೇಶದಲ್ಲಿ ಮಹಾತ್ಮಗಾಂಧಿಯ ಕೊಲೆಯಿಂದ ಹಿಡಿದು ಇವತ್ತಿನವರೆಗೆ ಸಂಘಕ್ಕಾಗಲಿ, ಯಾವುದೇ ನಮ್ಮ ಸಂಘ ಪರಿವಾರಕ್ಕಾಗಲೀ ಒಂದು ಅಪಾದನೆಯೂ ಬಂದಿಲ್ಲ, ಬರುವುದೂ ಇಲ್ಲವೆಂಬ ವಿಶ್ವಾಸ ನನಗಿದೆ. ಇದರ ಬಗ್ಗೆ ಚಿಂತನೆಯಾಗಬೇಕಾದರೆ, ಸುರತ್ಕಲ್ ಘಟನೆ ಇರಬಹುದು, ಬೇರೆ ಘಟನೆ ಇರಬಹುದು, ಚರ್ಚೆಯಾಗುವ ಸಂದರ್ಭದಲ್ಲಿ ಪ್ರಾಮಾಣಿಕವಾಗಿ ನಾವು ಚರ್ಚೆ ಮಾಡೋಣ. ಒರಿಸ್ಸಾದಲ್ಲಿ ನಡೆದ ಘಟನೆ ನಮಗೆ ಗೊತ್ತಿದೆ.

ಯಾವುದೋ ನನ್ ಅನ್ನು ಅತ್ಯಾಚಾರ ಮಾಡಿದರೆಂದು ಹೇಳಿದ್ದರಿಂದ ದೇಶದಲ್ಲಿ ಸುದ್ದಿ ಹಬ್ಬಿತು ನಂತರ ಹುಡುಕಿದರೆ ಅವರು ಕಂಪ್ಲೇಂಟ್ ಕೊಡುವುದಕ್ಕೆ ತಯಾರಿರಲಿಲ್ಲ, ಅತ್ಯಾಚಾರವಾದಾಗ ಧರಿಸಿದ್ದ ಬಟ್ಟೆ ಎಲ್ಲಿ ಎಂದರೆ, ಸುಟ್ಟು ಹಾಕಿದೆ ಎಂದು ಹೇಳುತ್ತಾರೆ. ಆದರೆ, ಆರೋಪ ಬಂದಿದ್ದು ಮಾತ್ರ ಪ್ರಾಮಾಣಿಕವಾದ ವ್ಯಕ್ತಿಯ ಮೇಲೆ, ಸಂಘ-ಸಂಸ್ಥೆಗಳ ಮೇಲೆ. ಕೇವಲ ಆಪಾದನೆಗಳನ್ನು ಮಾಡುವುದನ್ನು ಬಿಟ್ಟು, ಇಡೀ ಸಮಾಜವನ್ನು ಒಂದು ಮಾಡುವ ದೃಷ್ಟಿಯಿಂದ ಚಿಂತನೆಗಳಾಗಬೇಕು. ಇತ್ತೀಚೆಗೆ ಇಂಜಿನಿಯರುಗಳ ಸ್ಟ್ರೈಕ್ ಆಯಿತು. ಆ ಸಂದರ್ಭದಲ್ಲಿ ಇಲ್ಲಿಯೂ ಸಾಕಷ್ಟು ರಾಜಕಾರಣ ನಡೆಯಿತು. ಜಾತಿ ಪ್ರಶ್ನೆ ಬಂತು. ಇದರಲ್ಲಿ 2 ಸಂಸ್ಥೆಗಳು. ಒಂದು ಅಹಿಂಸ ಮತ್ತೊಂದು ಅಹಿಂಸಾ. ಅಲ್ಪಸಂಖ್ಯಾತರು, ಹಿಂದುಳಿದವರು, ದಲಿತರದ್ದು ಒಂದು ಗುಂಪಾದರೆ, ಅಲ್ಪಸಂಖ್ಯಾತರು, ಹಿಂದುಳಿದವರು ಮತ್ತು ಸಾಮಾನ್ಯ ವರ್ಗದವರು ಅಹಿಂಸಾ ಗುಂಪು. ಇಲ್ಲಿ ನಡೆಯುತ್ತಿರುವುದು ಯಾವ ಚರ್ಚೆ? ರಾಜ್ಯದಲ್ಲಿ ನಿಜವಾಗಿಯೂ ಯಾರಿಗಾದರೂ ಮೀಸಲಾತಿಯ ಅಪೇಕ್ಷೆ, ಅವಶ್ಯಕತೆ ಇದ್ದರೆ, ಅವರಿಗೆ ಕೊಡಬೇಕಾದುದ್ದನ್ನು ಈ ದೇಶದಲ್ಲಿ ಯಾರೇ ಬಂದರೂ ತಪ್ಪಿಸುವುದಕ್ಕಾಗುವುದಿಲ್ಲ. ಆದರೆ, ಚರ್ಚೆಯಾಗುತ್ತಿರುವ ಸಂದರ್ಭದಲ್ಲಿ ಚರ್ಚೆ ದಿಕ್ಕು ಬಹಳ ವಿಚಿತ್ರವಾಗಿ ಹೋಗುತ್ತಿದೆ. ಕೊನೆಗೆ, ನಾನು ಹೇಳುವುದಿಷ್ಟೆ, ಕನಿಷ್ಠ ಈ ಸದನದಲ್ಲಿ ರಾಜಕಾರಣಕ್ಕೋಸ್ಕರ ಕೋಮು ವಿಚಾರವನ್ನು ಬಳಸಿಕೊಂಡು ರಾಜ್ಯಕ್ಕೆ ಬೆಂಕಿ ಇಡುವುದು ಬೇಡ. ಕೋಮು ರಾಜಕಾರಣ ಮಾಡಿಕೊಂಡು ಬಂದ ವ್ಯಕ್ತಿಗಳು ಅಥವಾ ಪಕ್ಷಗಳಿರಬಹುದು. ಅವು ಯಶಸ್ವಿಯಾಗಿಲ್ಲ. ಯಶಸ್ವಿಯಾಗಿದ್ದರೂ, ಅವರಿಗೆ ತಾತ್ಕಾಲಿಕ ಯಶಸ್ಸು ಸಿಕ್ಕಿರಬಹುದು. ಶಾಶ್ವತ ಯಶಸ್ಸು ಸಿಕ್ಕಬೇಕಾದರೆ, ವೈಚಾರಿಕ ಚಿಂತನೆ, ವೈಚಾರಿಕ ಪರಿವರ್ತನೆ ಆಗಬೇಕಾಗಿದೆ. ಅದಕ್ಕೋಸ್ಕರ, ಈ ಸಂದರ್ಭದಲ್ಲಿ ರಾಜ್ಯಪಾಲರ ಈ ಭಾಷಣವು ಮೇಲೆ ಮಾತನಾಡುತ್ತಾ ರಾಜ್ಯದ ಜನರ ಮನಸ್ಸಿನಲ್ಲಿದ್ದ ಭಾವನೆಗಳು, ನನ್ನ ಮನಸ್ಸಿನಲ್ಲಿದ್ದ ಭಾವನೆಗಳು, ನನ್ನ ಪಕ್ಷದ ಅಭಿಪ್ರಾಯವನ್ನು ಹೇಳುವುದಕ್ಕೆ ತಾವು ಇಷ್ಟು ಹೊತ್ತು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ವಂದನೆಗಳು. ಈ ಪಕ್ಷಕ್ಕೆ ಕೊನೆಯದಾಗಿ ಒಂದು ಮಾತನ್ನು ಹೇಳುವುದಕ್ಕಿಂತ ಮುಂಚೆ, ಇಡೀ ರಾಜ್ಯ ಗೊಂದಲದಲ್ಲಿದೆ, ಶ್ರೀಡಿ.ಟಿ. ಜಯಕುಮಾರ್‌ರವರು ರಾಜೀನಾಮೆ ಕೊಡುವ ಸಂದರ್ಭದಲ್ಲಿ, ಶ್ರೀ ಬಿ.ಎಸ್. ಪಾಟೀಲರು ಕೋಟ್ಯಾಂತರ ರೂಪಾಯಿಗಳ ಅವ್ಯವಹಾರದಲ್ಲಿ ಭಾಗಿಯಾಗಿದ್ದಾರೆಂದು ಎಂದು ಹೇಳಿದ್ದಾರೆ. ಅವರೂ ಸಹ ಇದೇ ಮಂತ್ರಿಮಂಡಲದಲ್ಲಿದ್ದವರು. ಶ್ರೀ ಬಿ.ಎಸ್. ಪಾಟೀಲರು ರಾಜ್ಯದ ಉನ್ನತ ಸ್ಥಾನದಲ್ಲಿರುವ ವ್ಯಕ್ತಿ. ಈ ರೀತಿ ಭ್ರಷ್ಟಾಚಾರ ನಡೆಯುವುದಕ್ಕೆ ಅತಿ ಉನ್ನತ ಸ್ಥಾನದಲ್ಲಿರುವ ವ್ಯಕ್ತಿಗಳೂ ಸಹ ಕಾರಣವೆನ್ನುವ ಭಾವನೆ ಜನರ ಮನಸ್ಸಿನಲ್ಲಿ ಉಳಿದರೆ ಸರಿಹೋಗುವುದಿಲ್ಲ. ಆದರ ಬಗ್ಗೆ ನ್ಯಾಯಾಂಗ ತನಿಖೆಯಾಗಬೇಕು.

ಅಧ್ಯಕ್ಷರು :— ಶ್ರೀ ಡಿ.ಟಿ. ಜಯಕುಮಾರ್‌ರವರು ಈ ಸದನದ ಗೌರವಾನ್ವಿತ ಸದಸ್ಯರು. ಸಭೆಯ ಗಮನಕ್ಕೆ ತರಬೇಕು, ಸರ್ಕಾರದ ಗಮನಕ್ಕೆ ತರಬೇಕೆನ್ನುವುದಾದರೆ ಅವರಿಗೆ ಈ ವೇದಿಕೆ ಲಭ್ಯವಿತ್ತು. ಇಲ್ಲ, ಇಲ್ಲಿ ಹೇಳುವುದರ ಅಗತ್ಯವಿಲ್ಲ, ಹಾಗೇ ಇದನ್ನು ಮುಂದುವರಿಸಬೇಕು ಅವರು ಮಾಡುವ ಅಪಾದನೆಗಳು ಅವರದ್ದೇ ಆಗಿದ್ದು ಇದ್ದಿದ್ದರೆ ಲೋಕಾಯುಕ್ತಕ್ಕೆ ಕಂಪ್ಲೇಂಟ್ ಕೊಡಬಹುದಾಗಿತ್ತು. ಇಂಥವೆಲ್ಲಾ ಅದರ ವ್ಯಾಪ್ತಿಗೆ ಬರುತ್ತವೆ. ಪೇಪರ್‌ನಲ್ಲಿ ನೋಡಿದ್ದೇವೆಯೇ ಹೊರತು, ಅವರು ಹೇಳಿದ್ದಾರೋ, ಇಲ್ಲವೋ, ಅವರೂ ಇಲ್ಲಿಲ್ಲ. ನಾವು ಆ ಹೇಳಿಕೆಯನ್ನಾಧರಿಸಿಕೊಂಡು, ಸದನದಲ್ಲಿಲ್ಲದೇ ಇರುವವರ ಮೇಲೆ ಹೇಳಿದರೆ ಅವರು ಡಿಫೆಂಡ್ ಮಾಡಿಕೊಳ್ಳುವ ಸ್ಥಿತಿಯಲ್ಲಿರುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ :— ಆ ರೀತಿಯ ಅನೇಕ ಹೇಳಿಕೆಗಳನ್ನು ರಾಜೀನಾಮೆ ಕೊಟ್ಟಿರುವ ಶ್ರೀ ಜಯಕುಮಾರ್‌ರವರು ಕೊಟ್ಟಿದ್ದಾರೆ. ನಾಲ್ಕೂವರೆ ವರ್ಷಗಳು ಈ ಸರ್ಕಾರದಲ್ಲಿ ಇದ್ದು, ಮಂತ್ರಿಗಳ ಜೊತೆಯಲ್ಲಿ ಹೊಂದಾಣಿಕೆ ಮಾಡಿಕೊಂಡು, ಈಗ ಇದ್ದಕ್ಕಿದ್ದ ಹಾಗೆ ಕೊನೆ ದಿವಸ ಇದು ಸರಿಯಲ್ಲ, ಅದು ಸರಿಯಲ್ಲವೆಂದು ಹೇಳಬೇಕಾದರೆ ಇದು ಎಷ್ಟರಮಟ್ಟಿಗೆ ಅವರ ಹೊಣೆಗೇಡಿತನ, ನೀತಿಗೇಡಿತನವೆಂಬುದು ಅರ್ಥವಾಗುತ್ತದೆ. ಯಾರ ಮೇಲೆ ಆರೋಪ ಮಾಡಬೇಕಾದರೂ ಈ ಸದನದಲ್ಲಿ ಅವರು ಆರೋಪ ಮಾಡಬೇಕು.

ಅಧ್ಯಕ್ಷರು :— ಸೋಮವಾರ ಅವರು ಬಂದ ಮೇಲೆ ಕೇಳೋಣ.

ಶ್ರೀ ವಾಟಾಳ್ ನಾಗರಾಜ್ :— ಈ ಸದನದಲ್ಲಿ ಅಧಿಕಾರಿಗಳಿಲ್ಲ, ಉತ್ತರ ಕೊಡುವ ಮಂತ್ರಿಗಳೂ ಇಲ್ಲ.

ಅಧ್ಯಕ್ಷರು :— ನಾನು ಅದನ್ನು ಒಪ್ಪುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ :— ಇಷ್ಟು ಮಾತನಾಡುವುದಕ್ಕೆ ತಾವು ಅವಕಾಶ ಕೊಟ್ಟಿದ್ದೀರಿ. ಅವರು ಆತ್ಮಗೌರವದಿಂದ ತಪಾಸಣೆ ಮಾಡಿಕೊಳ್ಳಲಿ, ಇವರೂ ಮಾಡಿಕೊಳ್ಳಲಿ, ನಮ್ಮದೂ ತಪ್ಪಿದ್ದರೆ ನಾವೂ ತಪಾಸಣೆ ಮಾಡಿಕೊಳ್ಳುತ್ತೇವೆ, ರಾಜ್ಯದ ಜನತೆಯ ಸಮೃದ್ಧಿ ದೃಷ್ಟಿಯಿಂದ ನಾವೆಲ್ಲರೂ ಪ್ರಯತ್ನ ಮಾಡೋಣವೆಂದು ಹೇಳುತ್ತಾ, ನಾನು ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದನೆಗಳನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು :— ಧನ್ಯವಾದಗಳು. ನಂಜೇಗೌಡರೇ, ಈಗ ಸಮಯ 2.40 ಆಗುತ್ತಿದೆ, ತಾವು 20 ನಿಮಿಷ ಮಾತನಾಡಿ.

+ ಶ್ರೀ ಹೆಚ್.ಎನ್. ನಂಜೇಗೌಡ (ಬಸವನಗುಡಿ) :— ನಾನು 5 ನಿಮಿಷ ಮಾತನಾಡುತ್ತೇನೆ. ಖಾಲಿ ಖರ್ಚುಗಳನ್ನು ನೋಡಿದರೆ ಉತ್ಸಾಹವೆಲ್ಲಿಂದ ಬರುತ್ತದೆ?

ಶ್ರೀ ವಾಟಾಳ್ ನಾಗರಾಜ್ :— ಬಿಜಾಪುರದ ಗೋಳಗುಮ್ಮಟ ಇದ್ದ ಹಾಗಾಗುತ್ತದೆ. ಇದು ಯಾವಾಗಲೂ ಹೀಗೇ. ಯಾರೂ ಬರುವ ಮಟ್ಟದಲ್ಲಿಲ್ಲ. ಖಾಲಿ ಖುರ್ಚಿಗಳಿಗೇ ಭಾಷಣ ಮಾಡುವುದನ್ನು ಈ ಸದನದಲ್ಲಿ ಕಲಿತುಕೊಳ್ಳಬೇಕು.

ಅಧ್ಯಕ್ಷರು :— ಈಗ 10 ನಿಮಿಷ ಮಾತನಾಡಿ. ನಂತರ, ಸಭೆಯನ್ನು ಮುಂದಕ್ಕೆ ಹಾಕೋಣ. ಮತ್ತೆ, ಸೋಮವಾರ ಮುಂದುವರೆಸೋಣ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ :— ಖಾಲಿ ಖರ್ಚು ನೋಡಿ ಮಾತನಾಡುವುದಕ್ಕೆ ಪ್ರಾಕ್ಟೀಸ್ ಇಲ್ಲವಾದರೆ, ಇಲ್ಲಿಗೆ ಬರುವುದಕ್ಕೆ ಮುಂಚೆ ಮನೆಯಲ್ಲಿ ಅಭ್ಯಾಸ ಮಾಡಿಕೊಂಡು ಬರುವುದು ಒಳ್ಳೆಯದು.

ಅಧ್ಯಕ್ಷರು :— ಅಷ್ಟು ಸಮಯ ಅವರಿಗೆಲ್ಲಿರುತ್ತದೆ?

ಶ್ರೀ ವಾಟಾಳ್ ನಾಗರಾಜ್ :— ಕಾಲ ಇದ್ದರೆ ತಾನೆ? ಅವರಿಗೆ ಬೇರೆ ಬೇರೆ ಕೆಲಸಗಳಿರುವಾಗ ಇದನ್ನು ಮಾಡುತ್ತಾರೆಯೇ?

ಶ್ರೀ ಹೆಚ್.ಎನ್. ನಂಜೇಗೌಡ :— ರಾಜ್ಯಪಾಲರ ಭಾಷಣದ ಮೇಲೆ ನಾವು ಚರ್ಚೆ ಮಾಡುತ್ತಿದ್ದೇವೆ. ರಾಜ್ಯಪಾಲರೆಂದರೆ ಒಬ್ಬ ಕಾನ್ಸ್‌ಟಿಟ್ಯೂಷನಲ್ ಫಂಕ್ಷನರಿ. ನಾವು ರಾಜ್ಯಾಂಗದ ಪ್ರಕಾರ ಪ್ರಮಾಣವಚನ ಸ್ವೀಕಾರ ಮಾಡಿ, ರಾಜ್ಯಾಂಗದತ್ತವಾಗಿ ನಡೆದುಕೊಳ್ಳುತ್ತೇವೆಂದು ಹೇಳಿ ಈ ಸಭೆಗೆ ಬರುತ್ತೇವೆ. ಯಾವುದೇ ಕಾರಣಕ್ಕೂ ಅವರಿಗೆ ಗೌರವ ಕೊಡಬೇಕಾದುದು ನಮ್ಮ ಪ್ರಮಾಣ ವಚನದ ಪ್ರಕಾರ ಆದ್ಯ ಕರ್ತವ್ಯ ಕಾರಣವೇನೆಂದರೆ, ಇದಕ್ಕೊಂದು ಚರಿತ್ರೆಯಿದೆ. ರಾಷ್ಟ್ರದಲ್ಲಿ ರಾಜ್ಯಪಾಲರು ಭಾಷಣ ಮಾಡುವ ಪದ್ಧತಿಯನ್ನು ನಾವೇಕೆ ಅನುಷ್ಠಾನ ಮಾಡಿಕೊಂಡು ಬಂದಿದ್ದೇವೆಂದರೆ, ಪ್ರೆಸಿಡೆಂಟ್ ಸ್ಪೀಚ್ ಇರಬಹುದು, ರಾಜ್ಯಪಾಲರ ಭಾಷಣ ಇರಬಹುದು; ಲೇಟರ್ ಪಾರ್ಟ್ ಆಫ್ 18th ಸೆಂಚುರಿಯಲ್ಲಿ ಗ್ರೇಟ್ ಬ್ರಿಟನ್‌ನಲ್ಲಿ ಆಗ ಮಾನಾರ್ಕಿ ತಾನೇ ಇದ್ದದ್ದು. ಆ ರಾಜರುಗಳ ಜೀವನ ಭೋಗವೂ ಯರ್ರಾಬಿರ್ರಿ ಆಡಳಿತವೂ ಆಗಿತ್ತು. ಅವರ ಭೋಗ ಜೀವನಕ್ಕೆ ಎಷ್ಟೇ ಸಂಪತ್ತಿದ್ದರೂ ಸಾಲದಾಗಿತ್ತು. ಅದಕ್ಕೆ ಅವರು ಸಿಕ್ಕಾಪಟ್ಟೆ ಟ್ಯಾಕ್ಸ್ ಹಾಕುತ್ತಿದ್ದರು.

2.40 ಪಿ.ಎಂ.

For the first time in the history of the world resentment against the palace ಪ್ರಾರಂಭವಾಯಿತು. No taxation without representation. ಪ್ರಾರಂಭವಾಯಿತು. ನಂತರ ಅಲ್ಲಿಂದ ಪ್ರಜಾಪ್ರಭುತ್ವದ ಆರಂಭ ಆಯಿತು. ಮೊದಲು ಮಾನಾರ್ಕ್ ಎಲ್ಲವನ್ನೂ ಮಾಡುತ್ತಿದ್ದು, ತನಗಿಷ್ಟ ಬಂದ ರೀತಿಯಲ್ಲಿ ಟ್ಯಾಕ್ಸ್ ಹಾಕುತ್ತಿದ್ದ, ಪ್ರಜಾಪ್ರಭುತ್ವ ಬಂದ ಮೇಲೆ ಅವನು ಫಿಗರ್ ಹೆಡ್ ಆದ. People representatives, they became the sovereigns. ಅಂದರೆ ಜನತೆ ಸಾರ್ವಭೌಮರಾದರು. ಜನತೆಯ ಪರವಾಗಿ ಜನಪ್ರತಿನಿಧಿಗಳು ಒಂದು policy document ಅನ್ನು ಪ್ರಿಪೇರ್ ಮಾಡುತ್ತಾರೋ ಅದನ್ನು ಈ ಫಿಗರ್ ಹೆಡ್ ಮಾನರ್ಕಿ ಓದತಕ್ಕಂಥ ಪದ್ಧತಿ. ನಾವು ಬ್ರಿಟೀಷ್ ಪಾರ್ಲಿಮೆಂಟರಿ ಸಿಸ್ಟಂಅನ್ನು ಅಡಾಪ್ಟ್ ಮಾಡಿಕೊಂಡಿದ್ದೇವೆ. ಆ ಪ್ರಕಾರ ನಮ್ಮಲ್ಲಿ ರಾಜ್ಯಪಾಲರು ಇಲ್ಲಿ ಫಿಗರ್ ಹೆಡ್, ಒಂದು ಪಾಲಿಸಿ ಡಾಕ್ಯುಮೆಂಟ್‌ನ್ನು ಸರ್ಕಾರ ಕೊಡಬೇಕು; ಆದರೆ ಇಲ್ಲಿ ಏನಾಗಿದೆ ಎಂದರೆ, ಇದು ಪಾಲಿಸಿ ಡಾಕ್ಯುಮೆಂಟ್ ಅಲ್ಲವೇ ಅಲ್ಲ. ಇದು ಒಂದು ರೀತಿಯಲ್ಲಿ ವಾರ್ಷಿಕ ವರದಿ ಇದ್ದ ಹಾಗೆ. ನೀತಿ ನಿರೂಪಣೆ ಪತ್ರವಂತೂ ಅಲ್ಲ. It is not a policy document. ಇದು ಬಹುಶಃ ಯಾರೋ ಒಬ್ಬ ಅಧೀನ ಕಾರ್ಯದರ್ಶಿಯೋ ಹಿಂದಿನ ಎರಡು-ಮೂರು ಭಾಷಣವನ್ನು ನೋಡಿ ಇದನ್ನು ಬರೆಯುವುದು. ಡ್ರೀವ್ ಎಂದು ನಾವೇನು ಹೇಳುತ್ತೇವೆ, ಅದು ಇಲ್ಲ. ಇದು ನಿಮ್ಮ ವ್ಯೂಸ್ ಅಲ್ಲವೇ ಅಲ್ಲ. ಏಕೆಂದರೆ, ಥ್ರಸ್ಟ್ ಇಲ್ಲ ನೋಡಿ. ಇದು ಯಾರೋ ಬರೆದಿರುವುದು. ಈ ಪಾಲಿಸಿ ಡಾಕ್ಯುಮೆಂಟ್ ಅಂದರೆ, ಗ್ರೇಟ್ ಬ್ರಿಟನ್‌ನಲ್ಲಿ ಪಾರ್ಲಿಮೆಂಟ್‌ನ ಸಿಸ್ಟಮ್ ಹೇಗೆಂದರೆ, This policy document always reflects the views and opinion of the people. ಜನರ ಅಭಿಪ್ರಾಯವನ್ನು ರಿಫ್ಲೆಕ್ಟ್ ಮಾಡತಕ್ಕಂಥದ್ದು ಇರಬೇಕು. ಈಗ ನಾವು ಇದನ್ನು ಅನುಸರಿಸಿಕೊಂಡು ಜನಗಳ ವ್ಯೂಸ್ ಅನ್ನು ನಾವು ರಿಫ್ಲೆಕ್ಟ್ ಮಾಡುತ್ತಿಲ್ಲ. We have distorted the democratic system. ಇದನ್ನು ನೋಡಿದರೆ, ನಮಗೆ the credit of bringing democratic system goes to the people of Great Britain and the credit of distorting the democratic system goes to Mr. J.H. Patel Ministry.

SRI MALLIKARJUNA KHARGE :— Senior Leader like Mr. Nange Gowda telling this, for the first time in four years three months, really I an very happy..now things will improve henceforth.

ಅಧ್ಯಕ್ಷರು :— ನಾನು ನಿನ್ನೆ ಪ್ರಕಟಣೆ ಮಾಡಿದ್ದೇನೆ ಅವರು ಅನ್ ಅಟ್ಯಾಚ್ಡ್ ಎಂದು.

ಶ್ರೀ ಹೆಚ್.ಎನ್. ನಂಜೇಗೌಡ :— ಈ ವರದಿಗೆ ಏನು ಬೆಲೆ ಕೊಡಬೇಕೋ ಅಷ್ಟನ್ನು ಮಾತ್ರ ನಾನು ಕೊಡುತ್ತೇನೆ. ಇದು ಏಕೆ ಈ ರೀತಿ ಆಯಿತು? ಸರ್ಕಾರದವರು ಏನು ಮಾಡುತ್ತಾರೆಂದರೆ, ಜನಗಳ ಬೃಹತ್ ಸಮಸ್ಯೆ ಇವುಗಳನ್ನು ಬಗೆಹರಿಸುವ ಕಡೆಗೆ ಗಮನ ಕೊಡುವುದಿಲ್ಲ. ಇದಕ್ಕೊಂದು ಚಿಕ್ಕ ಉದಾಹರಣೆ ಕೊಡುವುದಾದರೆ ಮಾನ್ಯ ಮುಖ್ಯಮಂತ್ರಿಗಳು ಸಾಮಾನ್ಯವಾಗಿ ಹೇಳುತ್ತಿರುತ್ತಾರೆ, ಅದೇನೆಂದರೆ, ನಾವು ಇಷ್ಟೊಂದು ಪವರ್‌ನ್ನು ಅಡಿಷನಲ್‌ಆಗಿ ಜನರೇಟ್ ಮಾಡಿದ್ದೇವೆ, ಹಾಗೆ, ಹೀಗೆ, ಎಂದು ಹೇಳುತ್ತಿರುತ್ತಾರೆ. ಅಧ್ಯಕ್ಷರೆ, ಊಟ ಮಾಡಿರುವುದಕ್ಕೆ ಏನು ಗುರುತು ಎಂದರೆ ಹೊಟ್ಟೆ ತುಂಬಬೇಕು. ಇವರು ಅಡಿಷನಲ್ ಪವರ್‌ನ್ನು ಜನರೇಟ್ ಮಾಡಿದ್ದೇವೆಂದು ಹೇಳುವುದಾದರೆ, ಇದರ ಗುರುತು ಏನಾಗಬೇಕು ಎಂದರೆ ಐ.ಪಿ. ಸೆಟ್‌ಗಳು ಚೆನ್ನಾಗಿ ನಡೆಯಬೇಕು, ಎಲ್ಲಾ ಮನೆಗಳಲ್ಲಿ ಬೆಳಕು ಚೆನ್ನಾಗಿ ಕಾಣಬೇಕು ಅಂದರೆ ಕರೆಂಟ್ ಯಾವಾಗಲೂ ಇರಬೇಕು ಅಲ್ಲವೇ? ಇವುಗಳು ಇಲ್ಲದಿದ್ದರೆ ನಾವು ಹೇಗೆ ಇವರನ್ನು ನಂಬಬೇಕು? ಏಕೆ ಈ ರೀತಿ ಆಗಿದೆ, ನಿಮ್ಮ ಸರ್ಕಾರವನ್ನು ಯಾರು ನಡೆಸುತ್ತಿದ್ದಾರೆ? ಈಗ political exigencies ಜಾಸ್ತಿಯಾಗಿ ಬಿಟ್ಟಿವೆ. ಇದೊಂದು ರೀತಿಯಲ್ಲಿ ಹೇಳುವುದಾದರೆ ಈ ಸರ್ಕಾರ ಅಧಿಕಾರಶಾಹಿ ಸರ್ಕಾರ ಎಂದು ಹೇಳಬಹುದು. ವಾಟರ್ ಬೋರ್ಡ್‌ಗೆ ಒಬ್ಬ ಪಾಳೇಗಾರ, ಮತ್ತೊಂದಕ್ಕೆ ಮತ್ತೊಬ್ಬರು ಪಾಳೇಗಾರ, ಇದು ಒಂದು ರೀತಿಯಲ್ಲಿ ಪಾಳೇಗಾರಿಕೆ ಪದ್ಧತಿ ಎನ್ನಬಹುದು. ಅಧ್ಯಕ್ಷರೆ, ತಮ್ಮ ಅನುಮತಿಯನ್ನು ಪಡೆದು ಇದರ ಹಿಂದಿನ ಕಥೆಯನ್ನು ಸ್ವಲ್ಪ ಹೇಳಿಬಿಡುತ್ತೇನೆ. Warren Hastings, the First Governor General of India ಕಾಲದಲ್ಲಿ ಈ ಸ್ಯಾಲರಿ ಸಿಸ್ಟಮ್ ಬಂತು, ಅದಕ್ಕಿಂತ ಮುಂಚೆ ಕಮೀಷನ್ ಸಿಸ್ಟಮ್ ಇತ್ತು. ಈ salary system and code of conduct ಈಗ ಎರಡೂ ಇದೆ ಎಂದು ಹೇಳುತ್ತಾರೆ ನಾನು ಇದನ್ನು ಪ್ರಶ್ನೆ ಮಾಡುವುದಿಲ್ಲ. ಈ ಪದ್ಧತಿ ಏಕೆ ತೆಗೆದುಕೊಂಡು ಬಂದ? ಅಂದರೆ ಸ್ವತಂತ್ರ ಪೂರ್ವದಲ್ಲಿ ಈ ಸಿವಿಲ್ ಸರ್ವೀಸ್ ಏಕೆ ಬಂತು ಎಂದರೆ, to command obedience, to collect revenue to treat as slaves, to command us, not to serve us ನಮಗೆ ಸಹಾಯ ಮಾಡುವುದಕ್ಕೆ ಅಥವಾ ನಮಗೆ ಸೇವೆ ಮಾಡುವುದಕ್ಕಲ್ಲ. ಇದು ಬಂದಂಥ ಮೂಲ ಉದ್ದೇಶವೇ ಬೇರೆ. ಆ ಸಿವಿಲ್ ಸರ್ವೀಸ್‌ನಲ್ಲಿ ಡೆವಲಪ್ ಆಗಿರತಕ್ಕಂಥ ಕಲ್ಚರ್ ಬೇರೆ ಇತ್ತು.

MR. SPEAKER :— Civil Services was introduced to serve the interests of a Company, which owed its allegiance to the Imperial Majesty.

SIR H.N. NANJE GOWDA :— That means to explcit the people of this nation.

MR. SPEAKER :— the objectives of the country were not there before them. They were loyal only to the Company. They were servants of the Company.

ಶ್ರೀ ಹೆಚ್.ಎನ್. ನಂಜೇಗೌಡ :— ಸ್ವತಂತ್ರ ಬಂದ ಮೇಲೆ ಏನು ಮಾಡಬೇಕಾಗಿತ್ತು ಎಂದರೆ ಈ ಸರ್ವೀಸ್ ಅನ್ನು ತೆಗೆದು ಹಾಕಬೇಕಾಗಿತ್ತು. ಏಕೆಂದರೆ, ಇವತ್ತು ಆಫೀಸರ್, ಒಬ್ಬ ಕ್ಲರ್ಕ್ ಅವನ ಮೇಲೆ ಸೆಕ್ಷನ್ ಆಫೀಸರ್, ನಂತರ ಅಂಡರ್ ಸೆಕ್ರೆಟರಿ, ಡೆಪ್ಯೂಟಿ ಸೆಕ್ರೆಟರಿ, ಅಡಿಷನಲ್ ಸೆಕ್ರೆಟರಿ, ಜಾಯಿಂಟ್ ಸೆಕ್ರೆಟರಿ-1, ಸೆಕ್ರೆಟರಿ-2, ಇವರು ಎಲ್ಲಾ ಏನು ಮಾಡುತ್ತಾರೆಂದರೆ ಅಂಡರ್ ಸೆಕ್ರೆಟರಿ ಬರೆದಿರುವ ನೋಟ್ ಮೇಲೆ ಸಹಿ ಹಾಕುತ್ತಾರೆ. ಇಷ್ಟಕ್ಕೆಲ್ಲಾ ಇಬ್ಬರು ಇದ್ದರೆ ಸಾಕಾಗುತ್ತಿತ್ತು. ಒಬ್ಬ ಕ್ಲರ್ಕ್ ಮತ್ತೊಬ್ಬ ಸೆಕ್ರೆಟರಿ ಸಾಕಾಗುತ್ತಿತ್ತು.

ಅಧ್ಯಕ್ಷರು :— ಅಂಡರ್ ಸೆಕ್ರೆಟರಿ ಎಂದರೆ ಅವನ ಕೆಳಗೆ ಮತ್ತೆ ಮತ್ತೊಬ್ಬ ಮೇಲೆ ತಾನೆ..

ಶ್ರೀ ಹೆಚ್.ಎನ್. ನಂಜೇಗೌಡ :— ಇವರ ಉದ್ದೇಶ ಏನಾದರೂ ಬದಲಾವಣೆ ಆಗಿದೆಯೇ? ಸ್ವತಂತ್ರ ಪೂರ್ವದಲ್ಲಿ ಈ ಸರ್ವೀಸ್‌ಗೆ ಏನೊಂದು ಕಲ್ಚರ್ ಇತ್ತೋ ಈ ಕಲ್ಚರ್ ಈಗ ಹೋಗಿದೆಯೋ ಏನೋ? ಇಲ್ಲೊಂದು ಪುಸ್ತಕ ಇದೆ ತಾವು ಇದನ್ನು ಓದಿದಿರೋ ಇಲ್ಲವೋ ನನಗೆ ಗೊತ್ತಿಲ್ಲ. ಇದರಲ್ಲಿ ಬಹಳ ಚೆನ್ನಾಗಿ ಇದೆ ಎಲ್ಲವನ್ನೂ ಹೇಳುವುದಕ್ಕೆ ಹೋಗುವುದಿಲ್ಲ ಕೆಲವು ಅಂಶಗಳನ್ನು ಮಾತ್ರ ಇಲ್ಲಿ ಹೇಳುತ್ತೇನೆ IAS PROFILE - Myths & Realities. B. Singh Asha Bhandarkar. Professor & Dean, Indian Institute of Management Bangalore, Associate Professor & Chair person Human Resource Management Division, Institute of Public Enterprise, Hyderabad.

ಅಧ್ಯಕ್ಷರು :— ಲೇಖಕನ ಹೆಸರು ಹೇಳಿದರೆ ನಾನು ನಂತರ ತರಿಸಿಕೊಂಡು ಓದುತ್ತೇನೆ.

ಶ್ರೀ ಹೆಚ್.ಎನ್. ನಂಜೇಗೌಡ :— ಅಧ್ಯಕ್ಷರೇ, Different walks of life. ಇದರಲ್ಲಿ ಐ.ಪಿ.ಎಸ್., ಐ.ಎ.ಎಸ್. ರಾಜಕಾರಣಿಗಳು ಇವರ ಒಪಿನಿಯನ್ ಎಲ್ಲಾ ಕೇಳುತ್ತಾರೆ.

``The image of IAS perceived by other professional groups - politicians, academicians, technocrats and Police, presents a highly negative picutre. These four groups see IAS Professionals as projecting self also an export on most things showing too much concern for own career besides being self-opinionated, power hundry shrewed and manipuilative, procedure and rule focussed and arrogant.

In contrast, positive qualities like being understanding and helpful, conscientious, trustworthy, risk-taking, innovative and creative visionary and transformational, respecting others competence and capabilities and treating others with dignity are perceived to ve fairly low in the behaviour profile of IAS.

In other words, the prepondenant image of IAS group is characterised by conceit, selfishness for career advancement and displaying scant respect for others competence.

On the basis of the personality related findings. one can safely say that this profile is suitable one for the maintenance role i.e. law and order and revenue collection and other routine administrative posts.

This Profile however is unsuitable for developmental administration, Corporate management, management of academic institutions and R & D Organisations, Unfortunately, these are the very sectors, which are increasingly being manned and managed by the IAS"

ಎಲ್ಲಾ ಕಡೆ ಇವರೇ ಬರುವುದಕ್ಕೆ ಹಿಡಿದಿದ್ದಾರೆ ಇರಲಿ. ಅಧ್ಯಕ್ಷರೇ, ಇನ್ನು ಒಬ್ಬರು ಮಹನೀಯರು ಹೇಳತಕ್ಕಂಥದ್ದು, ಶ್ರೀ ಧರ್ಮವೀರ.

The very famous I.C.S Officer, who was our Governor.
"Man and Development" Vol.I No.4 page 66:

ನಾನು ಒಂದು ಪ್ಯಾರಾವನ್ನು ಓದುತ್ತೇನೆ. ಅಂದರೆ ಇವರು ಬದಲಾವಣೆಯಾಗಿದ್ದಾರೆಯೇ ಎಂದು

" However, a great more needs to be done is the Civil Services are to have desired social orientation and professionalism. There are tremendous delays in the disposal of the work. The checks and balances the British had evolved to suti the requirements of the Colonial Administration, continue to operate and are now proving as hinderances in the disposal of the owrk, impending development and achievement of the goal of socio-economic progress"

ಇನ್ನೊಬ್ಬ ಹೆಸರಾಂತ ಐ.ಸಿ.ಎಸ್. ಆಫೀಸರ್ ಹೇಳುತ್ತಾರೆ. ಇವರು ಶ್ರೀ ಆರ್.ಪಿ. ನರೋನಾ,

"Man and Development" Vol.II No.1, page 52:

"The top echelons of the civil service suffer from a carefully concealed superiority complex, which is probably based on adequate grounds. Neverthless, it is dangerous for the country however good they be, they do not know what th people wants, because the people do not tell them and however well meaning they may be, they are not responsible to the people. They are only responsible to the Government. These two things - what the people

wants and being responsible to the people, are precisely what democracy is all about.

ಆ ಎರಡೂ ಇಲ್ಲ ಇವರಿಗೆ, ಇವರ ಕೈಗೆ ಇವತ್ತು ಪ್ರಜಾತಂತ್ರ ವ್ಯವಸ್ಥೆ ಕೊಟ್ಟಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಜೆ.ಹೆಚ್. ಪಟೇಲ್‌ರು ಇದ್ದರೆ ಚೆನ್ನಾಗಿ ಇತ್ತು. ಪೊಲಿಟಿಕಲ್ ಎಕ್ಸ್‌ಪೀರಿಯನ್ಸ್ ಇವರಿಗೆ; political compulsion 50 ಜನರನ್ನು ಮಂತ್ರಿ ಮಾಡಿದ್ದಾರೆ. ನಾನು ಮುಖ್ಯ ಮಂತ್ರಿಗಳನ್ನು ಬಿಟ್ಟು ಹೇಳುತ್ತಿದ್ದೇನೆ. ಅವರೂ ಸೇರಿದರೆ 51 ಆಗುತ್ತದೆ. ನಾನು ರಾಷ್ಟ್ರಪಿತ ಮಹಾತ್ಮಾಗಾಂಧೀಜಿಯವರು ಹೇಳಿದ ಒಂದು ಮಾತನ್ನು ಹೇಳುತ್ತೇನೆ. ಈಗ ಸರ್ಕಾರ ಎಂದರೆ ಒಂದು ಟ್ರಸ್ಟ್, ನಾವು ಟ್ರಸ್ಟೀಸ್. ಈ ಕಾನ್ಸೆಪ್ಟ್ ಎಲ್ಲಿಂದ ಬಂತು? ಅಧ್ಯಕ್ಷರೇ, ಇದು ದೇವಸ್ಥಾನದಿಂದ ಬಂತು. ಧರ್ಮದರ್ಶಿಗಳು ದೇವರು. ಈ ಧರ್ಮದರ್ಶಿಗಳ ಕೆಲಸ ಏನೆಂದರೆ ಪ್ರಾಮಾಣಿಕವಾಗಿ ದೇವರಲ್ಲಿ ಭಕ್ತಿ ಇಟ್ಟು ದೇವರಿಗೆ ಬಂದಿರುವ ಒಡವೆ ಮತ್ತು ದುಡ್ಡು ಜೋಪಾನ ಮಾಡಿ ಅಕೌಂಟ್ ಬರೆದು ಹೋಗತಕ್ಕಂಥದ್ದು. ಈ ಸರ್ಕಾರದ ದೇವಸ್ಥಾನದಲ್ಲಿ ದೇವರುಗಳ ಸೇವೆ ಮಾಡತಕ್ಕಂಥ ಈ ಧರ್ಮದರ್ಶಿಗಳು ಇದ್ದಾರಲ್ಲಾ, ಇವರು ಎಂಥವರು ಗೊತ್ತೇ ವಾಟಾಳ್ ನಾಗರಾಜ್‌ರವರೇ, ಒಬ್ಬ ದೇವರ ದುಡ್ಡು ಕದಿಯುತ್ತಾನೆ, ಇನ್ನೊಬ್ಬರು ಒಡವೆ ಕದಿಯುತ್ತಾರೆ, ಇನ್ನೊಬ್ಬ ದೇವರ ಮೂರ್ತಿಯನ್ನೇ ಕದ್ದು ಮಾರುತ್ತಾರೆ. ಇವತ್ತು ಈ ರಾಷ್ಟ್ರದಲ್ಲಿ ಇಂತಹ ವ್ಯವಸ್ಥೆ ಆಗುತ್ತಿದೆ. ನೀವು ಇದಕ್ಕೆ ಹೊರತಲ್ಲ. ಮುಂದೆ ಅದು ಹೇಗಾಯಿತು ಅದಕ್ಕೆ ನಾನು ಬರುತ್ತೇನೆ. ಜನ ಹಿತವನ್ನು ಕಾಪಾಡತಕ್ಕಂಥ ನೀವು...

ಶ್ರೀ ಎಂ. ಸಿ. ನಾಣಯ್ಯ :— ಈ ದೇವಸ್ಥಾನದ ಸಂಸ್ಕೃತಿಯಿಂದ ನಿಮಗೆ ಏನಾದರೂ ತೊಂದರೆಯಾಯಿತಾ?

ಶ್ರೀ ವಾಟಾಳ್ ನಾಗರಾಜ್ :— ಗರ್ಭಗುಡಿಗಳು ಬೇರೆ, ಧರ್ಮದರ್ಶಿಗಳೇ ಬೇರೆ.

ಶ್ರೀ ಹೆಚ್.ಎನ್. ನಂಜೇಗೌಡ :— ಜನಹಿತವನ್ನು ಕಾಪಾಡುವ ಒಳ್ಳೆಯ ವಾರಸುದಾರರು ಇವರು. ನಮ್ಮ ಜೆ.ಹೆಚ್. ಪಟೇಲರದ್ದು ಆಲ್ ಟೈಮ್ ರೆಕಾರ್ಡ್. ಇವರ ರಾಜಕೀಯಕ್ಕೆ ತಕ್ಕಂಥತೆ ಮಂತ್ರಿಗಳು. ಉದ್ಯೋಗ ಮತ್ತು ತರಬೇತಿ ಇಲಾಖೆಗೆ ಒಬ್ಬ ಮಂತ್ರಿ ಎಂಪ್ಲಾಯಿಮೆಂಟ್ ಎಕ್ಸ್‌ಚೇಂಜ್‌ಗೆ ಮಂತ್ರಿ ಅಂದರೆ ಅವರು ಹಾಕಿದರು ಎಂದು...

ಅಧ್ಯಕ್ಷರು :— ಮಾನ್ಯ ನಂಜೇಗೌಡರೇ, ನಾನು ಬೆಳಗಾಂಗೆ ಹೋಗಬೇಕಾಗಿದೆ. ನಾನು ಇದೇ ಸಂತೋಷದಲ್ಲಿ ಬೆಳಗಾಂಗೆ ಹೋಗುತ್ತೇನೆ.

ಅಧ್ಯಕ್ಷರು :— ಈಗ ಸದನವನ್ನು ಮುಂದೂಡುತ್ತಿದ್ದೇನೆ. ಸದನವು ದಿನಾಂಕ 15-3-99ರಂದು ಬೆಳಿಗ್ಗೆ 10.00 ಗಂಟೆಗೆ ಪುನಃ ಸೇರುವುದು

(ಸದನವು ಮಧ್ಯಾಹ್ನ 2 ಗಟಿ 58 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ ಸೋಮವಾರ ದಿನಾಂಕ 15 ಮಾರ್ಚ್ 1999 ರಂದು ಬೆಳಿಗ್ಗೆ 10.00 ಗಂಟೆಗೆ ಸೇರಲು ನಿಶ್ಚಯಿಸಿತು).

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.)

ಕಾ.ಸೂ - 8389 - ಸಶಾಮು, ತುಮಕೂರು, 350 ಪುಸ್ತಕಗಳು, ದಿ : 9-8-2000.